ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 16 ಶನಿವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 209 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬಕ್ಕೆ ಮುಡಾದಿಂದ 14 ನಿವೇಶನ ಹಂಚಿಕೆ; ಪ್ರಾಥಮಿಕ ತನಿಖೆಯಲ್ಲಿ ಎಲ್ಲಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ 'ಹಸ್ತಕ್ಷೇಪ'ದ ಪುರಾವೆ ಇಲ್ಲ; ಆದರೆ

ಅಧಿಕಾರಿಗಳದ್ದೆ ಮಹಾಲೋಪ

ಲೋಕಾಯುಕ್ತ ತನಿಖಾ 'ಸದ್ಯದ ವರದಿ'; ಲೋಕಾಯುಕ್ತ ಐಜಿ ಸುಬ್ರಹ್ಮಣ್ಯೇಶ್ವರ ರಾವ್ ಅವರನ್ನು ಭೇಟಿಯಾಗಿ ಎರಡು ಹಂತದ ತನಿಖಾ ವರದಿ, ದಾಖಲೆ ಸಲ್ಲಿಸಿದ ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ್; ಅಂತಿಮವಾಗಿ ಡಾ.ನಟೇಶ್, ದಿನೇಶ್‌ಕುಮಾರ್ ತನಿಖೆಗೆ ಇನ್ನು ಅನುಮತಿಸದ ಮುಖ್ಯ ಕಾರ್ಯದರ್ಶಿ


ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ನ.15(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) 14 ಬಿಡಿ ನಿವೇಶನಗಳ ಹಂಚಿಕೆಯಲ್ಲಿ ಅಧಿಕಾರಿಗಳು ಭಾರೀ ಲೋಪ ಎಸಗಿದ್ದಾರೆ ಎಂದು ಲೋಕಾಯುಕ್ತ ತನಿಖಾ 'ಸದ್ಯದ ಸ್ಥಿತಿ' (ಸ್ಟೇಟಸ್ ರಿಪೋರ್ಟ್) ವರದಿಯಲ್ಲಿ ತಿಳಿಸಿದೆ.

ನ್ಯಾಯಾಲಯದ ಆದೇಶದಂತೆ ಬಿಡಿ ನಿವೇಶನಗಳ ಹಂಚಿಕೆ ಕುರಿತು ತನಿಖೆ ನಡೆಸುತ್ತಿರುವ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, ಸದ್ಯದ ತನಿಖಾ ಒಂದು ಹಂತದ ವರದಿಯನ್ನು ಕೇಂದ್ರ ಕಚೇರಿಗೆ ತಲುಪಿಸಿದ್ದಾರೆ.

ಇತ್ತೀಚೆಗೆ ಲೋಕಾಯುಕ್ತ ಐಜಿ ಸುಬ್ರಹ್ಮಣ್ಯೇಶ್ವರ ರಾವ್ ಅವರನ್ನು ಭೇಟಿ ಮಾಡಿದ ಲೋಕಾಯುಕ್ತ ಎಸ್‌ಪಿ ಉದೇಶ್ ಅವರು, ತನಿಖೆ ಆರಂಭದಿಂದ ಇದುವರೆಗೂ ನಡೆದಿರುವ ಎಲ್ಲಾ ಹಂತದ ತನಿಖಾ ವರದಿಯ ಮಾಹಿತಿ ಮತ್ತು ದಾಖಲೆಗಳನ್ನು ಸಲ್ಲಿಸಿದ್ದಾರೆ.

ಆದರೆ, ಈ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಸ್ತಕ್ಷೇಪ ಮಾಡಿರುವುದಕ್ಕೆ ಎಲ್ಲಿಯೂ ದಾಖಲೆಗಳಿಲ್ಲ, ಅವರ ಪಾತ್ರ ಇದೆ ಎಂಬುದು ಪ್ರಾಥಮಿಕ ತನಿಖೆಯಿಂದ ಎಲ್ಲಿಂಯೂ ಕಂಡು ಬಂದಿಲ್ಲ ಎಂಬ 'ಸದ್ಯದ ಸ್ಥಿತಿ' ವರದಿ ನೀಡಿದ್ದಾರೆ. ನಿವೇಶನ ಹಂಚಿಕೆ ಪ್ರಕರಣವನ್ನು ಮೂರು ಭಾಗಗಳಾಗಿ ವಿಂಗಡಿಸಿ ತನಿಖೆ ನಡೆಸಿದ್ದು, ಈಗಾಗಲೇ ಎರಡು ಭಾಗ ಪೂರ್ಣಗೊಂಡಿದೆ, ಮೂರನೇ ಭಾಗದ ತನಿಖೆ ಯಾವ ರೀತಿ ನಡೆಸಬೇಕು ಎಂಬ ಬಗ್ಗೆ ಹಿರಿಯ ಅಧಿಕಾರಿಗಳಿಂದ ಉದೇಶ್, ಸಲಹೆ ಮತ್ತು ಮಾರ್ಗದರ್ಶನ ಪಡೆದಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ. ನಿವೇಶನಗಳ ಹಂಚಿಕೆ ಸಂದರ್ಭದಲ್ಲಿ ಆಯುಕ್ತರಾಗಿ ಸೇವೆ ಸಲ್ಲಿಸಿದ್ದ ಡಾ. ನಟೇಶ್ ಮತ್ತು ದಿನೇಶ್ ಕುಮಾರ್ ಅವರುಗಳ ವಿಚಾರಣೆ ಬಾಕಿ ಇದೆ. ಉಳಿದಂತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರ ಮತ್ತು ಅಧಿಕಾರೇತರರಿಂದ ದಾಖಲೆ ಮತ್ತು ಮಾಹಿತಿ ಸಂಗ್ರಹಿಸಿರುವ ಬಗ್ಗೆ ವರದಿಯಲ್ಲಿ ತಿಳಿಸಲಾಗಿದೆ.


ಲೋಕಾಯುಕ್ತ ಎಸ್‌ಪಿ ಉದೇಶ್



ಇನ್ನು ಅನುಮತಿಸದ ಸಿಎಸ್: ಹಿರಿಯ ಅಧಿಕಾರಿಗಳ ವಿಚಾರಣೆ ನಡೆಸಲು ಅನುಮತಿ ನೀಡುವಂತೆ ಮುಖ್ಯ ಕಾರ್ಯದರ್ಶಿ ಅವರಿಗೆ ಮೂರು ವಾರಗಳ ಹಿಂದೆಯೇ ಪತ್ರ ಬರೆದಿದ್ದರೂ, ಇದುವರೆಗೂ ಅವರಿಂದ ನಮಗೆ ಇನ್ನು ಅನುಮತಿ ದೊರೆತಿಲ್ಲ.

ಅನುಮತಿ ದೊರೆತ ತಕ್ಷಣವೇ ತಾವು ಹಿರಿಯ ಅಧಿಕಾರಿಗಳನ್ನು ಕರೆಸಿ ಅವರಿಂದ ತನಿಖೆಗೆ ಅಗತ್ಯ ಇರುವ ಮಾಹಿತಿ ಪಡೆದುಕೊಳ್ಳುವುದಾಗಿಯೂ ತಿಳಿಸಿದ್ದಾರೆ.

ಮೈಸೂರು ಲೋಕಾಯುಕ್ತ ವರಿಷ್ಠ ಅಧಿಕಾರಿ ಸಿದ್ಧಪಡಿಸಿರುವ ಸದ್ಯದ ಸ್ಥಿತಿ ವರದಿ; ವಿವಾದಿತ ಜಮೀನು ಡಿ ನೋಟಿಫೈಗೆ ಮೊದಲು ದೇವರಾಜು ತಂದೆಯಿಂದ ದೇವರಾಜು ಸಹೋದರನಿಗೆ, ನಂತರ ದೇವರಾಜುಗೆ ಬಂದಿತ್ತು ಆದರೆ, ಜಮೀನನ್ನು ಕುಟುಂಬಸ್ಥರೇ ವರ್ಗಾವಣೆ ಮಾಡಿಕೊಂಡಿದ್ದರು. ಜಮೀನು ಮಾಲೀಕತ್ವ ವರ್ಗಾವಣೆ ಬಗ್ಗೆ ಸರ್ಕಾರಿ ದಾಖಲೆಯಲ್ಲಿ ನಮೂದಿಸದೇ ಇರುವುದು ಅವರ ಕುಟುಂಬಸ್ಥರು ಮಾಡಿದ್ದ ನಿರ್ಲಕ್ಷ್ಯ ಎಂಬುದಾಗಿ ಮಾಹಿತಿ ನೀಡಿದ್ದಾರೆ.

ದೇವರಾಜು ತನಗೆ ಬಂದ ಕೃಷಿ ಭೂಮಿಯನ್ನು ಮಲ್ಲಿಕಾರ್ಜುನಸ್ವಾಮಿ ಎಂಬುವರಿಗೆ ಮಾರಾಟ ಮಾಡಿದ್ದರು. ಅವರು ಜಮೀನನ್ನು ಭೂಪರಿವರ್ತನೆ ಮಾಡಿಸಿಕೊಂಡಿದ್ದರು. ಮುಡಾ ಹಾಗೂ ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗಳು ಭೂಪರಿವರ್ತನೆ ಬಗ್ಗೆ ಸರಿಯಾದ ಪರಿಶೀಲನೆ ಮಾಡಿಲ್ಲ. ಪರಿಶೀಲನೆ ● 9ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ ಪರೀಕ್ಷಾ ನೋಂದಣಿ ದಿನಾಂಕ ವಿಸ್ತರಣೆ

ಬೆಂಗಳೂರು: 2025ನೇ ಮಾರ್ಚ್ ತಿಂಗಳಿನಲ್ಲಿ ಎಸೆಸೆಲ್ಸಿ ಪರೀಕ್ಷೆ–1 ನಡೆಯಲಿದ್ದು, ರಾಜ್ಯದ ಎಲ್ಲ ಶಾಲಾ–ಕಾಲೇಜುಗಳಿಂದ ಹಾಜರಾಗುವ ವಿದ್ಯಾರ್ಥಿಗಳನ್ನು ನೋಂದಾಯಿಸಲು ನ. 20ರವರೆಗೆ ಹಾಗೂ ಶುಲ್ಕ ಪಾವತಿಸಲು ನ. 30ರವರೆಗೆ ಅವಧಿ ವಿಸ್ತರಿಸಲಾಗಿದೆ.

ರಾಜ್ಯದ ಸರಕಾರಿ ಹಾಗೂ ಮಾನ್ಯತೆ ಪಡೆದ ಅನುದಾನಿತ, ಖಾಸಗಿ ಶಾಲೆಗಳಿಂದ ಹಾಜರಾಗುವ ಶಾಲಾ ವಿದ್ಯಾರ್ಥಿಗಳು, ಖಾಸಗಿ ವಿದ್ಯಾರ್ಥಿಗಳು ಮತ್ತು ಪುನರಾವರ್ತಿತ ಅಭ್ಯರ್ಥಿಗಳ ಮಾಹಿತಿಯನ್ನು ನ. 11ರ ಒಳಗೆ ಆನ್‌ಲೈನ್ ಮೂಲಕ ನೋಂದಾಯಿಸಲು ಸೂಚಿಸಲಾಗಿತ್ತು. ಕೆಲವು ಶಾಲೆಗಳಿಂದ, ಪಾಲಕರಿಂದ ದೂರವಾಣಿ ಮೂಲಕ ವಿದ್ಯಾರ್ಥಿಗಳ ನೋಂದಣಿ ದಿನಾಂಕ ಮತ್ತೆ ವಿಸ್ತರಿಸಲು ಕೋರಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ನೋಂದಣಿ ದಿನಾಂಕವನ್ನು ನ. 20ರವರೆಗೆ ವಿಸ್ತರಿಸಲಾಗಿದೆ. ಚಲನ್ ಅನ್ನು ಬ್ಯಾಂಕ್‌ಗೆ ಜಮೆ ಮಾಡಲು ನ. 30 ಹಾಗೂ ಚಲನ್ ಮುದ್ರಿಸಿಕೊಳ್ಳಲು ನ.26 ಕೊನೆಯ ದಿನವಾಗಿದೆ.


ಶಬರಿಮಲೆ ಅಯ್ಯಪ್ಪಸ್ವಾಮಿ ಮಂಡಲ ಪೂಜೆ, ದರ್ಶನ ಆರಂಭ



ತಿರುವನಂತಪುರಂ, ನ.15– ಇಂದಿನಿಂದ (ನ.15) ಶಬರಿಮಲೆ ಅಯ್ಯಪ್ಪ ಸ್ವಾಮಿ ದರ್ಶನ ಆರಂಭವಾಗಿದ್ದು, ಡಿ.25ರವರೆಗೆ ದರ್ಶನಕ್ಕೆ ಅವಕಾಶ ನೀಡಲಾಗಿದೆ. ದರ್ಶನ ಅವಧಿಯನ್ನು 18 ಗಂಟೆಗೆ ವಿಸ್ತರಿಸಲಾಗಿದ್ದು, ಪ್ರತಿನಿತ್ಯ 70,000 ಜನರಿಗೆ ದರ್ಶನ ಅವಕಾಶ ನೀಡಲು ದೇವಸ್ಥಾನದ ಆಡಳಿತ ಮಂಡಳಿ ನಿರ್ಧರಿಸಿದೆ. ಜೊತೆಗೆ ಜನಸಂದಣಿ ಹೆಚ್ಚಾದಲ್ಲಿ ಸಮಯವನ್ನು ಅರ್ಧ ಗಂಟೆ ವಿಸ್ತರಿಸಲು ಚಿಂತಿಸಿದೆ. ಸುಮಾರು 60,000 ಜನರು ವರ್ಚುವಲ್ ಸರತಿ ವ್ಯವಸ್ಥೆಯ ಮೂಲಕ ದರ್ಶನ ಪಡೆಯುತ್ತಾರೆ. ಇನ್ನೂ 10,000 ಜನರು ಸ್ಥಳದಲ್ಲೇ ಬುಕ್ಕಿಂಗ್ ಮಾಡಲು ಅನುಮತಿಸಲಾಗಿದೆ. ಈ ಕುರಿತು ಶಬರಿಮಲೆ ದೇವಸ್ಥಾನ ಮಂಡಳಿ ಅಧ್ಯಕ್ಷ ಪಿ.ಎಸ್.ಪ್ರಶಾಂತ್ ಮಾತನಾಡಿ, ತೀರ್ಥೋದ್ಭವದ ಆರಂಭದಿಂದ ಪ್ರತಿದಿನ ಬೆಳಗ್ಗೆ 3ರಿಂದ ಮಧ್ಯಾಹ್ನ 1ರವರೆಗೆ ಮತ್ತು ಮಧ್ಯಾಹ್ನ 3ರಿಂದ ರಾತ್ರಿ 11ರವರೆಗೆ ದರ್ಶನಕ್ಕೆ ಅವಕಾಶ ನೀಡಲಾಗುವುದು. ಇದರಿಂದಾಗಿ ಭಕ್ತರ ನುಕುನುಗ್ಗಲನ್ನು ಕಡಿಮೆಗೊಳಿಸುವ ಉದ್ದೇಶವನ್ನು ಹೊಂದಿದೆ ● 9ನೇ ಪುಟಕ್ಕೆ

ಹೆಚ್‌ಡಿ ಕೋಟೆ ಅರಣ್ಯದಲ್ಲಿನ ಸಚಿವ ಕೆ.ಜೆ.ಜಾರ್ಜ್ ಪುತ್ರನ ಜಮೀನು ಪ್ರವೇಶಕ್ಕೆ ಅರಣ್ಯ ಇಲಾಖೆ ನಿರ್ಬಂಧ

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್



ಬೆಂಗಳೂರು, ನ.15–ಇಂಧನ ಸಚಿವರಾಗಿರುವ ಕೆ.ಜೆ.ಜಾರ್ಜ್ ಪುತ್ರ ರಾಣಾ ಜಾರ್ಜ್ ಅವರು ಹೆಚ್.ಡಿ. ಕೋಟೆಯ ಬಳಿ ಅರಣ್ಯದೊಳಗೆ ಕೃಷಿ ಸಂಬಂಧಿತ ತೋಟ ಹಾಗೂ ಜಮೀನು ಹೊಂದಿದ್ದಾರೆ. ಆದರೆ, ಅರಣ್ಯದೊಳಗಿರುವ ಜಮೀನಿಗೆ ಹೋಗದಂತೆ ರಾಜ್ಯ ಸರ್ಕಾರ ತಡೆಯನ್ನುಂಟು ಮಾಡಿದೆ. ಈ ಸಂಬಂಧದ ಪ್ರಕರಣ ವಿಚಾರಣೆಗೆ ಕೈಗೆತ್ತಿಕೊಂಡ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನೋಟೀಸ್ ಜಾರಿ ಮಾಡಿದೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ಬಳಿಯ ಶಂಭುಗೌಡನಹಳ್ಳಿ, ಲಕ್ಕಸೋಗೆ ಗ್ರಾಮಗಳಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್ ಪುತ್ರ ರಾಣಾ ಜಾರ್ಜ್ ಜಮೀನು ಹೊಂದಿದ್ದಾರೆ. ಈ ಜಮೀನಿಗೆ ಹೋಗಬೇಕೆಂದರೆ ಹೆಚ್.ಡಿ.ಕೋಟೆಯ ನುಗು ವನ್ಯಜೀವಿ ಅಭಯಾರಣ್ಯದಲ್ಲಿನ ರಸ್ತೆ ಮಾರ್ಗದ ಮೂಲಕ ಹೋಗಬೇಕು. ಆದರೆ, ರಾಜ್ಯ ಸರ್ಕಾರದಿಂದ ಅರಣ್ಯದೊಳಗೆ ಜಮೀನಿಗೆ ಹೋಗಲು ಈ ರಸ್ತೆ ಬಳಕೆ ಮಾಡದಂತೆ ನಿರ್ಬಂಧ ವಿಧಿಸಿತ್ತು. ಹೀಗಾಗಿ ರಾಣಾ ಜಾರ್ಜ್ ಸರ್ಕಾರದ ನಿರ್ಬಂಧವನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರಣ್ಯದಲ್ಲಿ ಜಮೀನನ್ನು ಹೊಂದಿದವರು ತಮ್ಮ ಜಮೀನಿಗೆ ಹೋಗಲು ಅವಕಾಶ ನೀಡಬೇಕು. ರಾತ್ರಿ ಹಾಗೂ ಹಗಲಿನ ಸಮಯದಲ್ಲಿ ಅನಿರ್ಬಂಧಿತವಾಗಿ ಸಂಚರಿಸಲು ಅನುಮತಿ ಅಗತ್ಯವಿದೆ. ಹೀಗೆ ಅನುಮತಿ ನೀಡುವಂತೆ ಅರಣ್ಯಾಧಿಕಾರಿಗೆ ನಿರ್ದೇಶಿಸಬೇಕೆಂದು ಅರ್ಜಿಯಲ್ಲಿ ಉಲ್ಲೇಖ ಮಾಡಿದ್ದರು. ಈ ಅರ್ಜಿ ವಿಚಾರಣೆ ಮಾಡಿದ ಹೈಕೋರ್ಟ್, ಅರಣ್ಯ ಇಲಾಖೆ ಹಾಗೂ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ. ಈ ವೇಳೆ ರಾಣಾ ಜಾರ್ಜ್ ಪರ ಹಿರಿಯ ವಕೀಲ ವಿಕ್ರಂ ಹುಯಿಲಗೋಳ ಅವರು, ಅಭಯಾರಣ್ಯದ ವ್ಯಾಪ್ತಿಯಲ್ಲಿ ● 9ನೇ ಪುಟಕ್ಕೆ

ಅವಳಿ ಮಕ್ಕಳ ಹಡೆದ ಈ ಮಹಾತಾಯಿಗೆ ಅವುಗಳ ಮುದ್ದಾಡುವ ಭಾಗ್ಯವಿಲ್ಲದಾಯಿತು...


ಹೇಮಾವತಿ

ಮೈಸೂರು, ನ.15(ಎಸ್‌ಬಿಡಿ)– ಅವಳಿ ಮಕ್ಕಳಿಗೆ ಜನ್ಮನೀಡಿ, ತಾಯಿ ಉಸಿರು ನಿಲ್ಲಿಸಿರುವ ಹೃದಯ ಹಿಂಡುವ ಘಟನೆ ಮೈಸೂರಿನಲ್ಲಿ ನಡೆದಿದೆ. ನಂಜನಗೂಡು ತಾಲೂಕು, ಅಹಲ್ಯಾ ಗ್ರಾಮದ ಶಿವರುದ್ರಪ್ಪ ಅವರ ಪತ್ನಿ ಹೇಮಾವತಿ(35) ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಗಂಡು–ಹೆಣ್ಣು ಅವಳಿ ಮಕ್ಕಳಿಗೆ ಜನ್ಮ ನೀಡಿ, ಕೊನೆಯುಸಿರೆಳೆದಿದ್ದಾರೆ. ಪ್ರಸವ ನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದ ಹೇಮಾವತಿ ಅವರಿಗೆ ಸಿಸೇರಿಯನ್ ಮಾಡಲಾಯಿತು. ಆದರೆ ಮುದ್ದಾದ ಮಕ್ಕಳಿಗೆ ಜನ್ಮವಿತ್ತ ತಾಯಿಗೆ, ಅವುಗಳನ್ನು ತನ್ನ ಮಡಿಲಲ್ಲಿ ಮಲಗಿಸಿಕೊಂಡು ತಾಯ್ತನದ ಸಂತಸವನ್ನು ಅನುಭವಿಸುವ ಅವಕಾಶವನ್ನು ವಿಧಿ ನೀಡಲಿಲ್ಲ. ಸದ್ಯ ಮಕ್ಕಳು ಆರೋಗ್ಯವಾಗಿರುವುದಾಗಿ ತಿಳಿದುಬಂದಿದೆ.

ಕಣ್ಣೀರಾದ ಕುಟುಂಬ: ಹೆರಿಗೆ ನಂತರ ಹೇಮಾವತಿ ನಿಧನದ ಸುದ್ದಿ ಕೇಳಿ ಕುಟುಂಬ ದವರು ಹಾಗೂ ಸಂಬಂಧಿಕರಿಗೆ ಬರಸಿಡಿಲು ಬಡಿದಂತಾಗಿದೆ. ಬದುಕುಳಿದಿದ್ದರೆ ಮುದ್ದಾದ ಮಕ್ಕಳನ್ನು ಎಷ್ಟೊಂದು ಖುಷಿಯಿಂದ ಲಾಲನೆ–ಪಾಲನೆ ಮಾಡುತ್ತಿದ್ದರು ಎಂದು ಕಲ್ಪಿಸಿಕೊಂಡು ಕಣ್ಣೀರಾಗಿದ್ದಾರೆ. ಹೇಮಾ ವತಿ ಅವರ ಪತಿ ಶಿವರುದ್ರಪ್ಪ, ಮಾವ ಶಿವಪ್ಪ, ತಂದೆ ಹಿನಕಲ್‌ನ ಈಶ್ವರಪ್ಪ, ಆಕೆಯ ಸಹೋದರರು ಸೇರಿದಂತೆ ಕುಟುಂಬ ಸದಸ್ಯರ ಆಕ್ರಂದನ ಮುಗಿಲು ಮುಟ್ಟಿದೆ. ಶನಿವಾರ ಅಹಲ್ಯಾ ಗ್ರಾಮದಲ್ಲಿ ಹೇಮಾವತಿ ಅವರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ತಿಳಿದುಬಂದಿದೆ.

ಕನಕಶ್ರೀ ಪ್ರಶಸ್ತಿಗೆ ವ್ಯಾಸನಕೆರೆ ಪ್ರಭಂಜನಾಚಾರ್ಯ ಆಯ್ಕೆ



ಬೆಂಗಳೂರು, ನ. 15– ಶ್ರೀ ಸಂತ ಕನಕದಾಸ ಜಯಂತಿ ಪ್ರಯುಕ್ತ ನೀಡಲಾಗುವ 2024ನೇ ಸಾಲಿನ ಪ್ರತಿಷ್ಠಿತ ಕನಕಶ್ರೀ ಪ್ರಶಸ್ತಿಗೆ ಬಳ್ಳಾರಿಯ ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದ್ದಾರೆ. ನ.18ರಂದು ರವೀಂದ್ರ ಕಲಾಕ್ಷೇತ್ರ ದಲ್ಲಿ ಆಯೋಜಿಸಿರುವ ಕನಕದಾಸ ಜಯಂತಿ ಸಮಾರಂಭದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡ ಲಿದ್ದಾರೆ. ಈ ಪ್ರಶಸ್ತಿಯು 5 ಲಕ್ಷ ನಗದು, ಕನಕದಾಸರ ಪುತ್ಥಳಿ ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಬಸವರಾಜ ಹೊರಟ್ಟಿ ಮೇಲೆ ಹಲ್ಲೆ ಮಾಡಲು ಜಮೀರ್ ಹೋಗಿದ್ದರು

ಈ ಹಿಂದೆ ನನ್ನ ಏಯ್, ಕುಮಾರ್ ಎಂದು ಕರೆದ ಹಾಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮೇಲೆ ಹಲ್ಲೆ ಮಾಡಲು ಈ ಗಿರಾಕಿ ಜಮೀರ್ ಅಹಮ್ಮದ್ ಹೋಗಿದ್ದರು ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಚಾಮುಂಡಿಬೆಟ್ಟದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ವಿಚಾರದ ಬಗ್ಗೆ ಬೇಕಿದ್ದರೆ ಬಸವರಾಜ ಹೊರಟ್ಟಿ ಅವರನ್ನು ಕೇಳಿ ಎಂದು ಪತ್ರಕರ್ತರಿಗೆ ಸಲಹೆ ನೀಡಿದರು. ಜಮೀರ್ ಅಹಮ್ಮದ್ ಮಾತು ಅವರ ಸಂಸ್ಕೃತಿ ತೋರಿಸುತ್ತದೆ. ಆದರೆ ಜಮೀರ್ ಹೇಳಿಕೆಯನ್ನು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸಮರ್ಥಿಸಿಕೊಂಡಿದ್ದಾರೆ. ಈ ಸರ್ಕಾರ ಅನಾಗರಿಕ ಸರ್ಕಾರ ಎಂಬುದಕ್ಕೆ ಇದಕ್ಕಿಂತ ನಿದರ್ಶನ ಬೇಕೇ ಎಂದು ಪ್ರಶ್ನಿಸಿದರು.

ನಾನು ಜಮೀರ್‌ನ್ನು ಯಾವತ್ತೂ ಕುಳ್ಳ ಅಂತ ಕರೆದಿಲ್ಲ. ಅವರು ಕೂಡ ಯಾವತ್ತೂ ನನ್ನ ಕರಿಯ ಎಂದು ಕರೆದಿಲ್ಲ. ಆದರೆ ಹಣದ ಮದದಿಂದ ಈ ರೀತಿ ಮಾತನಾಡುತ್ತಿದ್ದು, ಗರ್ವ ತೋರುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.


ಪತ್ರಕರ್ತರೊಂದಿಗೆ ಮಾತನಾಡಿದ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ

ಕಾಂಗ್ರೆಸ್‌ನ 50 ಶಾಸಕರಿಗೆ ತಲಾ 50 ಕೋಟಿ ಆಮಿಷ ಆರೋಪ

ಎಸ್‌ಐಟಿ ತನಿಖೆ ಮಾಡಿಸಿ; ಆಫರ್ ಕೊಟ್ಟವರ ಬಂಧಿಸಿ

ಸಿಎಂಗೆ ಕುಮಾರಸ್ವಾಮಿ ಸವಾಲು

- ಶಾಸಕರನ್ನು ಖರೀದಿ ಮಾಡುವವರು ಅವರ ಪಕ್ಕದಲ್ಲೇ ಇದ್ದಾರೆ
- ಲೂಟಿ ಮಾಡುತ್ತಿದ್ದರೂ ನಿಮ್ಮನ್ನು ಮುಟ್ಟಬಾರದೆ?
- ನನ್ನ ವಿರುದ್ಧ ತನಿಖೆ ಮಾಡಿಸಿದರೆ ಯಾವುದಕ್ಕೂ ಹೆದರಲ್ಲ

ಮೈಸೂರು, ನ.15(ಬಿಎಲ್‌ಯು)– ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಆಫರ್ ಕೊಟ್ಟ ವಿಚಾರದ ಬಗ್ಗೆ ಎಸ್‌ಐಟಿಯಿಂದ ತನಿಖೆ ಮಾಡಿಸಿ, ಖಚಿತ ಮಾಹಿತಿ ಇದ್ದರೆ ಬಂಧಿಸಿ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರಕ್ಕೆ ಸವಾಲು ಹಾಕಿದ್ದಾರೆ.

ಮೈಸೂರಿನ ಕೇರ್ಗಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಾತೆತ್ತಿದರೆ ಎಸ್‌ಐಟಿ ಅಂತೀರಾ, ಶಾಸಕರ ಖರೀದಿ ವಿಚಾರದ ಬಗ್ಗೆ ತನಿಖೆ ಮಾಡಲು ಎಸ್‌ಐಟಿ ಏಕೆ ಉಪಯೋಗ ಮಾಡಿಕೊಳ್ಳಲಿಲ್ಲ ಎಂದು ಪ್ರಶ್ನಿಸಿದರು. ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ ಶಾಸಕರ ಖರೀದಿಗೆ ಯತ್ನಿಸಿದ ಆರೋಪದಲ್ಲಿ ಬಂಧಿಸಲಾಗಿದೆ. ಅದೇ ರೀತಿ ಶಾಸಕರ ಖರೀದಿಗೆ ಯಾರು ಆಫರ್ ಕೊಟ್ಟರು ಅಂತ ಎಸ್‌ಐಟಿಯಿಂದ ತನಿಖೆ ಮಾಡಿಸಿ ಎಂದು ಕುಮಾರಸ್ವಾಮಿ ಮತ್ತೊಮ್ಮೆ ಸವಾಲು ಹಾಕಿದರು.

ಶಾಸಕರಿಗೆ 50 ಕೋಟಿ ಆಫರ್ ಕೊಟ್ಟವರು ಯಾರು, ಬೇಡ ಎಂದವರು ಯಾರು ಎಂಬ ಬಗ್ಗೆ ಎಸ್‌ಐಟಿ ತಂಡ ರಚಿಸಿ ತನಿಖೆ ಮಾಡಿಸಲಿ ಎಂದು ಸಿದ್ದರಾಮಯ್ಯಗೆ ಸಲಹೆ ನೀಡಿದ ಕುಮಾರಸ್ವಾಮಿ, ಶಾಸಕರನ್ನು ಖರೀದಿ ಮಾಡುವವರನ್ನು ಜೊತೆಯಲ್ಲೇ ಇಟ್ಟುಕೊಂಡಿದ್ದಾರೆ. ನನ್ನ ಜೊತೆ 25 ಶಾಸಕರಿರುವ ಪಟ್ಟಿ ಇದೆ. 32 ಶಾಸಕರನ್ನು ತಯಾರು ಮಾಡಿದ್ದೇನೆ ಎಂದು ಹೇಳುತ್ತಿದ್ದವರನ್ನು ಪಕ್ಕದಲ್ಲೆ ಇಟ್ಟುಕೊಂಡಿದ್ದೀರಲ್ಲ ಅವರನ್ನು ಕೇಳಿ ಎಂದು ಪರೋಕ್ಷವಾಗಿ ಡಿ.ಕೆ.ಶಿವಕುಮಾರ್ ಉಲ್ಲೇಖಿಸಿದರು.

ಲೋಕಸಭಾ ಚುನಾವಣೆಗೂ ಮೊದಲೇ ಚನ್ನಗಿರಿ ಹಾಗೂ ಮಂಡ್ಯದ ಶಾಸಕರು ನಮಗೆ ಆಫರ್ ಕೊಟ್ಟರು ಎಂದು ಹೇಳುತ್ತಿದ್ದರು. ಇದನ್ನು ಏಕೆ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಲ್ಲ, ಯಾರು ಆಫರ್ ಕೊಟ್ಟರು ಎಂದು ಹೇಳಲಿಲ್ಲ ಎಂದು ಪ್ರಶ್ನಿಸಿದರು. ಇಷ್ಟು ದಿನ ಶಾಸಕರ ಖರೀದಿ ಕುರಿತಂತೆ ಚಕಾರ ಎತ್ತದ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಏಕೆ ಈ ವಿಚಾರವನ್ನು ಪ್ರಸ್ತಾಪ ● 9ನೇ ಪುಟಕ್ಕೆ

ಟೈಯರ್, ಗುಜರಿ ಅಂಗಡಿಯಲ್ಲಿ ದುಡಿದು ದೇವೇಗೌಡರ ಕುಟುಂಬ ಖರೀದಿಸುತ್ತಾರೆಯೇ...!

ಮುಸ್ಲಿಂರು ಟೈಯರ್ ಅಂಗಡಿ ಮತ್ತು ಗುಜರಿ ಅಂಗಡಿಯಲ್ಲಿ ದುಡಿದು ದೇವೇಗೌಡರ ಕುಟುಂಬವನ್ನು ಖರೀದಿ ಮಾಡುತ್ತಾರೆಯೇ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ಚಂದಾ ಎತ್ತಿ ಮುಸ್ಲಿಂರು ದೇವೇಗೌಡರ ಕುಟುಂಬ ಖರೀದಿ ಮಾಡುತ್ತಾರೆ ಎಂಬ ವಸತಿ ಸಚಿವ ಜಮೀರ್ ಅಹಮ್ಮದ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಜಮೀರ್‌ಗೆ ಹಣದ ಮದ ಬಂದಿದೆ. ನಿಯತ್ತಾಗಿ ಬಸ್ ಓಡಿಸಿ ಬಂದ ಹಣವೇ ಅದು ಎಂದು ಪ್ರಶ್ನಿಸಿದರು.

ಆ ವ್ಯಕ್ತಿ ಬಗ್ಗೆ ನನ್ನ ಬಳಿ ಚರ್ಚಿಸಬೇಡಿ, ಅದು ಕೆಸರು. ಈ ಕಾರಣದಿಂದ ಅವರನ್ನು ದೂರ ಇಟ್ಟಿದ್ದೇನೆ ಎಂದು ಕಿಡಿಕಾಡಿದ ಕುಮಾರಸ್ವಾಮಿ, ಐದಾರು ಜನರ ಸ್ನೇಹ ಸಂಬಂಧ ನನ್ನ ಜೀವನದ ಕರಾಳ ದಿನ. ಆ ದಿನದ ಬೆಳವಣಿಗೆಗಳಿಂದ ಬಹಳ ಕೆಟ್ಟ ಅನುಭವವಾಗಿದೆ. ಆದ ಕಾರಣ ಈಗ ಎಚ್ಚರಿಕೆಯಿಂದ ಇದ್ದೇನೆ ಎಂದರು. ಇವರೆಲ್ಲಾ ಎಲ್ಲಿದ್ದರು, ಯಾರ ಕಾಲು ಹಿಡಿದರು, ಹೇಗಾದರೂ ಅಂತ ನನಗೆ ಗೊತ್ತಿದೆ. ಹಣದ ಮದದಿಂದ ಇಂತಹ ಮಾತುಗಳನ್ನಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ನಿಮಗೆ ಮೋಸ ಮಾಡಿದ ದಿನ ನನಗೆ ಏನಾಗುತ್ತದೆ ಎಂದು ಅಂದು ಹೇಳಿದ ಮಾತನ್ನು ಜಮೀರ್ ಮೆಕ್ಕಾದಲ್ಲಿ ಕುಳಿತು ಯೋಚನೆ ಮಾಡಲಿ ಎಂದು ಸಲಹೆ ನೀಡಿದರು. ನಾನು ಕುಳ್ಳ ಎಂದು ಕರೆದೆ, ಅವರು ನನ್ನ ಕರಿಯಣ್ಣ ಎಂದು ಕರೆದರಂತೆ. ಇದೆಲ್ಲಾ ಆಡುವ ಮಾತುಗಳೇ. ಇಂತಹ ಮಾತು ಅವರ ಸಂಸ್ಕಾರ ತೋರಿಸುತ್ತದೆ. ಇಂತಹ ಹೇಳಿಕೆ ನೀಡುವಾಗ ತಿಳುವಳಿಕೆ ಇರಬೇಕು. ಯಾರಾದರೂ ಈ ರೀತಿ ಮಾತನಾಡುತ್ತಾರೆಯೇ ಎಂದು ಪ್ರಶ್ನಿಸಿದರು.

3 ಕೋಟಿ ವೆಚ್ಚದಲ್ಲಿ ವಿಧಾನಸೌಧದ ಮುಖ್ಯಮಂತ್ರಿ ಕಚೇರಿ ನವೀಕರಣ



ಬೆಂಗಳೂರು, ನ.15– ವಿಧಾನಸೌಧದಲ್ಲಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೊಠಡಿಗೆ ಹೊಸ ರೂಪವನ್ನು ನೀಡಲಾಗಿದೆ. ಸುಮಾರು 15 ವರ್ಷಗಳ ಬಳಿಕ ಮೂರನೇ ಮಹಡಿಯಲ್ಲಿನ ಸಿಎಂ ಕೊಠಡಿಯನ್ನು ಹೊಸ ಸ್ವರೂಪದಲ್ಲಿ ನವೀಕರಣ ಮಾಡಲಾಗಿದೆ.

ಎರಡು ತಿಂಗಳುಗಳಿಂದ 323ನೇ ಸಂಖ್ಯೆಯ ಸಿಎಂ ಕೊಠಡಿಗೆ ಹೊಸ ರೂಪ ನೀಡುವ ಕಾಮಗಾರಿಯು ನಡೆಯುತ್ತಿದೆ. ಇದೀಗ ನವೀಕರಣ ಕಾಮಗಾರಿ ಬಹುತೇಕ ಪೂರ್ಣವಾಗಿದ್ದು, ಸಿಎಂ ಸಿದ್ದರಾಮಯ್ಯ ಸದ್ಯದಲ್ಲೇ ನವೀಕೃತ ಕೊಠಡಿಯ ಪ್ರವೇಶ ಮಾಡಲಿದ್ದಾರೆ.

ಸಿಎಂ ಸಿದ್ದರಾಮಯ್ಯ ಮೌಖಿಕ ಸೂಚನೆ ಮೇರೆಗೆ ಕೊಠಡಿಯನ್ನು ನವೀಕರಣ ಮಾಡಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ. ವಿಧಾನಸೌಧದ ಸಿಎಂ ಕಚೇರಿಯನ್ನು ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ವೇಳೆ ನವೀಕರಿಸಲಾಗಿತ್ತು. ಬಳಿಕ ಕೊಠಡಿಗೆ ಯಾವುದೇ ರೀತಿಯ ನವೀಕರಣ ಮಾಡಿರಲಿಲ್ಲ. ಪೇಂಟಿಂಗ್ ಹಾಗೂ ಪೀಠೋಪಕರಣಕ್ಕೆ ಪಾಲಿಷ್ ಸೇರಿದಂತೆ ಸಣ್ಣಪುಟ್ಟ ದುರಸ್ತಿ ಕಾಮಗಾರಿ ಬಿಟ್ಟರೆ, ದೊಡ್ಡ ಪ್ರಮಾಣದಲ್ಲಿ ಕೊಠಡಿಯ ಒಳಾಂಗಣ ನವೀಕರಣ ಮಾಡಿರಲಿಲ್ಲ. ಇದೀಗ ಸಿಎಂ ಕೊಠಡಿಯ ಒಳಾಂಗಣಕ್ಕೆ ಸಂಪೂರ್ಣವಾಗಿ ಹೊಸ ವಿನ್ಯಾಸದ ಟಚ್ ನೀಡಲಾಗುತ್ತಿದೆ. ಕೊಠಡಿಯ ಸಂಪೂರ್ಣ ಒಳಾಂಗಣ ನವೀಕರಣ, ಶೌಚಾಲಯ, ಕೊಠಡಿಯ ನೆಲ, ಗೋಡೆಗಳ ವಿನ್ಯಾಸ, ಸೀಲಿಂಗ್, ವಾಲ್ ಪೇಟಿಂಗ್, ವಿರಾಮ ಕೊಠಡಿ, ಸಂದರ್ಶಕರ ಕೊಠಡಿಗೂ ಐಷಾರಾಮಿ ಟಚ್ ನೀಡಲಾಗುತ್ತಿದೆ. ಅಲ್ಲದೆ, ಹೊಸ ಪೀಠೋಪಕರಣ, ಹೈಟೆಕ್ ಸ್ಪರ್ಶದೊಂದಿಗೆ ಕೊಠಡಿಗೆ ಹೊಸ ರೂಪ ನೀಡಲಾಗಿದೆ. ಡಿಸಿಎಂ ಡಿ.ಕೆ.ಶಿವಕುಮಾರ್ ಸಹ ವಿಧಾನ ಸೌಧದಲ್ಲಿನ ತಮ್ಮ ಕಾನ್ಫರೆನ್ಸ್ ಕೊಠಡಿಗೆ ಹೊಸ ರೂಪ ನೀಡಿದ್ದರು.

ಪದವಿ, ಸ್ನಾತಕೋತ್ತರ ಕೋರ್ಸುಗಳಿಗೆ ಅರ್ಜಿ ಆಹ್ವಾನ

ಮೈಸೂರು,ನ.15–ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ತನ್ನ ಎರಡು ವರ್ಷಗಳ ಪೂರ್ಣಕಾಲಿಕ ಸ್ನಾತಕೋತ್ತರ ಎಂಎ ಶಿಕ್ಷಣ, ಎಂಎ ಅಭಿವೃದ್ಧಿ, ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್ (ಎಂ.ಪಿ.ಎಚ್), ಎಂಎ ಅರ್ಥಶಾಸ್ತ್ರ, ಎಂಎ ಆರಂಭಿಕ ಬಾಲ್ಯದ ಆರೈಕೆ, ಶಿಕ್ಷಣ ಹಾಗೂ ನಮ್ಮ 4 ವರ್ಷಗಳ ಪೂರ್ಣಕಾಲಿಕ ವಸತಿ ಸಹಿತ ಪದವಿ ಬಿಎ ಆನರ್ಸ್ ಮತ್ತು ಬಿ.ಎಸ್ಸಿ ಆನರ್ಸ್‌ಗಳಿಗೆ ಅರ್ಜಿಯನ್ನು ಆಹ್ವಾನಿಸಿದೆ. ಈ ಕೋರ್ಸ್‌ಗಳನ್ನು ವಿಶ್ವವಿದ್ಯಾಲಯದ ಬೆಂಗಳೂರು ಮತ್ತು ಭೋಪಾಲ್ ಕ್ಯಾಂಪಸ್‌ಗಳಲ್ಲಿ ನಡೆಸಲಾಗುತ್ತಿದ್ದು, ಅರ್ಥಪೂರ್ಣ ವೃತ್ತಿ ಅವಕಾಶಗಳನ್ನು ತಂದುಕೊಡುವ ಮತ್ತು ಉನ್ನತ ಶಿಕ್ಷಣದಲ್ಲಿ ದಾರಿಯನ್ನು ತೆರೆಯುವಂತಾಗಲು, ವಿದ್ಯಾರ್ಥಿಗಳಲ್ಲಿ ತಜ್ಞತೆ ಮತ್ತು ಸಾಮಾಜಿಕ ಬದ್ಧತೆಯನ್ನು ಅಭಿವೃದ್ಧಿಪಡಿಸುವ ಶಿಕ್ಷಣ ನೀಡುವ ಗುರಿಯನ್ನು ಹೊಂದಿದೆ. ವಿದ್ಯಾರ್ಥಿಗಳು ವಿವಿ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಮೊಬೈಲ್: 8971889988 ಸಂಪರ್ಕಿಸಬಹುದು.

ಚನ್ನಪಟ್ಟಣದಲ್ಲಿ ನಿಖಿಲ್ ಗೆಲುವು ನಿಶ್ಚಿತ: ಸಂಸದ ಯದುವೀರ್ ವಿಶ್ವಾಸ



ಮಡಿಕೇರಿ, ನ.15– ರಾಜ್ಯದಲ್ಲಿ ಉಪಚುನಾವಣೆ ನಡೆದ ಮೂರು ಕ್ಷೇತ್ರದಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಗೆಲುವು ಸಾಧಿಸುತ್ತಾರೆ. ಅದರಲ್ಲೂ ಹೈವೋಲ್ಟೇಜ್ ಕ್ಷೇತ್ರ ಚನ್ನಪಟ್ಟಣದಲ್ಲಿ ಮೈತ್ರಿ ಪಕ್ಷದ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಗೆಲುವು ನಿಶ್ಚಿತ ಎಂದು ಕೊಡಗು–ಮೈಸೂರು ಸಂಸದ ಯದುವೀರ್ ಒಡೆಯರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮಡಿಕೇರಿ ತಾಲೂಕಿನ ಮಕ್ಕಂದೂರು ಗ್ರಾಮದಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣದಲ್ಲಿ ಚುನಾವಣೆ ಸಂದರ್ಭ ಗ್ರೌಂಡ್ ರಿಪೋರ್ಟ್ ನೋಡಿದಾಗ ಅಲ್ಲಿನ ಜನರು ಮೈತ್ರಿ ಪಕ್ಷದ ಅಭ್ಯರ್ಥಿ ಪರವಾಗಿ ಇದ್ದರು. ಹಾಗಾಗಿ ನಮಗೆ ವಿಶ್ವಾಸ ಇದೆ. ಎನ್‌ಡಿಎ ಪರವಾಗಿ ಗೆಲುವು ಆಗುತ್ತದೆ ಎಂಬ ಭರವಸೆಯನ್ನು ಕ್ಷೇತ್ರದ ಜನರು ತುಂಬಿದ್ದಾರೆ ಎಂದರು.

ಇಬ್ಬರಲ್ಲಿ ಯಾರಿಗೆ ಗೆಲುವು ಆದರೂ ಕೂದಲೆಳೆಯ ಅಂತರದಲ್ಲಿ ಆಗಬಹುದು. ಜಮೀರ್ ಅಹ್ಮದ್ ಅವರ ಮಾತಿನಿಂದ ಮತಗಳು ವಿಭಜನೆಯಾಗಿದೆ ಎಂಬ ಸಿ.ಪಿ ಯೋಗೇಶ್ವರ್ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರನ್ನೇ ಇನ್ನಷ್ಟು ನೇರವಾಗಿ ಪ್ರಶ್ನೆ ಮಾಡಬೇಕಾಗುತ್ತದೆ. ನಮ್ಮ ದೃಷ್ಟಿಕೋನದಲ್ಲಿ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ವಿಜಯವನ್ನು ಸಾಧಿಸುತ್ತಾರೆ. ನಮಗೂ ಅವರು ಗೆಲ್ಲುವ ವಿಶ್ವಾಸ ಇದೆ ಎಂದು ಹೇಳಿದರು. ನಾವು ಹಾಗೂ ರಾಜ್ಯದ ಅನೇಕ ನಾಯಕರು ಅಲ್ಲಿಗೆ ಹೋಗಿದ್ದ ಸಂದರ್ಭದಲ್ಲಿ ಮತದಾರರು ಉತ್ತಮ ರೀತಿಯಲ್ಲಿ ಪ್ರತಿಕ್ರಿಯೆ ನೀಡಿದ್ದರು ಎಂದು ತಿಳಿಸಿದರು.

ದರ್ಶನ್ ಮಧ್ಯಂತರ ಜಾಮೀನು ಆದೇಶ ಪ್ರಶ್ನಿಸಿ ಸುಪ್ರೀಂನಲ್ಲಿ ಮೇಲ್ಮನವಿ

ಬೆಂಗಳೂರು, ನ.15– ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ದರ್ಶನ್‌ಗೆ ಹೈಕೋರ್ಟ್ ನೀಡಿದ ಜಾಮೀನು ಆದೇಶವನ್ನು ಸುಪ್ರೀಂನಲ್ಲಿ ಪ್ರಶ್ನಿಸಲು ಗೃಹ ಸಚಿವಾಲಯ ಗ್ರೀನ್ ಸಿಗ್ನಲ್ ನೀಡಿದೆ. ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಕೆ ಮಾಡುತ್ತೇವೆ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ್ ಹೇಳಿದ್ದಾರೆ.

ಗೃಹ ಸಚಿವಾಲಯ ಗ್ರೀನ್ ಸಿಗ್ನಲ್ ನೀಡಿದ ಬೆನ್ನಲ್ಲೇ ಸೋಮವಾರದ ಬಳಿಕ ಪೊಲೀಸರು ಮೇಲ್ಮನವಿ ಸಲ್ಲಿಕೆ ಮಾಡುವ ಸಾಧ್ಯತೆಯಿದೆ. ಈ ಪ್ರಕರಣದಲ್ಲಿ ಪೊಲೀಸರ ಪರವಾಗಿ ವಾದ ಮಂಡಿಸಲು ಹಿರಿಯ ವಕೀಲ ವಿ.ಎನ್. ರಘುಪತಿ ಅವರನ್ನು ಗೃಹ ಸಚಿವಾಲಯ ನೇಮಿಸಿದೆ.



ದಯಾನಂದ್ ದರ್ಶನ್

ಅನಾರೋಗ್ಯದ ಕಾರಣಕ್ಕಾಗಿ ದರ್ಶನ್ ಅವರಿಗೆ ಹೈಕೋರ್ಟ್ 6 ವಾರಗಳ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು. ಬೆಂಗಳೂರಿನ ಬಿಜಿಎಸ್ ಆಸ್ಪತ್ರೆಯಲ್ಲಿ ದಾಖಲಾಗಿರುವ ದರ್ಶನ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ ಇನ್ನೂ ಕೂಡ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿಲ್ಲ. ಈ ಎಲ್ಲಾ ಅಂಶಗಳನ್ನು ಪೊಲೀಸರು ಮೇಲ್ಮನವಿ ಅರ್ಜಿಯಲ್ಲಿ ಪ್ರಸ್ತಾಪಿಸಲಿದ್ದಾರೆ.

ಶ್ರೀ ಬಿರ್ಸಾ ಮುಂಡಾ ಜಯಂತಿ ಆಚರಣೆ



ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯ ನಾಮಫಲಕದ ಬಳಿ ಆದಿವಾಸಿಗಳ ನಾಯಕ ಶ್ರೀ ಬಿರ್ಸಾ ಮುಂಡಾ ಅವರ 149ನೇ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಪುಷ್ಪನಮನ ಸಲ್ಲಿಸಿದರು. ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ನಗರ ಪಾಲಿಕೆ ಮಾಜಿ ಸದಸ್ಯರಾದ ಶ್ರೀರಾಮ್, ಉಮೇಶ್, ಮುಖಂಡರಾದ ಟೆನ್ನಿಸ್ ಗೋಪಿ, ಸೋಮಶೇಖರ, ರಾಜು.ಕೆ, ಬಾಲಸುಬ್ರಹ್ಮಣ್ಯಂ, ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ಆಶೋಕ್, ಚುರುಮುರಿ ಪರಮೇಶ್ ಹಾಗೂ ರವಿಕುಮಾರ್ ಮತ್ತಿತರರಿದ್ದರು.

ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದ ವಿಶೇಷ ಅಂಚೆ ಲಕೋಟೆ ಬಿಡುಗಡೆ

ಮೈಸೂರು, ನ. 15– ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣ ಕುರಿತಾದ ವಿಶೇಷ ಅಂಚೆ ಲಕೋಟೆಯನ್ನು ಇತ್ತೀಚೆಗೆ ಅಂಚೆ ಸೇವಾ ಮಂಡಳಿಯ ಸಮನ್ವಯ ಸಮಿತಿಯ ಸದಸ್ಯ ಆಶೀಶ್ ಕುಮಾರ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಯ ಸಹ ನಿರ್ದೇಶಕ ಭಾಸ್ಕರ ನಾಯಕ್, ಉತ್ತರ ಕರ್ನಾಟಕ ಅಂಚೆ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಸುಶೀಲ್ ಕುಮಾರ್, ಬೆಂಗಳೂರು ಹೆಚ್ ಕ್ಯೂ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ.ದಾಶ್, ದಕ್ಷಿಣ ಕರ್ನಾಟಕ ಅಂಚೆ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಡಾ. ಚಂದ್ರಶೇಖರ್ ಕಾಕುಮನು, ದಕ್ಷಿಣ ಕರ್ನಾಟಕ ಅಂಚೆ ವಲಯದ ನಿರ್ದೇಶಕರಾದ ಸಂದೇಶ್ ಮಹದೇವಪ್ಪ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಉತ್ತಮರು ಶಾಸನ ಸಭೆ ಪ್ರವೇಶಿಸಬೇಕು

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಭಿಮತ

ಮೈಸೂರು, ನ.15(ಜಿಎ)–ಉತ್ತಮರು ಶಾಸನ ಸಭೆ ಪ್ರವೇಶಿಸಬೇಕು. ಸರ್ಕಾರಿ ನೌಕರಿ ಪಡೆದುಕೊಂಡರೆ ಸಾಕೆಂದು ಅಥವಾ ಕೆಲಸಕ್ಕಷ್ಟೇ ಸೀಮಿತವಾಗಬಾರದು ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್.ಹೊರಟ್ಟಿ ಅಭಿಪ್ರಾಯಪಟ್ಟರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನಲ್ಲಿ ಇತಿಹಾಸ, ರಾಜ್ಯಶಾಸ್ತ್ರ ಹಾಗೂ ಪತ್ರಿಕೋದ್ಯಮ ವಿಭಾಗಗಳು ಮತ್ತು ರಾಜ್ಯ ಪತ್ರಾಗಾರ ಇಲಾಖೆಯ ವಿಭಾಗೀಯ ಕಚೇರಿ ಸಹಯೋಗದಲ್ಲಿ ಆಯೋಜಿಸಿದ್ದ 'ಮೈಸೂರು ಪ್ರಜಾಪ್ರತಿನಿಧಿ ಸಭೆ ಚಾರಿತ್ರಿಕ ಅವಲೋಕನ' ಕುರಿತ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರಸಂಕಿರಣವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿಧಾನಮಂಡಲ ಅಧಿವೇಶನದಲ್ಲಿ ಬಹಳಷ್ಟು ಶಾಸಕರು, ವಿಧಾನಪರಿಷತ್ ಸದಸ್ಯರು ಸಕ್ರಿಯವಾಗಿ ಪಾಲ್ಗೊಳ್ಳುವುದಿಲ್ಲ. ಪ್ರಶ್ನೆ ಕೇಳುತ್ತಾರೆ, ಉತ್ತರ ತೆಗೆದುಕೊಂಡು ಹೋಗಿ ಬಿಡುತ್ತಾರೆ. ಚರ್ಚೆಯಲ್ಲಿ ಸಂಪೂರ್ಣವಾಗಿ ಭಾಗವಹಿಸುವುದಿಲ್ಲ. ಇದರಿಂದ ಬಹಳ ನೋವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವದಲ್ಲಿ ಒಳ್ಳೆಯದೂ ಆಗುತ್ತಿದೆ. ಕೆಟ್ಟದ್ದೂ ಆಗುತ್ತಿದೆ. ಪ್ರಜ್ಞಾವಂತರು, ಯುವಜನರು ರಾಜಕೀಯ ಕ್ಷೇತ್ರದಿಂದ ಹಿಂದೆ ಸರಿಯಬಾರದು. ರಾಜಕಾರಣ ಹಾಳಾಗಿದೆ ಎಂದು ಎಲ್ಲರೂ ದೂರ ಹೋದರೆ ಮುಂದೇನು ಎಂದು ಪ್ರಶ್ನಿಸಿದ ಅವರು, ಉತ್ತಮರು ರಾಜಕಾರಣಕ್ಕೆ ಬರಬೇಕು ಎಂದರು. ಎಲ್ಲಾ ಪಕ್ಷದಲ್ಲೂ ಜಾತಿ ನೋಡುತ್ತಾರೆ, ಟಿಕೆಟ್ ಕೊಡುವಾಗ ಹಣವೆಷ್ಟಿದೆ, ಎಷ್ಟು ಕೋಟಿ ಖರ್ಚು ಮಾಡಬಲ್ಲ ಎಂಬುದನ್ನೇ ಪ್ರಮುಖವಾಗಿ ಗಮನಿಸುವುದು ನಡೆಯುತ್ತಿದೆ ಎಂದು ವಿಷಾದಿಸಿದರು. ಮೈಸೂರು ಮಹಾರಾಜರು ಪ್ರಜಾಪ್ರತಿನಿಧಿ ಸಭೆಯನ್ನು ಆರಂಭಿಸಿ, ಜನರ ಅಹವಾಲುಗಳನ್ನು ಕೇಳುವ ಕೆಲಸ ಮಾಡಿದರು. ವಿಧಾನಪರಿಷತ್ ಪರಿಕಲ್ಪನೆ ಹುಟ್ಟಿದ್ದೇ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾರಣದಿಂದ ಎಂದು ಸ್ಮರಿಸಿದರು.

ಪತ್ರಾಗಾರ ಇಲಾಖೆಯ ನಿರ್ದೇಶಕ ಗವಿಸಿದ್ದಯ್ಯ ಮಾತನಾಡಿ, ಮೈಸೂರು ಸರ್ಕಾರದ ಆಡಳಿತದ 39 ಇಲಾಖೆಗಳ 2 ಲಕ್ಷಕ್ಕೂ ಹೆಚ್ಚು ಮೂಲ ದಾಖಲೆ ಸಂರಕ್ಷಿಸಿ ಅಧ್ಯಯನಶೀಲರಿಗೆ ಒದಗಿಸುವ ಕೆಲಸವನ್ನು ಇಲಾಖೆಯಿಂದ ಮಾಡಲಾಗುತ್ತಿದೆ. ಲಭ್ಯ ದಾಖಲೆಗಳ ಡಿಜಿಟಲೀಕರಣ ನಡೆಯುತ್ತಿದೆ. ಸದ್ಯ 1.08 ಕೋಟಿ ಪುಟಗಳಷ್ಟು ಮಾಹಿತಿ ಇಲಾಖೆಯ ಜಾಲತಾಣದಲ್ಲಿ ಲಭ್ಯವಾಗುತ್ತಿವೆ ಎಂದು ತಿಳಿಸಿದರು. ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಾಲೇಜಿನ ಮುಖ್ಯ ಕಾರ್ಯ ನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಹಾಗೂ ಪ್ರಾಂಶುಪಾಲ ಎಂ.ಪ್ರಭು ಉಪಸ್ಥಿತರಿದ್ದರು.



'ಮೈಸೂರು ಪ್ರಜಾಪ್ರತಿನಿಧಿ ಸಭೆ: ಚಾರಿತ್ರಿಕ ಅವಲೋಕನ' ಕುರಿತ ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರಸಂಕಿರಣವನ್ನು ಶುಕ್ರವಾರ ವಿಧಾನಪರಿಷತ್ ಸಭಾಪತಿ ಬಸವರಾಜ ಎಸ್.ಹೊರಟ್ಟಿ ಉದ್ಘಾಟಿಸಿದರು.

ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಮನೆ ಸ್ಮಾರಕ ಮಾಡಲು ಸರ್ಕಾರ ನಿರ್ಧಾರ

ಮನೆ ಖರೀದಿಗೆ ಐದು ಕೋಟಿ ಅನುದಾನ ಮೀಸಲು; ತಿಂಗಳಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಸೂಚನೆ






ಬೆಂಗಳೂರು, ನ.15– ಮಾಜಿ ಮುಖ್ಯಮಂತ್ರಿ ಹಾಗೂ ರಾಜಕೀಯ ಮುತ್ಸದ್ದಿ ಎಸ್.ನಿಜಲಿಂಗಪ್ಪ ಅವರ ಚಿತ್ರದುರ್ಗದ ಮನೆಯನ್ನು ಸ್ಮಾರಕವನ್ನಾಗಿ ಮಾಡಲು ಸರ್ಕಾರ ಮುಂದಾಗಿದೆ. ಅದಕ್ಕಾಗಿ ತಿಂಗಳೊಳಗೆ ಮನೆ ಖರೀದಿಸಿ, ನೋಂದಣಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ.

ಈ ಕುರಿತು ವಿಕಾಸಸೌಧದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಇಲಾಖೆ ಅಧಿಕಾರಿಗಳು ಮತ್ತು ಚಿತ್ರದುರ್ಗ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ, ನಿಜಲಿಂಗಪ್ಪ ಚಿತ್ರದುರ್ಗದಲ್ಲಿ ವಾಸವಿದ್ದ ಮನೆಯನ್ನು ಸ್ಮಾರಕವನ್ನಾಗಿಸಲು ನಿರ್ಧರಿಸಲಾಗಿದೆ. ಅದಕ್ಕಾಗಿ ಅವರ ಕುಟುಂಬದವರಿಂದ ಮನೆಯನ್ನು ಖರೀದಿಸಿ, ತಿಂಗಳಲ್ಲಿ ಅದನ್ನು ನೋಂದಣಿ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಇದಕ್ಕೆ ಸರ್ಕಾರ 5 ಕೋಟಿ ರೂ. ಅನುದಾನ ಮೀಸಲಿಟ್ಟಿದೆ. ಈ ಹಿಂದೆ ತಾಂತ್ರಿಕ ಕಾರಣಗಳಿಂದಾಗಿ ಮನೆ ಖರೀದಿ ಸಾಧ್ಯವಾಗಿರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಚಿವ ಶಿವರಾಜ್ ತಂಗಡಗಿ, ಇನ್ನು ತಿಂಗಳೊಳಗಾಗಿ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಕಾನೂನಾತ್ಮಕವಾಗಿ ಎಲ್ಲಾ ರೀತಿ ವ್ಯವಹಾರವನ್ನು ಮುಗಿಸಿ, ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು ಎಂದರು.

ನಿಜಲಿಂಗಪ್ಪ ಅವರ ಮನೆ ಖರೀದಿಗೆ ಸಂಬಂಧಿಸಿದಂತೆ ಈಗಾಗಲೇ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆಯಲಾಗಿದೆ. ನಿಜಲಿಂಗಪ್ಪ ವಾಸವಿದ್ದ ಮನೆ ಈ ಹಿಂದೆ ಅವರ 3ನೇ ಪುತ್ರ ಎಸ್.ಎನ್. ಕಿರಣ್ ಶಂಕರ್ ಹೆಸರಿನಲ್ಲಿತ್ತು. ಆದರೆ, ನಿಜಲಿಂಗಪ್ಪ ಅವರ ವಿಲ್‌ನಂತೆ ಮನೆಯು ಸದ್ಯ ಅವರ ಮೊಮ್ಮಗನ ಹೆಸರಿನಲ್ಲಿದೆ. ಹೀಗಾಗಿ ಅವರಿಬ್ಬರ ಜೊತೆಗೆ ಅಧಿಕಾರಿಗಳು ಚರ್ಚೆ ನಡೆಸಿದ್ದು, ತಿಂಗಳಲ್ಲಿ ಮನೆ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದರು.

ಮನೆ ಖರೀದಿಸಿ, ಸಂರಕ್ಷಿಸಿ, ಅಭಿವೃದ್ಧಿಪಡಿಸಲು 5 ಕೋಟಿ ರೂ. ಮೀಸಲಿಡಲಾಗಿದೆ. ಆ ಪೈಕಿ 4.18 ಕೋಟಿ ಮನೆ ಖರೀದಿಗೆ ಹಾಗೂ 81.50 ಲಕ್ಷ ರೂ.ಗಳನ್ನು ಮನೆ ಅಭಿವೃದ್ಧಿಗೆ ಬಳಸಲಾಗುವುದು ಎಂದು ಮಾಹಿತಿ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.11.2024 ಶನಿವಾರ, ಮಳೆ ನಕ್ಷತ್ರ: ವಿಶಾಖ, 06.11.2024 ರಿಂದ 18.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಕೃತ್ತಿಕ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ನ್ಯೂ ಡಯಾಕೇರ್ ಸೆಂಟರ್ ಅಂಡ್ ಪಾಲಿಕ್ಲಿನಿಕ್ :** ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ಕಾಲ್ನಡಿಗೆ ಮೂಲಕ ಮಧುಮೇಹ ಜಾಗೃತಿ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು : ಡಾ. ಎ.ಆರ್. ರೇಣುಕಾಪ್ರಸಾದ್, ಡಾ. ನವ್ಯಪ್ರಸಾದ್, ಸ್ಥಳ: ನ್ಯೂ ಡಯಾಕೇರ್ ಸೆಂಟರ್, ಬೆಳಗ್ಗೆ 7ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು ನೋವು, ಸೊಂಟ ನೋವು, ಭುಜದ ನೋವು ಇತರೆ ತೊಂದರೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಓಕಿನವಾ ಕರಾಟೆ ಡು ಶೋರಿನ್ ಕೈ ಇಂಡಿಯಾ :** 27ನೇ ಶೋರಿನ್ ಕೈ ಕಪ್ ನ್ಯಾಷನಲ್ ಕರಾಟೆ ಚಾಂಪಿಯನ್‌ಶಿಪ್, ಉದ್ಘಾಟನೆ : ಡಾ. ಆಗಸ್ಟೀನ್ ಪೈಮ್‌ಪಲ್ಲಿಲ್ ಸಿಎಂಐ, ಪಾಲಿಕೆ ಮಾಜಿ ಸದಸ್ಯೆ ಸಾವಿತ್ರಿ ಸುರೇಶ್, ಮೇಘನ್ ಸಾರಥಿ, ಸ್ಥಳ: ಟೆರೇಷಿಯನ್ ಕಾಲೇಜು ಇಂಡೋರ್ ಸ್ಟೇಡಿಯಂ, ಸಿದ್ದಾರ್ಥನಗರ, ಬೆಳಗ್ಗೆ 9.15ಕ್ಕೆ.

■ **ಶಾರದಾ ವಿಲಾಸ ಕಾಲೇಜು :** ಹೆಚ್‌ಆರ್ ಮತ್ತು ಎನ್‌ಸಿಸಿ ಬ್ರಿಡ್ಜ್ ಪ್ರೋಗ್ರಾಂ, ಉಪಸ್ಥಿತರು : ಎಸ್‌ವಿಇಐ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಕಾರ್ಯದರ್ಶಿ ಎನ್. ಚಂದ್ರಶೇಖರ್, ಹೆಚ್.ಆರ್. ಪ್ರತಾಪ್, ರೋಹಿತ್ ಥಾಕುರ್, ಎಸ್.ಜೆ.ಎಸ್. ಸಂದಾರ್, ಪ್ರಾಸ್ತಾವಿಕ ಭಾಷಣ : ಹ್ಯಾರೀಸ್, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ವೆಂಕಟಕೃಷ್ಣಯ್ಯ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ಮಾರಾಟ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ಜಾಗತಿಕ ಲಿಂಗಾಯತ ಮಹಾಸಭಾ :** ಲಿಂಗಾಯತ ಧರ್ಮದ ವಚನಾಧಾರಿತ ನಿಜಾಚರಣೆಯ ಕಮ್ಮಟ, ಸಾನ್ನಿಧ್ಯ : ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಉದ್ಘಾಟನೆ : ಶ್ರೀ ನೀಲಕಂಠಸ್ವಾಮಿ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ, ಮುಖ್ಯ ಅತಿಥಿಗಳು : ಉಪವಿಭಾಗಾಧಿಕಾರಿ ಕೆ.ಆರ್. ರಕ್ಷಿತ್, ಸ್ಥಳ: ಪಂಚಗವಿ ಮಠ, ಗೌರಿಶಂಕರ ನಗರ, ಬೆಟ್ಟದ ತಪ್ಪಲು, ಬೆಳಗ್ಗೆ 9.30 ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಸಮರ್ಥನಂ ಸಂಸ್ಥೆ :** ಬೃಹತ್ ಉದ್ಯೋಗ ಮೇಳ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10 ರಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಸ್ನಾತಕೋತ್ತರ ವಿದ್ಯಾರ್ಥಿಗಳ ವೇದಿಕೆ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಪ್ರೊ. ಯಜ್ಞಮೂರ್ತಿ ಶ್ರೀಕಾಂತ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಪಿ. ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಹಾಲ್, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೂದಲು ಉದುರುವಿಕೆಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಡ್ರೀಮ್ಸ್ ಇಂಕ್ ಇನ್ನೋವೇಷನ್ ಕ್ರ್ಯೂ ಇವೆಂಟ್ಸ್ ಅಂಡ್ ಆಡ್ಸ್ :** ಬೃಹತ್ ಎಜುಕೇಷನ್ ಫೇರ್, ಸ್ಥಳ: ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 10 ರಿಂದ.

■ **ಏಷಿಯಾ ಪೆಸಿಫಿಕ್ ಇನ್‌ಸ್ಟಿಟ್ಯೂಟ್ ಆಫ್ ಎಂಬ್ರೈಯಾಲಜಿ, ಮೈಸೂರು ವಿಶ್ವವಿದ್ಯಾನಿಲಯ :** ರಿಸೆಂಟ್ ಅಡ್ವಾನ್ಸ್ ಇನ್ ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಸಂಸದ ಯದುವೀರ್, ಸ್ಥಳ: ಹೋಟೆಲ್ ಸದರರ್ನ್ ಸ್ಟಾರ್, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ಕನ್ನಡ ರಾಜ್ಯೋತ್ಸವದ ಸಂಭ್ರಮಾಚರಣೆ ಅಂಗವಾಗಿ ತಾಯಿ ನುಡಿಯ ಸಂಭ್ರಮ, ಜಾನಪದಗಳ ಜೀವಕಳೆ, ಮುಖ್ಯ ಅತಿಥಿಗಳು : ಆಕಾಶವಾಣಿ ಉದ್ಘೋಷಕ ಡಾ. ಉಮೇಶ್, ಉಪಸ್ಥಿತರು : ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಕೆ.ಎಸ್. ಸುರೇಶ್, ಪ್ರಾಂಶುಪಾಲರಾದ ಡಾ. ಎನ್. ವಾಣಿಶ್ರೀ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಛಾಯಾದೇವಿ ಬಿ.ಎಡ್. ಕಾಲೇಜು :** 17ನೇ ತಂಡದ ಪ್ರಶಿಕ್ಷಣಾರ್ಥಿಗಳ ಬೀಳ್ಕೊಡುಗೆ ಸಮಾರಂಭ, ಮುಖ್ಯ ಅತಿಥಿಗಳು : ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ಕಾಲೇಜು ಅಧ್ಯಕ್ಷ ಡಾ. ಬಾನುಪ್ರಕಾಶ್, ಅಧ್ಯಕ್ಷತೆ : ಪ್ರಾಂಶುಪಾಲ ಡಾ. ಅಂತೋಣಿ ಪಾಲ್‌ರಾಜ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಛತ್ರದ ಪುಟ್ಟಸ್ವಾಮಯ್ಯ ಸಮಾಜ ಸೇವಾ ಟ್ರಸ್ಟ್ :** ಛತ್ರದ ಪುಟ್ಟಸ್ವಾಮಯ್ಯ ವೃತ್ತ 13ನೇ ವರ್ಷದ ಸವಿನೆನಪು, ಸಂಸ್ಕೃತಿ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮ, ಉದ್ಘಾಟನೆ : ಹಿರಿಯ ಸಿವಿಲ್ ನ್ಯಾಯಾಧೀಶ ದಿನೇಶ್, ಅಧ್ಯಕ್ಷತೆ : ಮಾಜಿ ಮೇಯರ್ ಹೆಚ್.ಎನ್. ಶ್ರೀಕಂಠಯ್ಯ, ಮುಖ್ಯ ಅತಿಥಿಗಳು : ಮಾಜಿ ಉಪ ಮೇಯರ್ ಹೆಚ್.ಎಂ. ಶಾಂತಕುಮಾರಿ, ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಪಿ. ಪದ್ಮ, ಸ್ಥಳ: ಶ್ರೀಕಂಠೇಶ್ವರ ವಿದ್ಯಾಸಂಸ್ಥೆ, ಬೆಳಗ್ಗೆ 11.30ಕ್ಕೆ.

■ **ವ್ಯವಸ್ಥಾಪಕರು :** ಲೋಚನದ ಸಿರಿ ಸ್ವರಚಿತ ಕವನ ಸಂಕಲನದ ಕರ್ತೃ ಡಿ.ಪಿ. ಚಿಕ್ಕಣ್ಣ ಕಾವ್ಯನಾಮ–ದಾಮುಚಿ ಲೋಚನದ ಸಿರಿ ಕೃತಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ನಿವೃತ್ತ ಪ್ರಿನ್ಸಿಪಾಲ್ ವಿ. ಜವರಯ್ಯ, ಕೃತಿ ಲೋಕಾರ್ಪಣೆ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಚ್.ಶಿವರಾಮ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ಮಧ್ಯಾಹ್ನ 12ಕ್ಕೆ

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** ಮೈಕ್ರೋಕಾಸಮ್ 1.0 ಮೈಕ್ರೋಬಯೋಲಾಜಿ ಕಾನ್ಫರೆನ್ಸ್ ಸಮಾರೋಪ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಪ್ರೊ. ಅರುಣ್ ಕೆ. ಭೂನಿಯಾ, ಡಾ.ಆರ್. ಸುಧೀಂದ್ರ ಭಟ್, ಡಾ. ವಿಶಾಲ್‌ಕುಮಾರ್ ಗುಪ್ತಾ, ಡಾ. ಪ್ರಶಾಂತ್ ಎಂ. ವಿಶ್ವನಾಥ್, ಡಾ. ಕೆ.ಎ. ರವೀಶ, ಡಾ. ಪಿ. ಅಶ್ವಿನಿ, ಡಾ. ಅನ್ ಕ್ಯಾತರೀನ್ ಆರ್ಚರ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಮಧ್ಯಾಹ್ನ 3ಕ್ಕೆ

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು :** ಮೈಸೂರು ಪ್ರಜಾಪ್ರತಿನಿಧಿ ಸಭೆ : ಚಾರಿತ್ರಿಕ ಅವಲೋಕನ ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಮಾಜಿ ಸಚಿವ ಕೆ.ಆರ್. ರಮೇಶ್ ಕುಮಾರ್, ಅಧ್ಯಕ್ಷತೆ : ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಮುಖ್ಯ ಅತಿಥಿಗಳು : ವಿಭಾಗೀಯ ಪತ್ರಾಗಾರ ಕಚೇರಿ ಹಿರಿಯ ಸಹಾಯಕ ನಿರ್ದೇಶಕ ಎಚ್.ಎಲ್. ಮಂಜುನಾಥ, ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಆರ್. ಮೂಗೇಶಪ್ಪ, ಸ್ಥಳ: ಕಾಲೇಜು ಆವರಣ, ಊಟಿ ರಸ್ತೆ, ಸಂಜೆ 4.15ಕ್ಕೆ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ ಶ್ರೀ ಮಹದೇಶ್ವರರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಮಠದ ಆವರಣ, ಸಂಜೆ

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ವಸುಂಧರೋತ್ಸವ, 40ನೇ ವರ್ಷದ ರಾಷ್ಟ್ರೀಯ ಮಟ್ಟದ ಶಾಸ್ತ್ರೀಯ ಸಂಗೀತ–ನೃತ್ಯಗಳ ಹಬ್ಬ, ಡಾ.ವಸುಂಧರ ದೊರೆಸ್ವಾಮಿರವರ 75ನೇ ಜನ್ಮ ದಿನೋತ್ಸವ ಹಾಗೂ 50 ವರ್ಷಗಳ ಸಂಗೀತ–ನೃತ್ಯಕಲಾ ಸೇವೆಯ ಸಂಭ್ರಮ ಆಚರಣೆ, ನೃತ್ಯ ಕಾರ್ಯಕ್ರಮ, ಸಂಜೆ 6 ರಿಂದ ವಿದ್ವಾನ್ ಬದ್ರಿ ದಿವ್ಯಭೂಷಣ್ ಮತ್ತು ವಿದುಷಿ ಡಾ. ಅಂಜನಾ ಭೂಷಣ, ಸಂಜೆ 6.45 ರಿಂದ ವಿದುಷಿ ವರ್ಷಿಣಿ ಎಂ. ಆಸ್ಟ್ರೇಲಿಯಾ, ಸಂಜೆ 7.30 ರಿಂದ ಅಂಕಿತ ಶ್ರೀನಿಧಿ, ಹರ್ಷಿತ ಚಂಪಕುಮಾರ್, ಪುಷ್ಪ, ನಯನಶ್ರೀ, ಹಾಸಿನಿ, ಕೀರ್ತನ, ಗೌರವ ಅತಿಥಿಗಳು : ಸ್ಕಿಲ್ ಡೆವಲಪ್‌ಮೆಂಟ್, ಕತಾರ್ ನಿರ್ದೇಶಕ ಪಿ.ಎನ್. ಬಾಬುರಾಜನ್, ಸ್ಥಳ: ವಸುಂಧರ ಭವನ, ಕಾಮಾಕ್ಷಿ ಆಸ್ಪತ್ರೆ ರಸ್ತೆ.

■ **ಕಲಾಸುರುಚಿ:** ವಿಶ್ವನಾಥ ಮಿರ್ಲೆ ನೆನಪಿನ ಮಕ್ಕಳ ಇಂಗ್ಲಿಷ್ ನಾಟಕೋತ್ಸವ, ಸಂಜೆ 6ಕ್ಕೆ ಗೀತಾ ಶಿಶು ಶಿಕ್ಷಣ ಸಂಘದ ಮಕ್ಕಳಿಂದ ಕೃಷ್ಣ ಮತ್ತು ಸುಧಾಮ ಫ್ರೆಂಡ್‌ಶಿಪ್, ಸಂಜೆ 7ಕ್ಕೆ ದಿ ಆರ್ಕಿಡ್ ಪಬ್ಲಿಕ್ ಸ್ಕೂಲ್ ಮತ್ತು ಪಿಯು ಕಾಲೇಜು ಮಕ್ಕಳಿಂದ ತುಘಲಕ್ ನಾಟಕ ಪ್ರದರ್ಶನ. ಸ್ಥಳ: ಸುರುಚಿ ರಂಗಮನೆ.

■ **ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘ :** ಸಹಕಾರ ಸಪ್ತಾಹದ ಪ್ರಯುಕ್ತ ಹಿರಿಯ ಸಹಕಾರಿಗಳಿಗೆ ಪ್ರಶಸ್ತಿ, ಪ್ರತಿಭಾ ಪುರಸ್ಕಾರ ಸಮಾರಂಭ, ಸಾನ್ನಿಧ್ಯ : ಶ್ರೀ ಸೋಮನಾಥ ಸ್ವಾಮೀಜಿ, ಆಶೀರ್ವಚನ : ಶ್ರೀ ಅವಧೂತ ವಿನಯ ಗುರೂಜಿ, ಅಧ್ಯಕ್ಷತೆ : ನಾರಾಯಣ ವಿ. ಹೆಗಡೆ, ಉದ್ಘಾಟನೆ : ಗೃಹ ಸಚಿವ ಡಾ. ಜಿ. ಪರಮೇಶ್ವರ್, ಪ್ರಶಸ್ತಿ ಪ್ರದಾನ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸಾಧಕರಿಗೆ ಸನ್ಮಾನ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಆರ್. ಮಂಜುನಾಥ್, ರವಿಶಾಸ್ತ್ರಿ, ಸಿ. ನಾರಾಯಣಗೌಡ, ಸ್ಥಳ: ಹೋಟೆಲ್ ದಾಸ್‌ಪ್ರಕಾಶ್ ಪ್ಯಾರಡೈಸ್, ಯಾದವಗಿರಿ, ಸಂಜೆ 5ಕ್ಕೆ.

■ **ರೋಟರಿ ಇಂಟರ್‌ನ್ಯಾಷನಲ್ :** ಮಕ್ಕಳೊಂದಿಗೆ ಕನ್ನಡ ಹಬ್ಬ, ಮುಖ್ಯ ಅತಿಥಿಗಳು : ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ. ಎನ್. ಬೋರಲಿಂಗಯ್ಯ, ಮಹಾಜನ ಕಾಲೇಜು ಪ್ರಿನ್ಸಿಪಾಲ್ ಡಾ. ಬಿ.ಆರ್. ಜಯಕುಮಾರಿ, ಸ್ಥಳ: ರೋಟರಿ ವೆಸ್ಟ್ ಆಡಿಟೋರಿಯಂ, ಸಂಜೆ 5ಕ್ಕೆ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಮಂಡಲ ಪೂಜಾ, ಉತ್ಸವ, ಅನ್ನದಾನಂ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ತಪ್ಪಲು.

■ **ಕಲಾ ಸೌರಭ :** ಸಂಜೆ 5ರಿಂದ ಶ್ರೀಮತಿ ಲಲಿತಾ ಶ್ರೀನಿವಾಸನ್ ಅವರಿಂದ ಶ್ರೀ ವಾಲ್ಮೀಕಿ ರಾಮಾಯಣ ಕಥಾ ಮಾಲಿಕೆ, ಸಂಜೆ 6ಕ್ಕೆ ಕು. ಅನಘಾ ಭಾರದ್ವಾಜ್ ಅವರಿಂದ ಕಲ್ಯಾಣಿ ರಾಗದ ಪ್ರಾತ್ಯಕ್ಷಿಕೆ, ಸ್ಥಳ: ಶ್ರೀ ವಿದ್ಯಾಭಾರತಿ ಪ್ರಾರ್ಥನಾ ಮಂದಿರ, ವಿ.ವಿ. ಮೊಹಲ್ಲಾ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಮಲೆ ಮಾದೇಶ್ವರ ಸೇವಾ ಸಂಸ್ಥೆ :** ಮಕ್ಕಳ ದಿನಾಚರಣೆ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಡಾ. ರೇಖಾ ಅರುಣ್, ಡಾ. ರೇಖಾ ಮನಶಾಂತಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅಲೋಕ್ ಜೈನ್, ಗಗನ್ ದೀಪ್, ಸಮಾಜ ಸೇವಕ ಸುರೇಶ್ ಗೋಲ್ಡ್, ಕೆ.ಆರ್. ಬ್ಯಾಂಕ್ ಅಧ್ಯಕ್ಷ ಬಸವರಾಜ ಬಸಪ್ಪ, ಸಹನಾಗೌಡ, ಸ್ಥಳ: ಹೋಟೆಲ್ ಪ್ರೆಸಿಡೆಂಟ್, ಬಿ.ಎನ್. ರಸ್ತೆ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು– ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಸುಕೇಶ್. ಪಿ, ಸಹಾಯಕ ಪ್ರಾಧ್ಯಾಪಕರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ಪ್ರಾಯೋಜಕರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABHI-ಕರ್ನಾಟಕ, ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ – 'ವಿಶ್ವ ಮಧುಮೇಹ ದಿನಾಚರಣೆಯ ಸಂದರ್ಭದಲ್ಲಿ 'ಮಕ್ಕಳಲ್ಲಿ ಮಧುಮೇಹ– ನಿರ್ವಹಣೆ ಮತ್ತು ಚಿಕಿತ್ಸೆ' ಕುರಿತು ಡಾ.ತೃಪ್ತಿ. ಎಸ್.ಅವರೊಂದಿಗೆ ಮಾತುಕತೆ ಮತ್ತು 'ಮಧುಮೇಹ ನಿರ್ವಹಣೆಯಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ' ಕುರಿತು ಡಾ. ರೇಣುಕಾಪ್ರಸಾದ್. ಎ.ಆರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಎಂ. ಬಾಲಮುರಳೀಕೃಷ್ಣ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸೈಕಲ್ ಸವಾರಿ ಮಾತಿನ ಲಹರಿ', ಪ್ರಸ್ತುತಿ : ಜಾಂಪಣ್ಣ ಆಶೀಹಾಳ್

ಮಧ್ಯಾಹ್ನ: 12.35 ದೇವರನಾಮ– ಪ್ರತಿಭಾ, 12.45 ಕಾದಂಬರಿ ವಿಹಾರ – ಮುಂದಿನ ವಾರದಿಂದ ಬಿತ್ತರಗೊಳ್ಳಲಿರುವ ಕಾದಂಬರಿ ಓದಿನ ಕುರಿತು ಪ್ರಸ್ತಾವನೆ. ಪ್ರಸ್ತುತಿ : ಡಾ. ಮೈಸೂರು ಉಮೇಶ್, 1.00 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖಕರು ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಚಿಟ್ಟಿಬಾಬು–ವೀಣಾ ವಾದನ, 4.00 ಮಹಿಳಾರಂಗ–ಸಖೀ ಸಂವಾದ, ವಿಷಯ–ಹೆಂಡತಿಯ ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಗಂಡನ ಪಾತ್ರ, ಪ್ರಸ್ತುತಿ : ಸಹನ, ನೇತ್ರ, 4.30 ವೃತ್ತಿ ಮಾರ್ಗದರ್ಶನ– ಕರ್ನಾಟಕ ಮುಕ್ತ ವಿದ್ಯಾಲಯ ಅಂದರೆ ಓಪನ್ ಸ್ಕೂಲ್‌ನಲ್ಲಿ ಇರುವ ಅಧ್ಯಯನ ಅವಕಾಶಗಳು ಕುರಿತು ಮೈಸೂರಿನ ಜೆ.ಎಸ್.ಎಸ್ ಕರ್ನಾಟಕ ಮುಕ್ತ ವಿದ್ಯಾಲಯದ ನಿರ್ದೇಶಕರಾದ ಸಿ.ಎಸ್. ಶಿವಸ್ವಾಮಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 6.50 ಕೃಷಿರಂಗ : ವ್ಯವಸಾಯದ ತಮ್ಮ ಅನುಭವ ಹಂಚಿಕೊಳ್ಳುತ್ತಾರೆ. ಸಾಲಿಗ್ರಾಮ ತಾಲೂಕು ಮಿರ್ಲೆ ಹೋಬಳಿ ಬೀಚನಹಳ್ಳಿ ಕೊಪ್ಪಲು ಗ್ರಾಮದ ಶಿವಣ್ಣ, ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ 'ಶಬ್ದ ಮೀರಿದ ಆಲಿಸುವಿಕೆ ಹೇಗೆ? ಏಕೆ?' ಮಾತನಾಡುತ್ತಾರೆ–ಹೆಚ್. ಎಸ್. ಮಧುರಾಣಿ, 8.00 ರಸಮಂಜರಿ, ಕನ್ನಡವನ್ನು ಪೋಷಿಸಿದ ಸಂಸ್ಕೃತ. ಮಾತನಾಡುವವರು–ಡಾ. ಎಂ.ಎ. ಆಳ್ವಾರ್, ತರ್ಕದ ಭಾವವೇನು–ಮಾತನಾಡುವವರು –ಶ್ರೀನಿಧಿ ಪ್ಯಾಟಿ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಜಿ.ಎನ್. ಬಾಲಸುಬ್ರಹ್ಮಣ್ಯಂ – ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

ಒಳ ಮೀಸಲಾತಿ; ನ್ಯಾ॥ ನಾಗಮೋಹನ್‌ದಾಸ್ ಆಯೋಗ ರದ್ದು ಮಾಡಿ ಪೂರ್ಣ ಪ್ರಮಾಣದ ಸಮಿತಿ ರಚನೆಗೆ ಆಗ್ರಹ

ಮೈಸೂರು,ನ.15(ಎಂಟಿವೈ)– ಪರಿಶಿಷ್ಟ ಜಾತಿಗಳ ಒಳ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ ದಾಸ್ ಅವರ ಅಧ್ಯಕ್ಷತೆಯಲ್ಲಿ ರಚಿಸಿರುವ ಏಕ ಸದಸ್ಯ ಆಯೋಗವನ್ನು ರದ್ದು ಮಾಡಿ, ಪೂರ್ಣ ಪ್ರಮಾಣದ ಸಮಿತಿ ರಚಿಸಬೇಕು ಎಂದು ನೈಜ ಪರಿಶಿಷ್ಟ ಜಾತಿ (ಹೊಲೆಯ, ಮಾದಿಗ) ಸಮುದಾಯಗಳ ಸಾಂವಿಧಾನಿಕ ಹಕ್ಕು ಅವಕಾಶಗಳ ಸಂರಕ್ಷಣಾ ವೇದಿಕೆ ಮೈಸೂರು ವಿಭಾಗದ ಸಂಚಾಲಕ ಸಿ.ಎಂ. ಕೃಷ್ಣ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಸಮುದಾಯಗಳ ಒಳ ಮೀಸಲಾತಿ ಕುರಿತು ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠ ತೀರ್ಪು ನೀಡಿ, ನಿಗದಿತ ಕಾಲಮಿತಿಯೊಳಗೆ ಪಾರದರ್ಶಕವಾಗಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಿರುವುದು ಸ್ವಾಗತಾರ್ಹ. ಆದರೆ ಈಗ ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಮತ್ತೊಮ್ಮೆ ಏಕ ಸದಸ್ಯ ಆಯೋಗವನ್ನು ನಿವೃತ್ತ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವುದು ಖಂಡನೀಯ. ಇದು ನೈಜ ಪರಿಶಿಷ್ಟ ಜಾತಿ ಸಮುದಾಯಗಳನ್ನು ಪದೇ ಪದೇ ವಂಚಿಸುವ ಹುನ್ನಾರವಾಗಿದೆ ಎಂದು ಆರೋಪಿಸಿದರು.

ಸದಾಶಿವ ಆಯೋಗದ ವರದಿಯನ್ನು 12 ವರ್ಷಗಳಾದರೂ ಜಾರಿ ಮಾಡಲು ಸಾಧ್ಯವಾಗದೇ ಇರುವಾಗ ಕೇವಲ ಎರಡು ತಿಂಗಳಲ್ಲಿ ಎಲ್ಲಾ ಮಾಹಿತಿ ಪಡೆದು ವರದಿ ನೀಡುವಂತೆ ಹೇಳಿರುವುದು ಸಮಂಜಸವಲ್ಲ. ಇದು ಪ್ರಾಯೋಗಿಕವಾಗಿಯೂ ಸಾಧ್ಯವಾಗುವುದಿಲ್ಲ. ಇದು ಮತ್ತೊಮ್ಮೆ ನೈಜ ಪರಿಶಿಷ್ಟ ಜಾತಿಗಳ ನಡುವೆ ಬಿರುಕು ಮೂಡಿಸಿ ಸರಿ ತಪ್ಪುಗಳ ಪರ ವಿರೋಧ ಉಂಟಾಗಿ ಪರಸ್ಪರ ಕೆಸರೆರೆಚಾಟ, ಒಳಜಗಳಕ್ಕೆ ಕುಮ್ಮಕ್ಕು ನೀಡುವಂತದ್ದಾಗಿದೆ. ಈಗ ಪೂರ್ಣ ಸಮಿತಿ ರಚಿಸಬೇಕು. ಸಾಧ್ಯವಿಲ್ಲದಿದ್ದಲ್ಲಿ ಪಾರದರ್ಶಕ, ವಾಸ್ತವಿಕ, ವೈಜ್ಞಾನಿಕವಾಗಿರುವ ಹಿಂದುಳಿದ ವರ್ಗಗಳ ಆಯೋಗದ ವರದಿಯಾದ 1975 ರ ಎಲ್.ಜಿ. ಹಾವನೂರರ ವರದಿಯನ್ನೇ ಯಥಾವತ್ತಾಗಿ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಶಂಕರ್, ಸದಾನಂದ, ಆನಂದ್ ಕುಮಾರ್, ಎನ್. ವೆಂಕಟೇಶ್, ಚಿಕ್ಕಂದಾನಿ ಹಾಗೂ ಇನ್ನಿತರರು ಇದ್ದರು

71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ ಉದ್ಘಾಟನೆ



ಶುಕ್ರವಾರ ಚಿತ್ರದುರ್ಗದಲ್ಲಿ ನಡೆದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ರಾಜ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಜೊತೆಗೂಡಿ ಶಾಸಕರು ಹಾಗೂ ಮಹಾಮಂಡಳದ ಅಧ್ಯಕ್ಷರೂ ಆದ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಲೋಕಸಭಾ ಸದಸ್ಯ ಗೋವಿಂದ ಕಾರಜೋಳ, ಮಾಜಿ ಸಚಿವ ಹಾಗೂ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ಅಧ್ಯಕ್ಷ ವೆಂಕಟರಾವ್ ನಾಡಗೌಡ್ರು, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ಮಹಾಮಂಡಳದ ನಿರ್ದೇಶಕರಾದ ಗಂಗಣ್ಣ, ರಾಮರೆಡ್ಡಿ, ಚಿತ್ರದುರ್ಗ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ದ್ಯಾಮಣ್ಣ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷರು, ನಿರ್ದೇಶಕರು, ಯೂನಿಯನ್ ಉಪಾಧ್ಯಕ್ಷರು, ನಿರ್ದೇಶಕರು, ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳದ ನಿರ್ದೇಶಕರು, ಅಧಿಕಾರಿಗಳು, ಹಿರಿಯ ಸಹಕಾರಿಗಳು ಉಪಸ್ಥಿತರಿದ್ದರು.

ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳ ಆಯ್ಕೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಕರ್ನಾಟಕ ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಚಿದರವಳ್ಳಿ ಮಹಾದೇವಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಮೈಸೂರು ಜಿಲ್ಲಾ ಸದಸ್ಯರ ಸಭೆಯಲ್ಲಿ, ಮೈಸೂರು ಜಿಲ್ಲಾ ಕಾರ್ಯಕಾರಿ ಸಮಿತಿಗೆ ಗೌರವ ಅಧ್ಯಕ್ಷರಾಗಿ ಪಿ.ಎಂ.ಸಿದ್ದರಾಜು, ಅಧ್ಯಕ್ಷರಾಗಿ ಡಾ.ಬಸವರಾಜು, ಉಪಾಧ್ಯಕ್ಷರಾಗಿ ಲೋಕೇಶ್ವರ್, ಪ್ರಧಾನ ಕಾರ್ಯದರ್ಶಿಯಾಗಿ ಡಿ.ಎಂ.ಅಂಬರೀಶ್, ಖಜಾಂಚಿಯಾಗಿ ನಾಗರಾಜು.ಸಿ, ಜಂಟಿ ಕಾರ್ಯದರ್ಶಿಗಳಾಗಿ ಹೇಮಾವತಿ ಆರ್, ಎಂ. ಪ್ರದೀಪ್ ಕುಮಾರ್, ಹೆಚ್ ಬಸವರಾಜು, ಗಾಯತ್ರಿ, ಸಂಘಟನಾ ಕಾರ್ಯದರ್ಶಿಯಾಗಿ, ಮಹದೇವಯ್ಯ.ಬಿ.ಸಿ, ಮಾಧ್ಯಮ ಮತ್ತು ಸಾಹಿತ್ಯ ಸಂಘಟನಾ ಕಾರ್ಯದರ್ಶಿಯಾಗಿ ಎಂ.ಮಂಜುನಾಥ್, ಸಹ ಕಾರ್ಯದರ್ಶಿಗಳಾಗಿ ರಂಗಸ್ವಾಮಿ, ಬಸವಣ್ಣ. ಸಿ. ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಅಪ್ರಾಪ್ತ ಬಾಲಕಿ ಜನ್ಮವಿತ್ತ ನವಜಾತ ಶಿಶು ಹತ್ಯೆ ಕೇಸ್

ಶಿಶುವಿನ ತಾಯಿ ಸೇರಿ ಮೂವರ ಬಂಧನ

ಮಡಿಕೇರಿ, ನ.15– ಕೊಡಗು ಜಿಲ್ಲೆಯಲ್ಲಿ ಸಂಚಲನ ಸೃಷ್ಟಿಸಿದ್ದ, ಅಪ್ರಾಪ್ತ ಬಾಲಕಿ ಜನ್ಮ ನೀಡಿದ್ದ ಮಗುವನ್ನು ಹತ್ಯೆಗೈದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಮೃತ ನವಜಾತ ಶಿಶುವಿನ ತಾಯಿ, ಅಜ್ಜಿ ಹಾಗೂ ಅಜ್ಜ ಬಂಧನಕ್ಕೊಳಗಾದವರು.

ಕಳೆದ ಅ.17ರಂದು ಮಡಿಕೇರಿ ತಾಲೂಕಿನ ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 14 ವರ್ಷದ ಬಾಲಕಿಯೊಬ್ಬಳು ರಹಸ್ಯವಾಗಿ ಮಗುವಿಗೆ ಜನ್ಮ ನೀಡಿದ್ದಳು. ಆದರೆ ಪ್ರಸೂತಿಯಾಗಿ 4 ದಿನ ಕಳೆದರೂ ನವಜಾತ ಶಿಶು ಕಂಡುಬಂದಿರಲಿಲ್ಲ. ಆಸ್ಪತ್ರೆಯಿಂದ ಆ ಶಿಶು ನಾಪತ್ತೆಯಾಗಿತ್ತು.

ಒಂದು ವಾರ ಕಳೆದ ನಂತರ ನವಜಾತ ಶಿಶುವಿನ ಮೃತದೇಹ ಗುಂಡಿಯಲ್ಲಿ ಪತ್ತೆಯಾಗಿತ್ತು. ಮೊದಲಿಗೆ ಹೆತ್ತಾಕೆಯೇ ಮಗುವನ್ನು ನಾಪತ್ತೆ ಮಾಡಿರಬಹುದೆಂಬ ಶಂಕೆ ವ್ಯಕ್ತವಾಗಿತ್ತು. ನಂತರ ಅಜ್ಜಿಯೇ ಕೊಂದು ಹೂತಿಟ್ಟಿದ್ದ ಶಂಕೆ ವ್ಯಕ್ತವಾದಾಗ ಶಿಶು ಜನಿಸಿಯೇ ಇಲ್ಲ ಎಂದು ಅಜ್ಜಿ ವಾದಿಸಿದ್ದರು. ಆದರೆ ಗುಂಡಿಯಲ್ಲಿ ನವಜಾತ ಶಿಸುವಿನ ಮೃತದೇಹ ದೊರೆತಿದ್ದರಿಂದ ತನಿಖೆ ಮುಂದುವರೆದು ಅದರ ತಾಯಿ, ಅಜ್ಜಿ ಹಾಗೂ ಅಜ್ಜನ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ.

ತಾನು ಗರ್ಭಿಣಿಯಾಗಲು 13 ವರ್ಷದ ಬಾಲಕ ಕಾರಣ ಎಂದು ಬಾಲಕಿ ಆರೋಪಿಸಿದ್ದಳು. ಹೀಗಾಗಿ ಬಾಲಕನ ವಿರುದ್ಧ ಕೂಡ ಎಫ್‌ಐಆರ್ ದಾಖಲಾಗಿತ್ತು. ಆದರೆ ಶಿಶುವಿನ ಡಿಎನ್‌ಎ ಪರೀಕ್ಷೆ ನಡೆಸುವಂತೆ ಆತನ ಪೋಷಕರು ಆಗ್ರಹಿಸಿದ್ದರು. ಇದೀಗ ತನಿಖೆ ಮಾಡುವ ಸಂದರ್ಭಗಳಲ್ಲಿ ಬಾಲಕಿಯ ಪೋಷಕರೇ ಮಗುವನ್ನು ಹತ್ಯೆ ಮಾಡಿರಬೇಕು ಎಂದು ಪೊಲೀಸರು ಅನುಮಾನಗೊಂಡು ಇದೀಗ ಅವರನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.


ವಕ್ಫ್‌ನಿಂದ ಅತಿಕ್ರಮಣ ವಿರೋಧಿಸಿ ನ.25ರಿಂದ ಡಿ.25ರವರೆಗೆ ಬೀದರ್‌ನಿಂದ ಚಾಮರಾಜನಗರದವರೆಗೆ ಜಾಗೃತಿ ಜಾಥಾ

● ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಘೋಷಣೆ ● ಹಿಂದೂಗಳು ಯಾರು ಬೇಕಾದರೂ ಇದರಲ್ಲಿ ಪಾಲ್ಗೊಳ್ಳಬಹುದು; ಬೆಂಗಳೂರಲ್ಲಿ ಸಮಾರೋಪಕ್ಕೆ ಚಿಂತನೆ

ಮೈಸೂರು, ನ.15(ಎಸ್‌ಬಿಡಿ)– ವಕ್ಫ್‌ನಿಂದ ಅತಿಕ್ರಮಣ ವಿರೋಧಿಸಿ ಬೀದರ್‌ನಿಂದ ಚಾಮರಾಜನಗರದವರೆಗೆ ಜಾಗೃತಿ ಜಾಥಾ ನಡೆಸುವುದಾಗಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ಬಿಜೆಪಿಯಲ್ಲಿ ತಮ್ಮೊಡನೆ ರೆಬೆಲ್ ಪಡೆಯಲ್ಲಿ ಗುರುತಿಸಿಕೊಂಡಿರುವ ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ ಹಾಗೂ ಕುಮಾರ್ ಬಂಗಾರಪ್ಪ ಅವರೊಂದಿಗೆ ಮೈಸೂರಿನ ಚಾಮುಂಡಿಬೆಟ್ಟಕ್ಕೆ ಆಗಮಿಸಿ, ದೇವಿಯ ದರ್ಶನ ಪಡೆದ ನಂತರ ಮಾಧ್ಯಮಗಳೊಂದಿಗೆ ಅವರು ಮಾತನಾಡಿದರು.

ವಕ್ಫ್‌ನವರು ವಿಧಾನಸೌಧ, ಮೆಜೆಸ್ಟಿಕ್, ಹೊಯ್ಸಳರ ಕಾಲದ ದೇವಾಲಯವು ನಮ್ಮದೇ ಎನ್ನುತ್ತಿದ್ದಾರೆ. ರೈತರ ಪಹಣಿಯಲ್ಲಿ ಇದ್ದಕ್ಕಿದ್ದಂತೆ ವಕ್ಫ್ ಆಸ್ತಿ ಎಂದು ನಮೂದಾಗುತ್ತಿದೆ. ರಾಜ್ಯದಲ್ಲಿ ಲಕ್ಷಾಂತರ ಎಕರೆ ಭೂಮಿಗೆ ಕುತ್ತು ಬಂದಿದೆ. ಈ ಹಿನ್ನೆಲೆಯಲ್ಲಿ ರೈತರು, ಮಠಾಧೀಶರು ಸೇರಿ ರಾಜ್ಯಾದ್ಯಂತ ಅಭಿಯಾನ ಆರಂಭಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ನ.25ರಿಂದ ಡಿ.25ರವರೆಗೆ ಬೀದರ್‌ನಿಂದ ಚಾಮರಾಜನಗರದವರೆಗೆ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಬೆಂಗಳೂರಿನಲ್ಲಿ ಸಮಾರೋಪ ಸಮಾರಂಭ ನಡೆಸುವ ಚಿಂತನೆ ಇದೆ. ಹಿಂದೂಗಳ ಬಗ್ಗೆ ಕಾಳಜಿ ಇರುವ ಯಾರು ಬೇಕಾದರು ಈ ಅಭಿಯಾನದಲ್ಲಿ ಬಂದು ಭಾಗಿಯಾಗಬಹುದು. ಬಿಜೆಪಿಯಿಂದಲೇ ಈ ಅಭಿಯಾನ ನಡೆಯುತ್ತಿದೆ. ಬಿಜೆಪಿ ರಾಜ್ಯಾಧ್ಯಕ್ಷರು ಬರಲಿ ಎಂದು ಮಾಧ್ಯಮಗಳ ಮುಖಾಂತರ ಮನವಿ ಮಾಡುತ್ತೇನೆ ಎಂದು ಹೇಳಿದರು.



ಬಿಜೆಪಿ ನಾಯಕರಾದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ ಹಾಗೂ ಕುಮಾರ್ ಬಂಗಾರಪ್ಪ ಶುಕ್ರವಾರ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿ, ತಾಯಿಯ ದರ್ಶನ ಪಡೆದರು.


ಇದಕ್ಕೆ ಪೂರಕವಾಗಿ ಮಾತನಾಡಿದ ರಮೇಶ್ ಜಾರಕಿಹೊಳಿ, ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ನಡೆಯಲಿರುವ ಜಾಥಾಗೆ ಯಾರೇ ಬಂದರೂ ಸ್ವಾಗತ ಎಂದರು.

ಡಿಕೆಶಿಗೆ ಹೇಳಿದ್ದು: ನನ್ನನ್ನು ಮುಟ್ಟಿದರೆ ಕರ್ನಾಟಕ ಜನ ಸುಮ್ಮನಿರಲ್ಲ ಎಂಬ ಸಿದ್ದರಾಮಯ್ಯನವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಯತ್ನಾಳ್, ನನ್ನ ಮುಟ್ಟಿದ್ರೆ ಹುಷಾರ್ ಎಂದು ಸಿಎಂ ಹೇಳಿರೋದು ಆ ಸ್ಥಾನದ ಆಕಾಂಕ್ಷಿಯಾದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಹೊರತು ಬೇರೆ ಯಾರಿಗೂ ಅಲ್ಲ ಎಂದು ಹೇಳಿದರು.

ಕಾಂಗ್ರೆಸ್ ಶಾಸಕರಿಗೆ ತಲಾ 50 ಕೋಟಿ ಆಫರ್ ನೀಡಿದ್ದರು ಎಂಬ ಹೇಳಿಕೆಗೆ ಮುಖ್ಯಮಂತ್ರಿ ದಾಖಲೆ ನೀಡಲಿ. ಶಾಸಕರ ಖರೀದಿಗೆ ಯಾರು ಬಂದಿದ್ದರು ಎಂಬುದನ್ನು ಸಾಬೀತು ಮಾಡಲಿ. ಹಾದಿ–ಬೀದಿಲಿ ಹೋಗೋರು ಹೇಳಿರೋದಲ್ಲ. ರಾಜ್ಯದ ಸಿಎಂ ಹೇಳಿರೋದು. ಎಲ್ಲದಕ್ಕೂ ದಾಖಲೆ ಕೇಳುವ ಅವರೇ ಸುಮ್ಮನೆ ಏನೇನೋ ಹೇಳಬಾರದು ಎಂದರು.

ಗಂಡು ಮಕ್ಕಳಿಗೂ ಉಚಿತ ಬಸ್ ಪ್ರಸ್ತಾಪದ ಬಗ್ಗೆ ಪ್ರತಿಕ್ರಿಯಿಸಿ, ಇನ್ನು ಸ್ವಲ್ಪ ದಿನ ಇರಿ. ಈಗ ಇರುವ ಗ್ಯಾರಂಟಿಯೂ ನಿಲ್ಲುತ್ತದೆ. ಸರ್ಕಾರಿ ಬಸ್‌ಗಳಿಗೆ ಈಗ ಟೈರ್ ಇಲ್ಲ, ಇಂಜಿನ್ ಇಲ್ಲ. ಡಿ.ಕೆ.ಶಿವಕುಮಾರ್ ತನ್ನ ಮನೆಯಿಂದ ಡೀಸೆಲ್ ತಂದು ಹಾಕ್ತಾನಾ? ಎಂದು ಯತ್ನಾಳ್ ಏಕ ವಚನದಲ್ಲೇ ವಾಗ್ದಾಳಿ ನಡೆಸಿದರು.

ಹಾಸನ ಸಂಸದರ ಹುಟ್ಟುಹಬ್ಬ



ಹಾಸನ ಸಂಸದ ಶ್ರೇಯಸ್ ಪಟೇಲ್ ಅವರಿಗೆ ಹೊಳೆನರಸೀಪುರದ ಅವರ ನಿವಾಸದಲ್ಲಿ ಯುವ ಕಾಂಗ್ರೆಸ್ ಮುಖಂಡರಾದ ನಿಶಾಂತ್ ಪಟೇಲ್, ನಿತಿನ್, ಪುಟ್ಟಸ್ವಾಮಿ ಇನ್ನಿತರರು ಹುಟ್ಟುಹಬ್ಬದ ಶುಭಾಶಯ ಕೋರಿದರು.

ವಕ್ಫ್‌ನಿಂದ ಅತಿಕ್ರಮಣದ ನೈಜ ವರದಿ ಸಂಗ್ರಹಿಸಲು

'ನಮ್ಮ ಭೂಮಿ– ನಮ್ಮ ಹಕ್ಕು' ಘೋಷವಾಕ್ಯದಡಿ ಮೂರು ತಂಡ ರಚಿಸಿದ ರಾಜ್ಯ ಬಿಜೆಪಿ

ಬೆಂಗಳೂರು, ನ.15– ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ರೆಬೆಲ್ ಆಗಿ ಗುರುತಿಸಿಕೊಂಡಿರುವ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದಲ್ಲಿ ವಕ್ಫ್ ನಡೆ ಖಂಡಿಸಿ ಬೀದರ್–ಚಾಮರಾಜನಗರ ಬೃಹತ್ ಜಾಗೃತಿ ಜಾಥಾ ಹಮ್ಮಿಕೊಂಡಿರುವ ಬೆನ್ನಲ್ಲೇ ರಾಜ್ಯ ಬಿಜೆಪಿ, ರಾಜ್ಯಾದ್ಯಂತ ರೈತರು ಹಾಗೂ ಮಠಮಾನ್ಯಗಳ ಪಹಣಿಯಲ್ಲಿ ಸರ್ಕಾರದಿಂದ ವಕ್ಫ್ ಆಸ್ತಿ ಎಂದು ನಮೂದಿಸಿರುವುದರ ಬಗ್ಗೆ ನೈಜ ವರದಿ ಸಂಗ್ರಹಿಸಲು 'ನಮ್ಮ ಭೂಮಿ– ನಮ್ಮ ಹಕ್ಕು' ಘೋಷವಾಕ್ಯದಡಿ 3 ತಂಡಗಳನ್ನು ರಚಿಸಿದೆ. ಅಲ್ಲದೆ ಈ ತಂಡಗಳಲ್ಲಿ ಯತ್ನಾಳ್ ಹಾಗೂ ರಮೇಶ್ ಜಾರಕಿಹೊಳಿ ಹೆಸರನ್ನು ತಂಡಗಳಲ್ಲಿ ಸೇರಿಸಲಾಗಿದೆ

ತಂಡ 1: ಬಿ.ವೈ.ವಿಜಯೇಂದ್ರ, ಪ್ರಹ್ಲಾದ್ ಜೋಶಿ, ಜಗದೀಶ್ ಶೆಟ್ಟರ್, ಗೋವಿಂದ ಕಾರಜೋಳ, ಭಗವಂತ ಖೂಬಾ, ಡಾ.ಸಿ.ಎನ್.ಅಶ್ವಥ್ ನಾರಾಯಣ, ಮುರುಗೇಶ್ ನಿರಾಣಿ, ರಮೇಶ್ ಜಾರಕಿಹೊಳಿ, ಶ್ರೀರಾಮುಲು, ಈರಣ್ಣ ಕಡಾಡಿ, ಹಾಲಪ್ಪಾಚಾರ್, ಸುನೀಲ್ ವಲ್ಯಾಪುರೆ ಹಾಗೂ ವಕೀಲ ಎಂ.ಬಿ.ಜಿರಲಿ ತಂಡಕ್ಕೆ ಬೀದರ್, ಕಲಬುರುಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಗದಗ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳನ್ನು ವಹಿಸಲಾಗಿದೆ. ಪಿ.ರಾಜೀವ್ ತಂಡದ ಸಂಚಾಲಕ, ಅರುಣ್ ಶಹಾಪುರ, ಹರೀಶ್ ಪೂಂಜಾ ಹಾಗೂ ಡಾ.ಶೈಲೇಂದ್ರ ಬೆಲ್ದಾಳೆ ಅವರನ್ನು ಸಂಯೋಜಕರಾಗಿ ನಿಯೋಜಿಸಲಾಗಿದೆ.

ತಂಡ 2: ಆರ್.ಅಶೋಕ್, ಬಸವರಾಜ ಬೊಮ್ಮಾಯಿ, ಶೋಭಾ ಕರಂದ್ಲಾಜೆ, ಬಸನಗೌಡ ಪಾಟೀಲ್ ಯತ್ನಾಳ್, ರಾಜೂಗೌಡ, ಎಂ.ಪಿ.ರೇಣುಕಾಚಾರ್ಯ, ಎನ್.ಮಹೇಶ್, ದೊಡ್ಡನಗೌಡ ಪಾಟೀಲ್, ಭಾರತಿಶೆಟ್ಟಿ, ಡಾ.ಬಿ.ಸಿ.ನವೀನ್ ಕುಮಾರ್, ವಕೀಲ ವಸಂತಕುಮಾರ್ ತಂಡಕ್ಕೆ ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ಕೊಡಗು, ದಕ್ಷಿಣಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆ ವಹಿಸಲಾಗಿದ್ದು, ಜೆ.ಪ್ರೀತಂಗೌಡ ಸಂಚಾಲಕ, ವಿನಯ್ ಬಿದರೆ, ಡಿ.ಎಸ್.ಅರುಣ್, ಲಕ್ಷ್ಮೀ ಅಶ್ವಿನ್ ಗೌಡ ಸಂಯೋಜಕರಾಗಲಿದ್ದಾರೆ.

ತಂಡ 3: ಛಲವಾದಿ ನಾರಾಯಣಸ್ವಾಮಿ, ಡಿ.ವಿ.ಸದಾನಂದಗೌಡ, ವಿ.ಸೋಮಣ್ಣ, ಸಿ.ಟಿ.ರವಿ, ನಳೀನ್‌ಕುಮಾರ್ ಕಟೀಲ್, ಅರವಿಂದ ಲಿಂಬಾವಳಿ, ಎಸ್.ಮುನಿಸ್ವಾಮಿ, ಅರಗ ಜ್ಞಾನೇಂದ್ರ, ಬಿ.ಸಿ.ಪಾಟೀಲ್, ವೈ.ಎ.ನಾರಾಯಣಸ್ವಾಮಿ, ವಕೀಲ ವಿವೇಕ್ ಸುಬ್ಬಾರೆಡ್ಡಿ ತಂಡಕ್ಕೆ ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಧುಗಿರಿ, ಚಿತ್ರದುರ್ಗ, ದಾವಣಗೆರೆ, ಹಾವೇರಿ ಹಾಗೂ ಹುಬ್ಬಳ್ಳಿ ಜಿಲ್ಲೆಯನ್ನು ವಹಿಸಲಾಗಿದ್ದು, ವಿ.ಸುನೀಲ್ ಕುಮಾರ್ ಸಂಚಾಲಕ, ಅಶ್ವತ್ ನಾರಾಯಣ, ತಮ್ಮೇಶ್‌ಗೌಡ ಹಾಗೂ ಅಂಬಿಕಾ ಹುಲಿನಾಯ್ಕರ್ ಅವರನ್ನು ಸಂಯೋಜಕರಾಗಿ ನಿಯೋಜಿಸಲಾಗಿದೆ. ಈ ತಂಡಗಳು ತಮಗೆ ಸೂಚಿಸಿರುವ ಆಯಾಯ ಜಿಲ್ಲಾ ಕೇಂದ್ರಗಳಿಗೆ ಭೇಟಿ ನೀಡಿ, ವಿಸ್ತೃತ ವರದಿ ಸಂಗ್ರಹಿಸುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೂಚಿಸಿದ್ದಾರೆ.

ಪರಿಸರ ವಿಷಯದಲ್ಲಿ ಹುಡುಗಾಟ ಬೇಡ

● ಪರಿಸರವಾದಿಗಳೂ ಆದ ಹಿರಿಯ ನಟ ಸುರೇಶ್ ಹೆಬ್ಳೀಕರ್ ಸಲಹೆ ● ಮಹಾನಗರಗಳ ಮೂಲಸೌಕರ್ಯಕ್ಕಾಗಿ ಪರಿಸರ ನಾಶವಾಗುತ್ತಿದೆ:ಆತಂಕ ● ಜನರಿಗೆ ಸರಳ ಜೀವನ ಪರಿಕಲ್ಪನೆ ಮೂಡಿಸುವುದರತ್ತ ಸಂಘ–ಸಂಸ್ಥೆಗಳು ಗಮನಹರಿಸಲಿ



68ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಾದ ಹಿರಿಯ ಕಲಾವಿದರಾದ ಹೆಚ್.ಜನಾರ್ಧನ್(ಜನ್ನಿ), ಡಿ.ರಾಮು, ಸರಸ್ವತಿ ಜುಲೇನಾ ಬೇಗಂ, ಮಿರ್ಲೆ ಚಂದ್ರಶೇಖರ್ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಮೈಸೂರು, ನ15(ಎಸ್‌ಪಿಎನ್)– ಪಶ್ಚಿಮ ಘಟ್ಟ, ಅಲ್ಲಿನ ಪರಿಸರದ ಉಳಿವಿಗಾಗಿ ಬೃಹತ್ ಮಹಾನಗರಗಳ ಪರಿಕಲ್ಪನೆ, ಆಲೋಚನೆಯಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಿಂದೆ ಸರಿಯಬೇಕು ಎಂದು ಖ್ಯಾತ ಪರಿಸರವಾದಿ, ಸಿನಿಮಾ ನಿರ್ದೇಶಕ ಸುರೇಶ್ ಹೆಬ್ಳೀಕರ್ ಆಗ್ರಹಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ದಿ ಇನ್ ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ 68ನೇ ಕನ್ನಡ ರಾಜ್ಯೋತ್ಸವ ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಿ ಮಾತನಾಡಿದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ 30 ಕೋಟಿ ಜನಸಂಖ್ಯೆ ಇತ್ತು. ಪ್ರಸ್ತುತ ದೇಶದಲ್ಲಿ 145 ಕೋಟಿ ಜನಸಂಖ್ಯೆ ಇದೆ. ಎಲ್ಲರಿಗೂ ಮನೆ, ಮೊಬೈಲ್, ಕಾರು, ವಿದ್ಯುತ್ ಸೇರಿದಂತೆ ಇತರೆ ಸೌಕರ್ಯ ಒದಗಿಸಲು ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ಅವಲಂಬಿತವಾಗಬೇಕಾಗುತ್ತದೆ. ಇದರಿಂದ ಎಷ್ಟು ಪರಿಸರ ನಾಶವಾಗುತ್ತದೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ ಎಂದರು.

ಜನರನ್ನು ಮಹಾನಗರಗಳ ಕಲ್ಪನೆಯಿಂದ ಹೊರತರಬೇಕಿದೆ. ಇಲ್ಲದಿದ್ದರೆ, ಮುಂದೊಂದು ದಿನ ಬೃಹತ್ ಮಹಾನಗರಗಳಲ್ಲಿ ಜನರು ಬದುಕಲೂ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಬೆಂಗಳೂರಿನಲ್ಲಿ ಒಂದು ಬಡಾವಣೆಯಿಂದ ಇನ್ನೊಂದು ಬಡಾವಣೆಗೆ ಪ್ರಯಾಣ ಮಾಡಲು ತಾಸುಗಟ್ಟಲೆ ಕ್ರಮಿಸಬೇಕು. ಅಲ್ಲಿನ ಜನರು ಸಾಮಾಜಿಕ ಬಂಧಿಯಾಗಿ ನಿತ್ಯ ಜೀವಿಸುತ್ತಿದ್ದಾರೆ. ಇನ್ನು ಎಷ್ಟು ದಿನ ಅದೇ ರೀತಿ ಜೀವಿಸಲು ಸಾಧ್ಯ? ಎಂದು ಪ್ರಶ್ನಿಸಿದ ಅವರು, ಬೆಂಗಳೂರಿನ ಮೂಲ ನಿವಾಸಿಗಳಿಗೆ ಬೆಂಗಳೂರು ಬೃಹತ್ ಮಹಾನಗರವಾಗಿ ಬೆಳೆದಿರುವುದರಿಂದ ಅವರ ಬದುಕು ಹಿಂಸಾತ್ಮಕವಾಗಿ ಬದಲಾಗುತ್ತಿದೆ. ಅವರ ಮಕ್ಕಳ ಬಾಲ್ಯ ಕಮ್ಮರೆಯಾಗುತ್ತಿದೆ. ಅವರ ಬದುಕು ಸೀಮಿತ ಪ್ರದೇಶಗಳಿಗೆ ಸೀಮಿತವಾಗಿ ಬದುಕಿನ ಅರ್ಥವನ್ನೇ ಕಳೆದುಕೊಳ್ಳುತ್ತಿದ್ದಾರೆ ಎಂದು ಬೆಂಗಳೂರಿನ ವಾತಾವರಣವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಸರಳವಾಗಿ ಜೀವಿಸುವುದನ್ನು ಕಲಿಸಬೇಕು: ಬೃಹತ್ ಮಹಾನಗರ ಬೆಳವಣಿಗೆಗೆ ಮೂಲಸೌಕರ್ಯಗಳಾದ ನೀರು, ರಸ್ತೆ, ವಾಹನ, ಮೊಬೈಲ್, ವಿದ್ಯುತ್ ಸೇರಿದಂತೆ ಇತರೆ ಸೌಕರ್ಯಗಳನ್ನು ಪೂರೈಸಲು ಮತ್ತೆ ಪಶ್ಚಿಮ ಘಟ್ಟ ಸೇರಿದಂತೆ ಇತರೆ ಪರಸರವನ್ನು ಅವಲಂಬಿಸಬೇಕಿದೆ. ಇನ್ನು ಕೈಗಾರಿಕೆ ಸ್ಥಾಪನೆಗೆ ಕೃಷಿ ಪ್ರದೇಶಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಅಲ್ಲದೆ, ದೇಶದಲ್ಲಿ ಏರುತ್ತಿರುವ ಜನಸಂಖ್ಯೆ, ಅದಕ್ಕೆ ಅನುಗುಣವಾಗಿ ಬೇಡಿಕೆಗಳ ಪಟ್ಟಿಯೂ ದೊಡ್ಡದಿದೆ. ಹಾಗಾಗಿ ಜನರ ವೈಭೋಗದ ಮನಸ್ಥಿತಿಯಿಂದ ಸರಳ ಜೀವನದತ್ತ ಕರೆತರುವ ಕೆಲಸವನ್ನು ಸಂಘ–ಸಂಸ್ಥೆಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರ ಮಾಡಬೇಕು ಎಂದು ಒತ್ತಾಯಿಸಿದರು.

ಪರಿಸರದ ಮೇಲಿನ ಒತ್ತಡ ಕಡಿಮೆಗೊಳಿಸಿ: ಪ್ರಪಂಚದ ಒಟ್ಟು ಭೂಮಿಯಲ್ಲಿ ಶೇ.50ರಷ್ಟು ಸಮುದ್ರದ ನೀರು ಆವರಿಸಿದೆ. ಶೇ.10 ಹಿಮದಿಂದ ಕೂಡಿದೆ. ಇದರಲ್ಲಿ ಶೇ.20 ರಷ್ಟು ಮಾತ್ರ ಕಾಡುಗಳನ್ನು ಕಾಣಬಹುದು. ಶೇ. 20ರಷ್ಟು ಭೂಮಿಯಲ್ಲಿ 800 ಕೋಟಿ ಜನ ವಾಸಿಸಬೇಕಿದೆ. ಇವರಿಗೆ ಅನ್ನ, ನೀರು, ವಸತಿ ಹಾಗೂ ಯಂತ್ರೋಪಕರಣ ಪೂರೈಕೆಗೆ ದೊಡ್ಡ ದೊಡ್ಡ ಕೈಗಾರಿಕೆಗಳ ಸ್ಥಾಪನೆಗೂ ಮುಂದಾಗಬೇಕಾಗುತ್ತದೆ. ಹಾಗಾಗಿ ಇಂದಿನ ಕಾರ್ಯಕ್ರಮದಲ್ಲಿ ಬಹುತೇಕ ವಿವಿಧ ಕ್ಷೇತ್ರದ ಇಂಜಿನಿಯರ್‌ಗಳೇ ಪಾಲ್ಗೊಳ್ಳುವುದರಿಂದ ನನ್ನದೊಂದು ವಿನಂತಿ. ಮನೆಗಳನ್ನು ಕಟ್ಟಲು ಕಬ್ಬಿಣ, ಸಿಮೆಂಟ್ ಹಾಗೂ ಮರಗಳ ಉಪಯೋಗವನ್ನು ಆದಷ್ಟು ಕಡಿಮೆ ಮಾಡಬೇಕು. ಸುಸ್ಥಿರ ಪರಿಸರ ಉಳಿವಿಗೆ ಮುಂದಿನ ದಿನಗಳಲ್ಲಿ ನಿಮ್ಮ ಪಾತ್ರ ದೊಡ್ಡದಿದೆ ಎಂದು ತಿಳಿಸಿದರು.

ಈಗಾಗಲೇ ಪಶ್ಚಿಮ ಘಟ್ಟಗಳಲ್ಲಿ ನಗರಗಳಿಗೆ ಕುಡಿಯುವ ನೀರು ಪೂರೈಸುವ ಘಟಕಗಳು, ವಿದ್ಯುತ್ ಉತ್ಪಾದನಾ ಘಟಕಗಳು, ರಸ್ತೆ, ಕೈಗಾರಿಕೆ ಸ್ಥಾಪನೆ ಸೇರಿದಂತೆ ಇತರೆ ತಂತ್ರಜ್ಞಾನ ಆಧಾರಿತ ಅಭಿವೃದ್ಧಿಯಿಂದ ಪರಿಸರಕ್ಕೆ ಸಾಕಷ್ಟು ಹಾನಿಯಾಗುತ್ತಿದೆ. ಪಶ್ಚಿಮ ಘಟ್ಟಗಳಲ್ಲಿ ಮಳೆ ನೀರಿನ ಸಂಗ್ರಹ ದಿಂದ ಕುಡಿಯುವ ನೀರಿನ ಬಳಕೆಗಾಗಿ ಅನೇಕ ಹಳ್ಳಿ, ನಗರಗಳು ಅವಲಂಬಿತವಾಗಿದೆ. ಇದೀಗ ಮತ್ತಷ್ಟು ಒತ್ತಡ ಬಿದ್ದರೆ ಕಾಡುಗಳು ಸರ್ವನಾಶವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಪರಿಸರ ವಿಷಯದಲ್ಲಿ ಹುಡುಗಾಟ ಬೇಡ: ಪಶ್ಚಿಮಘಟ್ಟ ಒಳಗೊಂಡ ರಾಜ್ಯಗಳಲ್ಲಿ ಟೀ ಪ್ಲಾಂಟ್ ಸ್ಥಾಪನೆಯಿಂದ ಬೇರೆ ಗಿಡಗಳು ಬೆಳೆಯುವುದಿಲ್ಲ. ಇದರಿಂದ ಕಾಡಿನ ಪರಿಸರ ಏರುಪೇರಾಗಿ ಅದು ಮಳೆ ಋತುವಿನ ಮೇಲೂ ಪರಿಣಾಮ ಬೀರುತ್ತದೆ. ಇತ್ತೀಚೆಗೆ ಸ್ಪೇನ್, ಜರ್ಮನಿ, ಮಧ್ಯಪ್ರಾಚ್ಯದ ಮರುಭೂಮಿ ಪ್ರದೇಶಗಳಲ್ಲಿ ಏಕಾಏಕಿ ಪ್ರವಾಹ ಬಂದು ಅಲ್ಲಿನ ನಗರ, ಗ್ರಾಮಗಳೇ ಮುಳುಗಿವೆ. ಅಂತಹ ದುಸ್ಥಿತಿ ನಮ್ಮ ದೇಶಕ್ಕೆ ಬಾರದಂತೆ ತಡೆಗಟ್ಟುವುದು ಈ ನೆಲದ ಪ್ರತಿಯೊಂದು ನಾಗರಿಕನ ಕರ್ತವ್ಯ ಎಂದರಲ್ಲದೆ, ಇಂದಿನ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಲವಾರು ನಾಡು–ನುಡಿ, ಕಲೆಗಾಗಿ ದುಡಿದವರನ್ನು ಗುರುತಿಸಿ ಸನ್ಮಾನಿರುವುದು ಸಂತೋಷದ ಸಂಗತಿ ಎಂದರು.

ಈ ವೇಳೆ ರಾಜ್ಯೋತ್ಸವ ಪುರಸ್ಕೃತರಾದ ಹಿರಿಯ ಕಲಾವಿದರಾದ ಹೆಚ್.ಜನಾರ್ಧನ್(ಜನ್ನಿ), ಡಿ.ರಾಮು, ಸರಸ್ವತಿ ಜುಲೇನಾ ಬೇಗಂ, ಮಿರ್ಲೆ ಚಂದ್ರಶೇಖರ್ ಸೇರಿದಂತೆ ಇತರರನ್ನು ಸನ್ಮಾನಿಸಿದರು. ವೇದಿಕೆ ಯಲ್ಲಿ ಜಾನಪದ ಕಲಾವಿದ ಜಿ.ಅಮ್ಮರಾಮಚಂದ್ರ, ಐಇಐ ಅಧ್ಯಕ್ಷ ಡಾ.ಆರ್.ದೀಪು, ಗೌರವ ಕಾರ್ಯದರ್ಶಿ ಡಾ.ಮೋಹನ್‌ಕೃಷ್ಣ, ರಾಜ್ಯೋತ್ಸವ ಕಾರ್ಯಕ್ರಮದ ಸಂಚಾಲಕ ಎನ್. ಎಸ್.ಮಹದೇವಸ್ವಾಮಿ, ಆರ್.ಶ್ರೀನಾಥ್ ಸೇರಿದಂತೆ ಇತರರಿದ್ದರು.

'ಸಾಹಿತ್ಯ ಸೇತು ಸಮ್ಮಾನ್' ಪ್ರಶಸ್ತಿ ಪ್ರದಾನ



ಚೆನ್ನೈನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಭಾರತ ಸಾಹಿತ್ಯ ಮತ್ತು ಮೀಡಿಯಾ ಮಹೋತ್ಸವದಲ್ಲಿ ಉತ್ಕೃಷ್ಟ ದೀರ್ಘಕಾಲೀನ ಸಮರ್ಪಿತ ಹಾಗೂ ಉಲ್ಲೇಖನೀಯ ಹಿಂದಿ ಭಾಷೆ ಸಾಹಿತ್ಯದಲ್ಲಿ ಸೇವೆ ಸಲ್ಲಿಸಿರುವ ಸೇವಕರನ್ನು ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ಮೈಸೂರಿನ ಡಾ. ಪುಷ್ಪ ಎಲ್ ಅವರಿಗೆ 'ಸಾಹಿತ್ಯ ಸೇತು ಸಮ್ಮಾನ್' ಪ್ರಶಸ್ತಿ ಪ್ರದಾನ ಮಾಡಿದರು.

ನಕ್ಕರೆ ಅದೇ ಸ್ವರ್ಗ

ಹುಡುಗಿ : ಒಂದು ಕವನ ಹೇಳು ಪ್ಲೀಸ್...
ಹುಡುಗ : ನಿನ್ನ ನೋಡಿದಾಗ ನಾ ನನ್ನ ಮರೆತೆ...
ಹುಡುಗಿ : ವಾಹ್... ಸೂಪರ್... ಆಮೇಲೆ?
ಹುಡುಗ : ನಿನ್ನ ಫ್ರೆಂಡ್ ಅನ್ನು ನೋಡಿದ ಮೇಲೆ ನಿನ್ನನ್ನೇ ಮರೆತೆ!

ಮೈಸೂರು ಮಿತ್ರ

ಶನಿವಾರ, 16 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಕನ್ನಡ ಸನ್ಮಾನ ವೆನಗದುವೆ ವರಮಾನ, ಕನ್ನಡಿಗರ ಸ್ವತಂತ್ರವದೆ ಪರಮ ಮಂತ್ರ, ಕನ್ನಡದ ಕೀರ್ತಿ ಎನ್ನ ಚಿತ್ತದ ಸ್ಫೂರ್ತಿ, ಕನ್ನಡದ ಒಗ್ಗೂಟವೆನಗದೆ ಕಿರೀಟ. – ಬೆನಗಲ್ ರಾಮರಾವ್

ವೇದ ಸುಳ್ಳಾದರೂ { ಎಲ್ಲ ಕೆಡುಕಿಗೂ
ಗಾದೆ ಸುಳ್ಳಾಗದು { ಮೂಲ ಹೊಟ್ಟೆಕಿಚ್ಚು.

ನಿಮ್ಮ ಪತ್ರಗಳು

■ ರಾಜ್ಯ ಸರ್ಕಾರಕ್ಕೊಂದು ಮನವಿ ಸ್ಪರ್ಧಾತ್ಮಕ ಪರೀಕ್ಷೆ ಮೂಲಕವೇ ಹುದ್ದೆಗೆ ಆಯ್ಕೆ ನಡೆಸಲಿ!

ಮಾನ್ಯರೆ,

ರಾಜ್ಯ ಸರ್ಕಾರದ ಕೆಲವೊಂದು ಇಲಾಖೆಗಳಲ್ಲಿ ಗ್ರೂಪ್ 'ಡಿ' ಹುದ್ದೆಗೆ ಎಸ್‌ಎಸ್‌ಎಲ್ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಮಾನದಂಡದ ಆಧಾರದ ಮೇಲೆ ಆಯ್ಕೆ ನಡೆಯುವ ಪದ್ಧತಿ ಅನುಸರಿಸಿಕೊಂಡು ಹೋಗಲಾಗುತ್ತಿದ್ದು, ಇಂತಹ ಪದ್ಧತಿಯನ್ನು ರದ್ದುಪಡಿಸಬೇಕಿದೆ. ಯಾವುದೇ ಇಲಾಖೆಯ ಯಾವುದೇ ಹುದ್ದೆಗೆ ನೇಮಕಾತಿ ನಡೆಯುವ ಸಂಬಂಧ ಸ್ಪರ್ಧಾತ್ಮಕ ಪರೀಕ್ಷೆ ಕಡ್ಡಾಯ ಮಾಡುವ ಮುಖೇನ ಎಲ್ಲರಿಗೂ ನ್ಯಾಯ ಒದಗಿಸಲು ಸರ್ಕಾರ ಆದ್ಯತಾ ಕ್ರಮ ವಹಿಸಲಿ.

ಏಕೆಂದರೆ, ಕೇಂದ್ರ ನಾಗರಿಕ ಸೇವಾ ಪರೀಕ್ಷೆ (ಯುಪಿಎಸ್ಸಿ) ಯಿಂದ ಹಿಡಿದು ಬಹುತೇಕ ಎಲ್ಲಾ ಉನ್ನತ ಹುದ್ದೆಯ ಪರೀಕ್ಷೆಗಳು ಕಡ್ಡಾಯವಾಗಿ ಸ್ಪರ್ಧಾತ್ಮಕ ಪರೀಕ್ಷೆ ಮೂಲಕವೇ ನೇಮಕಾತಿ ಆಯ್ಕೆ ನಡೆಯುತ್ತಿದೆ ವಿನಃ ಇಲ್ಲಿ ಎಲ್ಲಿಯೂ ಅಂಕಗಳ ಮಾನದಂಡ ಮುಖ್ಯವಾಗಿಲ್ಲ. ಇದು ಎಲ್ಲರಿಗೂ ಮಾದರಿ ಹಾಗೂ ಅನುಕರಣೀಯವಾಗಬೇಕು.

ಮತ್ತೆ, ಈ ಮೊದಲು ರಾಜ್ಯದಲ್ಲಿ ಪಿಯುಸಿಯಲ್ಲಿ ಪಡೆದಿರುವ ಹೆಚ್ಚು ಅಂಕಗಳ ಆಧಾರದ ಮೇಲೆ ಗ್ರಾಮ ಆಡಳಿತಾಧಿಕಾರಿ ಹುದ್ದೆಗೆ ಆಯ್ಕೆ ನಡೆಯುವ ಪದ್ಧತಿಗೆ ತಿಲಾಂಜಲಿ ಇಟ್ಟು ಇತ್ತೀಚೆಗಷ್ಟೇ, ಪಿಯುಸಿ ವಿದ್ಯಾರ್ಹತೆಯ ಮಾನದಂಡದ ಮೇಲೆ ಗ್ರಾಮ ಆಡಳಿತಾಧಿಕಾರಿ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿದ್ದು ಸಾಕಷ್ಟು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ.

ಹಾಗಾಗಿ, ಇತ್ತೀಚೆಗಷ್ಟೇ ಅಧಿಸೂಚನೆ ಹೊರಡಿಸಲಾಗಿರುವ ಕೆಪಿಟಿಸಿಎಲ್‌ನ ವಿವಿಧ ಸರಬರಾಜುಗಳಲ್ಲಿನ ಕಿರಿಯ ಪರಿಚಾರಕ ಪವರ್ ಮ್ಯಾನ್, ಲೈನ್‌ಮ್ಯಾನ್ ಹುದ್ದೆಗಳಲ್ಲಿ ಕೇವಲ ಎಸ್‌ಎಸ್‌ಎಲ್ಸಿ ಅಂಕಗಳ ಮಾನದಂಡ ಕೈ ಬಿಟ್ಟು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಯ್ಕೆ ಪ್ರಕ್ರಿಯೆ ನಡೆಸಿದರೆ ಅರ್ಹ ಹಾಗೂ ಸಮರ್ಥರ ನೇಮಕವಾಗುತ್ತದೆ. ಉಳಿದ ಇನ್ನಿತರ ಎಲ್ಲ ರಾಜ್ಯಗಳಲ್ಲಿಯೂ ಸಹ ಇದೆ ರೀತಿಯಾದ ನೇಮಕಾತಿ ಪ್ರಕ್ರಿಯೆ ನಡೆಯುತ್ತಿರುವುದರಿಂದ ರಾಜ್ಯ ಸರ್ಕಾರ ಈ ಬಗ್ಗೆ ಚಿಂತನೆ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳುವ ಮೂಲಕ ಪ್ರತಿಯೊಬ್ಬರಿಗೂ ಸಮ್ಮತವಾಗುವ ನಡೆಯನ್ನು ಅನುಸರಿಸುತ್ತಾ ಲಕ್ಷಾಂತರ ಸ್ಪರ್ಧಾ ಆಕಾಂಕ್ಷಿಗಳ ಹಿತ ಕಾಯಲಿ.

– ಅನಿಲ್ ಕುಮಾರ್, ನಂಜನಗೂಡು.

■ ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಸಚಿವ ಜಮೀರ್ ಅಹಮದ್ ವಿರುದ್ಧ ಕ್ರಮ ಅಗತ್ಯ

ಮಾನ್ಯರೆ,

ರಾಜ್ಯದಲ್ಲಿ ಇತ್ತೀಚೆಗೆ ಮುಗಿದ ವಿಧಾನಸಭಾ ಉಪಚುನಾವಣೆಯ ಸಂದರ್ಭದಲ್ಲಿ ಚನ್ನಪಟ್ಟಣದ ಉಪ ಚುನಾವಣೆಯ ಬಹಿರಂಗ ಸಭೆಯಲ್ಲಿ ಮುಸ್ಲಿಮರು ನಾವು ಒಂದೊಂದು ರೂಪಾಯಿ ಸಂಗ್ರಹಿಸಿ ಮಾಜಿ ಪ್ರಧಾನಿ ದೇವೇಗೌಡರ ಕುಟುಂಬವನ್ನು ಖರೀದಿ ಮಾಡುತ್ತೇವೆ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ 'ಕರಿಯ' ಎಂದು ಸಚಿವ ಜಮೀರ್ ಅಹ್ಮದ್ ಹೇಳಿರುವುದು ಅಕ್ಷಮ್ಯ ಅಪರಾಧ. ಓರ್ವ ಜವಾಬ್ದಾರಿಯುತ ಸಚಿವರ ಈ ವರ್ತನೆ, ಅಧಿಕಾರ ಮತ್ತು ದುರಹಂಕಾರದ ಪರಮಾವಧಿ ಎನ್ನಿಸುತ್ತದೆ.

ಕಳೆದ ಒಂದು ವರ್ಷದ ಹಿಂದೆಯೂ ಡಿ.ಕೆ.ಶಿವಕುಮಾರ್ ಅವರನ್ನು ಗುರಿಯಾಗಿಟ್ಟುಕೊಂಡು ಒಕ್ಕಲಿಗರ ಬಗ್ಗೆ ಲಘುವಾಗಿ ಮಾತನಾಡಿ ನಂತರ ಬಹಿರಂಗವಾಗಿ ಒಕ್ಕಲಿಗರ ಕ್ಷಮೆ ಕೇಳಿದ್ದರು. ರಾಜ್ಯದ ಒಕ್ಕಲಿಗ ಸಮುದಾಯದವರು ಎಲ್ಲಾ ಜಾತಿ – ಜನಾಂಗದ ಜೊತೆ ಅನ್ಯೋನ್ಯವಾಗಿ, ಪ್ರೀತಿ–ವಿಶ್ವಾಸದಿಂದ ಇರುವಾಗ, ಜಮೀರ್‌ನಂತಹ ಅಲ್ಲೊಬ್ಬ – ಇಲ್ಲೊಬ್ಬರು ಜಾತಿ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಇಂತಹವರಿಗೆ ಒಕ್ಕಲಿಗ ಸಮುದಾಯವೇ ಬುದ್ಧಿ ಕಲಿಸುತ್ತದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಜಮೀರ್ ಮತ್ತು ಕುಮಾರಸ್ವಾಮಿ ಅವರು, ಗಳಸ್ಯ ಮತ್ತು ಗಂಟಸ್ಯ ಹಾಗಾಗಿ ಹೇಳಿರಬಹುದು ಎಂದು ಜಮೀರ್ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವುದು ತೀರಾ ನಾಚಿಕೆಗೇಡಿನ ಸಂಗತಿ. ನ್ಯಾಯಾಂಗ ವ್ಯವಸ್ಥೆ ಬಗ್ಗೆಯೂ ಹಗುರವಾಗಿ ಮಾತನಾಡುವ ಇಂತಹ ಉದ್ಧಟತನದ ಸಚಿವರನ್ನು ಸಂಪುಟದಿಂದ ವಜಾ ಮಾಡಬೇಕೆಂದು ಈ ಮೂಲಕ ಮನವಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಅರೇನಹಳ್ಳಿ ಕೆರೆಗೆ ತಡೆಗೋಡೆ ನಿರ್ಮಿಸಿ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕು ರಾವಂದೂರು ಹೋಬಳಿ ಅರೇನಹಳ್ಳಿ ಗ್ರಾಮದಲ್ಲಿ ಜನ–ಜಾನುವಾರುಗಳಿಗೆ ಜೀವನಾಡಿಯಾಗಿವೆ. ಒಂದು ಹೊಸಕಟ್ಟೆ ಮತ್ತೊಂದು ಮುಳ್ಳಕೆರೆ. ಅವು ಒಂದೋ ಮಳೆಯಿಂದಲೋ ಅಥವಾ ಮತ್ತಿತರ ಜಲ ಮೂಲದಿಂದಲೋ ಭರ್ತಿಯಾಗುತ್ತವೆ. ಆದರೆ ಇವುಗಳ ನೀರು ಸಂಗ್ರಹಿಸುವ ತಡೆಗೋಡೆಗಳು ಶಿಥಿಲಗೊಂಡು ಇರುವ ನೀರೆಲ್ಲಾ ಸೋರಿ ಕೆರೆಗಳು ಖಾಲಿಯಾಗಿ ಅಗತ್ಯ ಸಂದರ್ಭದಲ್ಲಿ ನೀರು ಇಲ್ಲವಾಗುತ್ತಿದೆ. ಈಗ ಕೆರೆ ತುಂಬಿದೆ. ಅದರ ಪಾತ್ರದಲ್ಲಿ ಭತ್ತದ ಗದ್ದೆಬಯಲು ಹಸಿರಾಗಿ ಕಂಗೊಳಿಸುತ್ತಿದ್ದು, ಇನ್ನೇನು ಫಸಲು ಬರುವ ಕಾಲಕ್ಕೆ ಕೆರೆ ನೀರು ಖಾಲಿಯಾಗಿ ಆನಂತರ ತೊಂದರೆ ಆಗುತ್ತದೆ. ಇದಕ್ಕೆ ಪ್ರಮುಖ ಕಾರಣ ಎಷ್ಟೋ ವರ್ಷಗಳ ಹಿಂದೆ ನಿರ್ಮಿಸಿದ ತಡೆಗೋಡೆ.

ಕಾಲಕಾಲಕ್ಕೆ ಅದರ ಸರಿಯಾದ ನಿರ್ವಹಣೆ ಇಲ್ಲದೆ ಈಗ ತುಂಬಾ ಶಿಥಿಲಗೊಂಡು ಇರುವ ನೀರು ಸುಖಾಸುಮ್ಮನೆ ಸೋರಿ ಹೋಗಿ, ಕೆರೆ ಖಾಲಿಯಾಗಿ ಅನಗತ್ಯವಾಗಿ ತೊಂದರೆ ತಂದೊಡ್ಡುತ್ತಿದೆ. ಕೆರೆಯ ತಡೆಗೋಡೆಯಲ್ಲಿ ಸಣ್ಣ ಸಣ್ಣ ಬಿರುಕುಗಳಾಗಿ ಅದರ ಮೂಲಕವೇ ದಿನಪೂರ್ತಿ ನೀರು ಪೋಲಾಗುತ್ತಿದೆ. ಇದರಿಂದ ಗ್ರಾಮದ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಜನರ ಬಟ್ಟೆಯ ಶುಚಿಗೆ, ಬೆಳೆಗಳ ರಕ್ಷಣೆಗೆ ನೀರು ಇಲ್ಲದೇ ತತ್ವಾರವಾಗುತ್ತದೆ. ಈ ಬಗ್ಗೆ ಸ್ಥಳೀಯ ಮುಖಂಡರು ಹಾಗೂ ಗ್ರಾಮ ಪಂಚಾಯತ್ ಸದಸ್ಯರು ಯಾವುದೇ ರೀತಿಯ ಗಮನಹರಿಸಿಲ್ಲ. ಆದ್ದರಿಂದ ಪಿರಿಯಾಪಟ್ಟಣ ತಾಲೂಕಿನ ವ್ಯಾಪ್ತಿಗೆ ಒಳಪಡುವ ಕೆರೆ ಸಂರಕ್ಷಣೆ ಸಂಬಂಧಿತ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಮನವಿ.

–ಅರೇನಹಳ್ಳಿ ಗ್ರಾಮಸ್ಥರು, ಪಿರಿಯಾಪಟ್ಟಣ ತಾಲೂಕು



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಸದ್ಯ ಭಾರತ–ಚೀನಾ ಗಡಿಯಲ್ಲಿ ದೀಪಾವಳಿ ಸಂಭ್ರಮ?

ಸಾಮಾನ್ಯವಾಗಿ ಚೀನಿ ಸೇನೆ ತಾನು ಅತಿಕ್ರಮಿಸಿದ ಪ್ರದೇಶದಿಂದ ಇದುವರೆಗೆ ಹಿಂದೆ ಸರಿದ ದಾಖಲೆಗಳಿಲ್ಲ. ವಿವಾದಿತ ಪ್ರದೇಶಗಳನ್ನು ತನ್ನದೆಂದು ಯಾವುದೇ ಹಿಂಜರಿಕೆ ಇಲ್ಲದೇ ಪ್ರತಿಪಾದಿಸುವ ಮೂಲಕ ಚೀನಾ ತಾನೊಂದು ಜಗಳಗಂಟಿ ರಾಷ್ಟ್ರವೆನಿಸಿಕೊಂಡಿದೆ. ದಕ್ಷಿಣ ಚೀನಾ ಸಮುದ್ರ ಪ್ರದೇಶ, ಜಪಾನ್‌ನ ಸೇನ್ ಶಾಕೆ ದ್ವೀಪ ಫಿಲಿಫೈನ್ಸ್‌ನ ಸಾಗರ ಪ್ರದೇಶ, ತೈವಾನ್‌ನೊಂದಿಗೆ ನಿರಂತರವಾಗಿ ಗಡಿ ತಕರಾರು ಮುಂದುವರೆಸಿಕೊಂಡು ಬಂದಿದೆ.

1962ರ ಯುದ್ಧದಲ್ಲಿ ಭಾರತದ ಸುಮಾರು 38 ಸಾವಿರ ಚ.ಕಿ.ಮೀ ಭೂಮಿಯನ್ನು ಆಕ್ರಮಿಸಿದ ನಂತರವೂ ಪೂರ್ವ ಲಡಾಕ್ ಹಾಗೂ ಅರುಣಾಚಲಪ್ರದೇಶ ತನ್ನದೆಂದು ಪ್ರಭುತ್ವ ಸ್ಥಾಪಿಸಲು ಪ್ರಯತ್ನ ಮುಂದುವರೆಸಿದೆ. 1962ರ ಯುದ್ಧದ ನಂತರ ಆರಂಭವಾದ ಭಾರತ–ಚೀನಾ ಗಡಿ ಸಮಸ್ಯೆ ಇನ್ನೂ ಕಗ್ಗಂಟಾಗಿ ಉಳಿದಿದೆ.

ಉಭಯ ದೇಶಗಳ ನಡುವಿನ ಗಡಿ ಗುರುತಿಸುವಿಕೆಯಾಗದ ಕಾರಣ ವಾಸ್ತವಿಕ ಗಡಿ ನಿಯಂತ್ರಣ ರೇಖೆಯೇ(ಎಲ್‌ಎಸಿ) ನಿರಂತರ ಉದ್ವಿಗ್ನತೆ, ಬಿಕ್ಕಟ್ಟಿನ, ಘರ್ಷಣೆಯ ಮೂಲವಾಗಿದೆ. 2020ರಲ್ಲಿ ಗಲ್ವಾನ್ ಘಾಟಿಯಲ್ಲಾದ ಹಿಂಸಾತ್ಮಕ ಘರ್ಷಣೆ ಗಡಿ ಸಂಬಂಧಿ ಬಿಕ್ಕಟ್ಟಿನಿಂದಲೇ ಸಂಭವಿಸಿತ್ತು.

ಉಭಯ ದೇಶಗಳಿಗೆ ಗಲ್ವಾನ್ ಪ್ರದೇಶವು ಅತ್ಯಂತ ಆಯಕಟ್ಟಿನ ಪ್ರದೇಶವಾಗಿದೆ. ಇಲ್ಲಿನ ಗಲ್ವಾನ್ ನದಿಯು ಅಕ್ಸಾಯ್ ಚಿನ್ ವಲಯ ದಿಂದ ಲಡಾಕ್‌ಗೆ ಹರಿಯುತ್ತದೆ. 1962ರ ಯುದ್ಧದಲ್ಲಿ ಚೀನಾವು ಅಕ್ಸಾಯ್ ಚಿನ್ ಪ್ರದೇಶವನ್ನು ಭಾರತದಿಂದ ಕಿತ್ತುಕೊಂಡಿತ್ತು. ಗಲ್ವಾನ್ ನದಿ ಕಣಿವೆಯ ಮೇಲೆ ನಿಯಂತ್ರಣ ಸಾಧಿಸಿದ್ದಲ್ಲಿ ಚೀನಿ ಸೇನೆಗೆ ಅಕ್ಸಾಯ್ ಚಿನ್ ಪ್ರದೇಶದಿಂದ ಲಡಾಕ್ ಮೇಲೆ ಅತಿಕ್ರಮಣ ನಡೆಸಲು ಸುಲಭವಾಗುವುದು. ಈ ಕಾರಣದಿಂದ ಗಲ್ವಾನ್ ಎರಡೂ ದೇಶಗಳ ನಡುವಿನ ಘರ್ಷಣೆಯ ಪ್ರದೇಶವಾಗಿದೆ. 2020ರ ಜೂನ್ 14ರಂದು ಭಾರತ–ಚೀನಾ ಸೈನಿಕರ ಕಾಳಗವೇ ನಡೆದು, ಭಾರತದ ಕಡೆಯ 20, ಅತ್ತ ಕಡೆ ಅದಕ್ಕೂ ಅಧಿಕ ಮಂದಿ ಸೈನಿಕರು ಬಲಿಯಾಗಿದ್ದರು.

ಆದರೆ ಯುದ್ಧ ಸಂಭವಿಸಲಿಲ್ಲ. ಏಕೆಂದರೆ ಉಭಯ ದೇಶಗಳ ಮಧ್ಯೆ ಗಡಿ ಗುರುತಿಸುವಿಕೆ ಆಗದೇ ಇರುವುದರಿಂದ ಈ ಅತಿಕ್ರಮಣದ ಸಮಸ್ಯೆ ತಲೆದೋರಿದೆ ಎಂದು ಎರಡೂ ದೇಶಗಳಿಗೆ ತಿಳಿದಿತ್ತು. ಒಂದೆಡೆ ಯುದ್ಧದ ತಯಾರಿ ನಡೆಸುತ್ತಿದ್ದರೂ ಇನ್ನೊಂದೆಡೆ ವಿವೇಕ, ವಿವೇಚನೆಯಿಂದ ಯುದ್ಧ ತಡೆಯುವ ಪ್ರಯತ್ನಗಳು ಆರಂಭವಾಗಿತ್ತು. ಸಂಬಂಧ ಹದಗೆಟ್ಟಿದ್ದರೂ ಎಲ್‌ಎಸಿ ಉದ್ದಕ್ಕೂ ಶಾಂತಿಯನ್ನು ಪುನಃ ಸ್ಥಾಪಿಸಲು ರಾಜತಾಂತ್ರಿಕ ಹಾಗೂ ಮಿಲಿಟರಿ ಕಮಾಂಡರ್‌ಗಳ ಮಟ್ಟದಲ್ಲಿ ಹಲವು ಸುತ್ತಿನ ಮಾತುಕತೆಗಳು ನಿರಂತರವಾಗಿ ನಡೆಯುತ್ತಿದ್ದವು. ನಾಲ್ಕೂವರೆ ವರ್ಷಗಳಿಂದ ಗಡಿಯಲ್ಲಿ ನಡೆಯುತ್ತಿದ್ದ ಸೇನಾ ಮುಖಾಮುಖಿಯಿಂದ ಚೀನಾ ಬಸವಳಿದಿತ್ತು. ಗಡಿಯಲ್ಲಿ ಭಾರತೀಯ ಸೇನೆ ತೋರಿದ ಕಠಿಣ ನೀತಿಯಿಂದ ಚೀನಾ ಹತಾಶಗೊಂಡಿತ್ತು. ಗೌರವಯುತವಾಗಿ ಗಡಿ ಬಿಕ್ಕಟ್ಟನ್ನು ಪರಿಹರಿಸಲು ಉತ್ಸುಕಗೊಂಡಿತ್ತು.

ಚೀನಾ ಸಂಧಾನಕ್ಕೆ ಒಪ್ಪಿದ್ದು ಏಕಾಏಕಿ ಆದ ಜ್ಞಾನೋದಯದಿಂದಲ್ಲ. ಇದರ ಹಿಂದೆ ಅನೇಕ ಕಾರಣಗಳಿವೆ. ಕೋವಿಡ್ ನಂತರ ಚೀನಾ ಆರ್ಥಿಕತೆ ಪಾತಾಳಕ್ಕಿಳಿದಿತ್ತು. ಜಿಡಿಪಿ ಬೆಳವಣಿಗೆ ಕುಂಠಿತಗೊಂಡಿತ್ತು. ಚೀನಾದ ರಿಯಲ್ ಎಸ್ಟೇಟ್ ವಲಯ ಮಕಾಡೆ ಮಲಗಿತ್ತು. ಅಮೆರಿಕ ಹೇರಿದ ನಿರ್ಬಂಧಗಳು ಹಾಗೂ ಅಮೆರಿಕಾದಲ್ಲಿರುವ ಚೀನಿ ಆಸ್ತಿಗಳನ್ನು ಸ್ತಂಭನಗೊಳಿಸಿದ್ದರಿಂದ ಚೀನಾ ಹೈರಾಣಾಗಿತ್ತು. ಕ್ವಾಡ್ (QUAD) ಬಲಿಷ್ಠವಾಗುತ್ತಿರುವುದರಿಂದ ಜಿನ್‌ಪಿಂಗ್ ಆತಂಕಗೊಂಡಿದ್ದರು. ವಿಶ್ವ ವೇದಿಕೆಗಳಲ್ಲಿ ಭಾರತ ಮತ್ತು ಮೋದಿಯವರ ವರ್ಚಸ್ಸು ಏರುತ್ತಿದ್ದುದು ಜಿನ್‌ಪಿಂಗ್‌ರ ನಿದ್ದೆಗೆಡಿಸಿತ್ತು. ಗಲ್ವಾನ್ ಘರ್ಷಣೆಯಲ್ಲಿ ಭಾರತೀಯ ಯೋಧರ ಪರಾಕ್ರಮವು ಚೀನಿ ಸೈನಿಕರಲ್ಲಿ ಭೀತಿ ಮೂಡಿಸಿತ್ತು. ಚೀನಾದ ಆಮದು ಉತ್ಪನ್ನಗಳ ಮೇಲೆ ಭಾರತ ಹೇರಿದ ಹೆಚ್ಚುವರಿ ಸುಂಕ ಹಾಗೂ ಚೀನಿ ತಂತ್ರಜ್ಞರ ವೀಸಾಗಳ ಮೇಲೆ ಭಾರತ ಹೇರಿದ ನಿರ್ಬಂಧಗಳು ಚೀನಾಕ್ಕೆ ಆರ್ಥಿಕ ಹೊಡೆತ ನೀಡಿತ್ತು. 2014ರವರೆಗೆ ನೆರೆ ದೇಶಗಳ ಭೂಮಿಯನ್ನು ಅತಿಕ್ರಮಿಸಲು ಚೀನಿ ಸೇನೆ ಪ್ರಯೋಗಿಸುತ್ತಿದ್ದ 'ಸಲಾಮಿ ಸ್ಲೈಸಿಂಗ್' ತಂತ್ರವನ್ನು ಭಾರತೀಯ ಸೇನೆ ಬಳಸಿ, ಚೀನಾ ತನ್ನದೆಂದು ಹೇಳುತ್ತಿದ್ದ ಪ್ರದೇಶಗಳ ಮೇಲೆ ಪ್ರಯೋಗಿಸಿ ಅತಿಕ್ರಮಿಸಿದ್ದರಿಂದಲೂ ಚೀನಾ ಮೆತ್ತಗಾಯಿತು. ಚೀನಾದಲ್ಲಿ ಜಿನ್‌ಪಿಂಗ್ ತನ್ನ ಜನಪ್ರಿಯತೆ, ವರ್ಚಸ್ಸು ಕುಸಿಯುತ್ತಿರುವುದರಿಂದಲೂ ಆತಂಕಗೊಂಡಿದ್ದರು. ಇವೆಲ್ಲದರ ಪರಿಣಾಮ ಗಳು ಚೀನಾವನ್ನು ಮಾತುಕತೆಯ ಮೇಜಿಗೆ ಕರೆತಂದಿತು.



> ಭಾರತವು ಚೀನಾದೊಂದಿಗೆ ಸಂಘರ್ಷ ಬಯಸಿರಲಿಲ್ಲ. ಭಾರತ ಹೇರಿದ ಕೆಲವು ಆರ್ಥಿಕ ನಿರ್ಬಂಧಗಳಿಂದ ಚೀನಾದ ಹೂಡಿಕೆ ಬಹುಮಟ್ಟಿಗೆ ನಿಂತು ಹೋಗಿತ್ತು. ಈ ಅವಕಾಶ ಬಳಸಿ ಭಾರತೀಯ ಉದ್ಯಮಪತಿಗಳಿಗೆ ಹೂಡಿಕೆ ಮಾಡಲು ಭಾರತ ಸರ್ಕಾರ ಕರೆಕೊಟ್ಟಿತ್ತು. ಆದರೆ ಉದ್ಯಮಪತಿಗಳಿಂದ ನಿರೀಕ್ಷಿತ ಮಟ್ಟದಲ್ಲಿ ಹೂಡಿಕೆಯಾಗಲಿಲ್ಲ. ಇದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಹಿಂಜರಿತ ಉಂಟಾಗಿತ್ತು. ಭಾರತಕ್ಕೆ ಚೀನಾದ ಹೂಡಿಕೆ ಅನಿವಾರ್ಯವಾಗಿತ್ತು. ಗಡಿ ತಕರಾರಿನಿಂದ ಭಾರತಕ್ಕೆ ಇತರ ಸಮಸ್ಯೆಗಳತ್ತ ಗಮನಹರಿಸಲು ಸಾಧ್ಯವಾಗುತ್ತಿರಲಿಲ್ಲ. ಅಮೆರಿಕ ಹಾಗೂ ಅದರ ಮಿತ್ರ ದೇಶಗಳ ಕುತಂತ್ರಗಳನ್ನು ತಡೆಯಲು ಚೀನಾ ಸದಸ್ಯ ರಾಷ್ಟ್ರವಾಗಿರುವ Brics ಮತ್ತು Scoಗಳು ಬಲಿಷ್ಠವಾಗಬೇಕಿತ್ತು. ಚೀನಾದೊಂದಿಗೆ ಸಂಬಂಧ ಸುಧಾರಣೆಯಾದರೆ ಮಾತ್ರ ಇದು ಸಾಧ್ಯ ಎಂದು ಭಾರತದಂತೆ ಚೀನಾಕ್ಕೂ ಅರ್ಥವಾಗಿತ್ತು. ಈ ರೀತಿ ನಾಲ್ಕೂವರೆ ವರ್ಷಗಳಲ್ಲಿ ಎರಡೂ ದೇಶಗಳ ಪರಸ್ಪರ ಸಂಬಂಧ ಸುಧಾರಿಸಲು ಆತುರಗೊಂಡ ಫಲವಾಗಿ ಈ ಒಪ್ಪಂದ ಸಂಭವಿಸಿದೆ.

ಭಾರತವು ಚೀನಾದೊಂದಿಗೆ ಸಂಘರ್ಷ ಬಯಸಿರಲಿಲ್ಲ. ಭಾರತ ಹೇರಿದ ಕೆಲವು ಆರ್ಥಿಕ ನಿರ್ಬಂಧಗಳಿಂದ ಚೀನಾದ ಹೂಡಿಕೆ ಬಹುಮಟ್ಟಿಗೆ ನಿಂತು ಹೋಗಿತ್ತು. ಈ ಅವಕಾಶ ಬಳಸಿ ಭಾರತೀಯ ಉದ್ಯಮಪತಿಗಳಿಗೆ ಹೂಡಿಕೆ ಮಾಡಲು ಭಾರತ ಸರ್ಕಾರ ಕರೆ ಕೊಟ್ಟಿತ್ತು. ಆದರೆ ಉದ್ಯಮಪತಿಗಳಿಂದ ನಿರೀಕ್ಷಿತ ಮಟ್ಟದಲ್ಲಿ ಹೂಡಿಕೆಯಾಗಲಿಲ್ಲ. ಇದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಹಿಂಜರಿತ ಉಂಟಾಗಿತ್ತು. ಭಾರತಕ್ಕೆ ಚೀನಾದ ಹೂಡಿಕೆ ಅನಿವಾರ್ಯವಾಗಿತ್ತು. ಗಡಿ ತಕರಾರಿನಿಂದ ಭಾರತಕ್ಕೆ ಇತರ ಸಮಸ್ಯೆಗಳತ್ತ ಗಮನಹರಿಸಲು ಸಾಧ್ಯವಾಗುತ್ತಿರಲಿಲ್ಲ. ಅಮೆರಿಕ ಹಾಗೂ ಅದರ ಮಿತ್ರ ದೇಶಗಳ ಕುತಂತ್ರಗಳನ್ನು ತಡೆಯಲು ಚೀನಾ ಸದಸ್ಯ ರಾಷ್ಟ್ರವಾಗಿರುವ Brics ಮತ್ತು scoಗಳು ಬಲಿಷ್ಠವಾಗಬೇಕಿತ್ತು. ಸಂಬಂಧ ಸುಧಾರಣೆಯಾದರೆ ಮಾತ್ರ ಇದು ಸಾಧ್ಯ ಎಂದು ಭಾರತದಂತೆ ಚೀನಾಕ್ಕೂ ಅರ್ಥವಾಗಿತ್ತು. ಈ ರೀತಿ ನಾಲ್ಕೂವರೆ ವರ್ಷಗಳಲ್ಲಿ ಎರಡೂ ದೇಶಗಳ ಪರಸ್ಪರ ಸಂಬಂಧ ಸುಧಾರಿಸಲು ಆತುರಗೊಂಡ ಫಲವಾಗಿ ಈ ಒಪ್ಪಂದ ಸಂಭವಿಸಿದೆ.

52 ತಿಂಗಳುಗಳಲ್ಲಿ ಎರಡೂ ಪಕ್ಷಗಳು ತಮ್ಮ ವಾದಕ್ಕೆ ಅಂಟಿಕೊಂಡಿದ್ದರಿಂದ ಮಾತುಕತೆಗಳಲ್ಲಿ ಅಂತಹ ಪ್ರಗತಿಯಾಗಿರಲಿಲ್ಲ. ಕಮ್ಯುನಿಸ್ಟ್ ನಾಯಕ ಲೆನಿನ್ 'ಕೆಲವಾರು ದಶಕಗಳ ಕಾಲ ಏನೂ ನಡೆಯುವುದಿಲ್ಲ. ಆದರೆ ಒಮ್ಮೆಲೆ ಒಂದೇ ವಾರದಲ್ಲಿ ದಶಕಗಳ ಕಾಲದ ಬೆಳವಣಿಗೆ ಸಂಭವಿಸುತ್ತದೆ' ಎಂದಿದ್ದರು. ಲೆನಿನ್‌ರ ಈ ಮಾತುಗಳಂತೆ ಕಳೆದ ತಿಂಗಳಲ್ಲಿ ಅಸಾಮಾನ್ಯ ರೀತಿಯಲ್ಲಿ ಮಾತುಕತೆಗಳು ಫಲಪ್ರದವಾಗಿ ಉಭಯ ದೇಶಗಳಿಗೆ ಭಾಗಶಃ ಸಮಾಧಾನ ನೀಡುವ ಒಪ್ಪಂದವಾಯಿತು.

ಸೆಪ್ಟೆಂಬರ್ 12ರಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಮತ್ತು ಭಾರತದ ಎನ್‌ಎಸ್‌ಎ ಅಜಿತ್ ಧೋವಲ್‌ರು ರಷ್ಯಾದ ಸೈಂಟ್ ಪೀಟರ್ಸ್ ಬರ್ಗ್ಸ್‌ನಲ್ಲಿ ಸಭೆ ಸೇರಿ ಗಡಿ ಸಮಸ್ಯೆ ಬಗ್ಗೆ ಸಾಧಿಸಿದ ಪ್ರಗತಿ ಬಗ್ಗೆ ಚರ್ಚಿಸಿ ಈ ಕುರಿತು ಸಾಮಾನ್ಯ ತಿಳುವಳಿಕೆಗಳನ್ನು ನೀಡಲು ಒಪ್ಪಿಕೊಂಡಿದ್ದರು.

ಭಾರತ–ಚೀನಾ ಗಡಿ ಒಪ್ಪಂದದ ಅಂಶಗಳು: ಕಳೆದ ನಾಲ್ಕೂವರೆ ವರ್ಷಗಳಲ್ಲಿ 31 ಸುತ್ತಿನ ರಾಜತಾಂತ್ರಿಕ ಹಾಗೂ 21 ಸುತ್ತಿನ ಮಿಲಿಟರಿ ಮಾತುಕತೆಗಳ ನಂತರ ರಷ್ಯಾದ ಕಝಾನ್‌ನಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯ ಮೊದಲು ಕಳೆದ ಅಕ್ಟೋಬರ್ 21ರಂದು ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿಯವರು ಪೂರ್ವ ಲಡಾಕ್‌ನ ಎಲ್‌ಎಸಿ ಉದ್ದಕ್ಕೂ ಗಸ್ತು ತಿರುಗಲು ಚೀನಾದೊಂದಿಗೆ ಭಾರತ ಒಪ್ಪಂದ ಸಾಧಿಸಿದೆ. ಈ ಮೂಲಕ ಎರಡು ಪರಮಾಣು ಶಕ್ತಿ ರಾಷ್ಟ್ರಗಳ ನಡುವಿನ ಸುದೀರ್ಘ ಮಿಲಿಟರಿ ಬಿಕ್ಕಟ್ಟನ್ನು ಕೊನೆಗೊಳಿಸುವಲ್ಲಿ ಪ್ರಮುಖ ಪ್ರಗತಿಯಾಗಿದೆ ಎಂದು ತಿಳಿಸಿದರು.

ಈ ಬಗ್ಗೆ ಎಸ್.ಜೈಶಂಕರ್‌ರವರು ಉಭಯ ಸೇನೆಗಳು 2020ರಲ್ಲಿ ಗಲ್ವಾನ್ ಘರ್ಷಣೆಯ ಪೂರ್ವದಂತಿದ್ದ ಪರಿಸ್ಥಿತಿಯಲ್ಲಿ ಗಸ್ತು ತಿರುಗಲಾಗುವುದು. ಅತ್ಯಂತ ಆಯಕಟ್ಟಿನ ಪ್ರದೇಶಗಳಾದ ಡೆಪ್ಸಾಂಗ್ ಮತ್ತು ಡೆಮ್‌ಚೇಕ್‌ಗಳಲ್ಲಿ ಗಸ್ತಿಗೆ ಅನುಕೂಲವಾಗಲಿದೆ ಎಂದರು.

ಈ ಒಪ್ಪಂದದಿಂದ ಭಾರತೀಯ ಪಡೆಗಳು ಡೆಪ್ಸಾಂಗ್ ಬಯಲು ಪ್ರದೇಶದಲ್ಲಿ ಹಾಗೂ ಡೆಮ್‌ಚೇಕ್‌ನ ಚಾರ್ಡಿಂಗ್ ನುಲ್ಲಾದಲ್ಲಿ ಗಸ್ತು ತಿರುಗಬಹುದು. ಹೊಸ ಗಸ್ತು ಪ್ರೋಟೋಕಾಲ್(ಶಿಷ್ಟಾಚಾರ) ತಿಂಗಳಿಗೆ ಎರಡು ಬಾರಿ ಆವರ್ತದಲ್ಲಿ ಎಲ್‌ಎಸಿ ಉದ್ದಕ್ಕೂ 13–18ರ ಸಾಂಪ್ರದಾಯಿಕ ಬಲಕ್ಕೆ ಬದಲು ಕನಿಷ್ಠ 14ರಿಂದ 15 ಪಡೆಗಳು ಗಸ್ತು ತಿರುಗಲಿವೆ ಎಂದು ಒಪ್ಪಂದ ಹೇಳುತ್ತದೆ. ಈ ಒಪ್ಪಂದದಂತೆ ಪೂರ್ವ ಲಡಾಕ್‌ನ ಹಿಮಚ್ಛಾದಿತ ದುರ್ಗಮ ಡೆಪ್ಸಾಂಗ್ ಪ್ರಸ್ಥಭೂಮಿ ಮತ್ತು ಡೆಮ್‌ಚೇಕ್ ಪ್ರದೇಶದ ಚಾರ್ಡಿಂಗ್ ನಿಂಗ್ಲಂಗ್‌ನಲ್ಲೂ ಟ್ರ್ಯಾಕ್ ಜಂಕ್ಷನ್ ಪ್ರದೇಶದಲ್ಲಿ ಎರಡೂ ಸೇನೆಗಳನ್ನು ವಾಪಸು ಕರೆಸಿಕೊಳ್ಳುವ ಪ್ರಕ್ರಿಯೆ ಅಕ್ಟೋಬರ್ 29ರಂದು ಪೂರ್ಣಗೊಂಡಿದೆ. ಅದೇ ರೀತಿ ಪ್ಯಾನ್‌ಗಾಂಗ್ ತ್ಸೆ ಸರೋವರದ ಫಿಂಗರ್ 4–5ರಲ್ಲಿರುವ ಹಾಗೂ ಡೆಪ್ಸಾಂಗ್, ಡೆಮ್‌ಚೇಕ್ ಪ್ರದೇಶಗಳಲ್ಲಿ ನಿರ್ಮಾಣ ವಾದ ಸೇನಾ ಡೇರೆಗಳ ಸಹಿತ ತಾತ್ಕಾಲಿಕ ನಿರ್ಮಾಣಗಳನ್ನು ತೆರವುಗೊಳಿಸುವ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಭಾರತೀಯ ಸೇನಾ ಮೂಲಗಳು ದೃಢೀಕರಿಸಿವೆ. ಈ ಎಲ್ಲಾ ಪ್ರಕ್ರಿಯೆಗಳ ನಂತರ ನವೆಂಬರ್ 2ರಿಂದ ಭಾರತೀಯ ಸೇನೆ ತನ್ನ ಗಸ್ತು ಕಾರ್ಯ ಆರಂಭಿಸಿದೆ. ಅನೇಕ ವರ್ಷಗಳ ನಂತರ ಈ ಬಾರಿ ಉಭಯ ಸೇನೆಗಳು ಎಲ್‌ಎಸಿ ಉದ್ದಕ್ಕೂ ಪರಸ್ಪರ ಸಿಹಿ ಹಂಚಿ ಕೊಂಡು ದೀಪಾವಳಿ ಆಚರಿಸಿದ್ದು ವಿಶೇಷವಾಗಿತ್ತು.

ಭಾರತ ಸರ್ಕಾರದ ರಾಜಿಯಿಲ್ಲದ, ಕಠಿಣ ನೀತಿಯಿಂದ ಚೀನಾ ತನ್ನ ಸೇನೆಯನ್ನೇ ಹಿಂತೆಗೆದುಕೊಂಡಿತು. ಚೀನಾದ ಅತಿಕ್ರಮಣ ವನ್ನು ಒಪ್ಪದೆ ಭಾರತ ಸರ್ಕಾರವು ಗಡಿ ವಿಚಾರದಲ್ಲಿ ರಾಜಿ ಇಲ್ಲವೆಂಬ ಖಡಕ್ ನೀತಿ ತಳೆದಿತ್ತು. ಉಭಯ ದೇಶಗಳ ನಡುವಿನ ಬಿಕ್ಕಟ್ಟಿನ ಇತಿಹಾಸದಲ್ಲೇ ಭಾರತ ಸರ್ಕಾರ ಪ್ರಥಮ ಬಾರಿ ಇಂತಹ ದೃಢವಾದ ನಿಲುವು ತಳೆದಿತ್ತು.

ಒಪ್ಪಂದದ ಪರಿಣಾಮಗಳು: ಮೋದಿ ಹಾಗೂ ಜಿನ್‌ಪಿಂಗ್‌ರವರು, ಬ್ರಿಕ್ಸ್ ವೇದಿಕೆಯು ಪಾಶ್ಚಾತ್ಯ ಕೇಂದ್ರಿತ ವ್ಯವಸ್ಥೆಗೆ ಪ್ರತಿಯಾಗಿ ಅಭಿವೃದ್ಧಿಶೀಲ ದೇಶಗಳಿಗೆ ಸಂಘಟಿತವಾಗಿ ಸವಾಲುಗಳನ್ನು ಎದುರಿಸಲು ಅವಕಾಶ ನೀಡುತ್ತದೆ ಎಂಬ ಸಂದೇಶ ನೀಡಿದ್ದಾರೆ. ಸಾಮಾನ್ಯ ವಾಗಿ ಘರ್ಷಣೆಗಳು, ರಾಜತಾಂತ್ರಿಕ ಬಿಕ್ಕಟ್ಟುಗಳನ್ನು ಅಮೆರಿಕ ಹಾಗೂ ಅದರ ಮಿತ್ರ ದೇಶಗಳು ಸಂಧಾನಕಾರರಾಗಿ ಪರಿಹರಿಸುತ್ತವೆ ಎಂಬ ಕಥನಗಳನ್ನು ಕೊನೆಗೊಳಿಸಿದೆ. ಹೀಗಾಗಿ ಈ ಒಪ್ಪಂದಕ್ಕೆ ಅಮೆರಿಕನ್ ಕೂಟ ದೇಶಗಳು ನೀರಸ ಪ್ರತಿಕ್ರಿಯೆ ನೀಡಿವೆ. ಭಾರತ–ಚೀನಾ ಒಪ್ಪಂದ ಇಂಡೋ–ಫೆಸಿಫಿಕ್ ವಲಯದಲ್ಲಿ ವ್ಯೂಹಾತ್ಮಕ ಲೆಕ್ಕಾಚಾರಗಳನ್ನು ಬದಲಿಸಲಿವೆ. ಭಾರತದ ಉತ್ತರ ಗಡಿಯಲ್ಲಿನ ಶಾಂತಿ–ಸ್ಥಿರತೆಯು ಜಗತ್ತಿನ ಶಕ್ತಿ ರಾಷ್ಟ್ರಗಳೊಂದಿಗೆ ಸಾಮರ್ಥ್ಯ, ಶಕ್ತಿಯ ಆಧಾರದಲ್ಲಿ ಸಂಬಂಧಗಳನ್ನು ಬಲಗೊಳಿಸಲು ಅವಕಾಶ ನೀಡಲಿದೆ. ವ್ಯಾಪಕ ನೆಲೆಯಲ್ಲಿ ಜಾಗತಿಕ ಶಕ್ತಿ ಕೇಂದ್ರವು ಅಮೆರಿಕನ್ ಕೂಟದಿಂದ ಏಷ್ಯಾ ಖಂಡಕ್ಕೆ ವರ್ಗಾವಣೆಯ ಸಂಕೇತ ನೀಡಿದೆ. ರಷ್ಯಾದ ಕಝಾನ್ ನಗರದಲ್ಲಿ ನಡೆದ ಬ್ರಿಕ್ಸ್ ಶೃಂಗದಲ್ಲಿ ಪಾಲ್ಗೊಂಡ ಸಂದರ್ಭದಲ್ಲಿ ಪ್ರಧಾನಿ ಮೋದಿ ಹಾಗೂ ಜಿನ್‌ಪಿಂಗ್ ಭೇಟಿಯಾಗಿ ಈ ಒಪ್ಪಂದ ಗಡಿ ಸಮಸ್ಯೆ ನಿವಾರಣೆಗೆ ಮಾತ್ರ ಸೀಮಿತವಲ್ಲ ಎಂಬ ಸಂದೇಶ ನೀಡಿದ್ದಾರೆ.

ಬ್ರಿಕ್ಸ್ ಶೃಂಗದಲ್ಲಿ ಪ್ರಧಾನಿ ಮೋದಿಯವರು ಜಿನ್‌ಪಿಂಗ್ ಹೊರತುಪಡಿಸಿ ಉಳಿದ ಎಲ್ಲಾ ದೇಶದ ನಾಯಕರ ಆಲಂಗಿಸಿ, ಕೈ ಕುಲುಕಿ ಅಭಿಮಾನದ ತೋರಿದರು. ಜಿನ್‌ಪಿಂಗ್‌ರಿಗೆ ಕೇವಲ ಹಸ್ತಲಾಘವ ನೀಡುವ ಮೂಲಕ ನಿಮ್ಮ ಬಗ್ಗೆ ನಮಗೆ ಇನ್ನೂ ಅವಿಶ್ವಾಸ, ಅಪನಂಬಿಕೆ, ಸಂಶಯವಿದೆ ಎಂದು ಸೂಚ್ಯವಾಗಿ ಸಂದೇಶ ನೀಡಿದರು. ಜಾಗತಿಕ ನಾಯಕರ ದೇಹ ಭಾಷೆಯಲ್ಲೂ (Body language) ಒಂದು ಸಂದೇಶವಿರುತ್ತದೆ.

ಕಾಂಗ್ರೆಸ್ ಶಾಸಕರ ಖರೀದಿ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ತಪ್ಪಾಗಿ ಬಿಜೆಪಿ ವಿರುದ್ಧ ಆರೋಪ

● ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವ್ಯಂಗ್ಯ ● ರಾಜೀನಾಮೆ ಸನ್ನಿಹಿತವಾಗುತ್ತಿದ್ದಂತೆ ಸಿದ್ದರಾಮಯ್ಯ ಗೊಂದಲಕಾರಿ ಹೇಳಿಕೆ

ಬೆಂಗಳೂರು, ನ.15(ಕೆಎಂಶಿ)–ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಹಿನ್ನಡೆ ಖಾತ್ರಿಯಿಂದ ಕಾಂಗ್ರೆಸ್ಸಿನ ಘಟಾನುಘಟಿಗಳು ಸಾವಿರಾರು ಕೋಟಿ ರೂ.ಗಳಿಗೆ ತಮ್ಮದೇ ಪಕ್ಷದ ಶಾಸಕರನ್ನು ಖರೀದಿ ಮಾಡುತ್ತಿದ್ದಾರೆ ಎಂಬ ಮಾಹಿತಿ ನಮಗೂ ಬಂದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಡಳಿತ ಚುಕ್ಕಾಣಿ ಹಿಡಿದ ಸಿದ್ದರಾಮಯ್ಯ ಅವರಿಗೂ ಈ ಮಾಹಿತಿ ಇದೆ, ಕಾಂಗ್ರೆಸ್ ಪಕ್ಷದ ಮುಖಂಡರ ಮೇಲೆ ಆರೋಪ ಮಾಡಲು ಸಾಧ್ಯವಾಗದೇ ಬಿಜೆಪಿ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಶಾಸಕರ ಖರೀದಿ ವಿಚಾರಕ್ಕೆ ಬರುವ ದಿನಗಳಲ್ಲಿ ಕಾಲವೇ ಉತ್ತರಿಸಲಿದೆ. ರಾಜೀನಾಮೆ ಕೊಡುವ ಕಾಲ ಸನ್ನಿಹಿತವಾಗಿದೆ ಎಂಬುದು ಸ್ವತಃ ಸಿದ್ದರಾಮಯ್ಯ ಅವರಿಗೆ ಮನವರಿಕೆ ಆಗಿದ್ದು, ಬಿಜೆಪಿ ವಿರುದ್ಧ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದಾರೆ.

ಯಾವತ್ತು ರಾಜೀನಾಮೆ ಕೊಡುತ್ತಾರೆ,



ಯಾರು ಹೊಸ ಮುಖ್ಯಮಂತ್ರಿ ಎಂಬುದೇ ಈಗಿರುವ ಪ್ರಶ್ನೆ. ಕಾಂಗ್ರೆಸ್ ಪಕ್ಷದೊಳಗೇ ಕುದುರೆ ವ್ಯಾಪಾರ ನಡೆದಿದೆ.

ಬಿಜೆಪಿಯಲ್ಲಿರುವುದು 66 ಶಾಸಕರು, ಸರ್ಕಾರ ಉರುಳಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ, ಸಿದ್ದರಾಮಯ್ಯ ತಮ್ಮ ಅಕ್ಕಪಕ್ಕ ಇರುವ ಹಿರಿಯ ಸಚಿವರಿಗೆ ಭಯ ಪಡಬೇಕಿದೆ, ಬಿಜೆಪಿ ಬಗ್ಗೆ ಅಲ್ಲ.

ಸಿದ್ದರಾಮಯ್ಯ ರಾಜೀನಾಮೆ ವಿಚಾರದಲ್ಲಿ ಬದಲಾವಣೆ ಇಲ್ಲ. ಮಹಾರಾಷ್ಟ್ರ ಚುನಾವಣೆ ಫಲಿತಾಂಶ ಬಳಿಕ ಯಾವುದೇ ಕ್ಷಣದಲ್ಲಿ ಈ ಬೆಳವಣಿಗೆ ನಡೆಯಲಿದೆ. ಸಿದ್ದರಾಮಯ್ಯ ಅತೀ ಶೀಘ್ರದಲ್ಲೇ ರಾಜೀನಾಮೆ ನೀಡುತ್ತಾರೆ ಎಂದರು.

ಉಪ ಚುನಾವಣೆ ನಡೆದ ಮೂರು ಕ್ಷೇತ್ರಗಳಲ್ಲೂ ಎನ್‌ಡಿಎ ಗೆದ್ದು ಹೊಸ ಇತಿಹಾಸ ಸೃಷ್ಟಿ ಆಗಲಿದೆ.

ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷ ಗೆಲುವಿನ ಭ್ರಮೆಯಲ್ಲಿತ್ತು. ಆದರೆ, ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಗೆಲ್ಲುವ ವಾತಾವರಣ ಇದೆ. ಸಂಡೂರಿನಲ್ಲೂ ಬಿಜೆಪಿಗೆ ಐತಿಹಾಸಿಕ ಗೆಲುವಿನ ವಿಶ್ವಾಸ ಇದೆ. ಶಿಗ್ಗಾಂವಿಯಲ್ಲೂ ಭರತ್ ಬೊಮ್ಮಾಯಿ ದೊಡ್ಡ ಅಂತರದಲ್ಲಿ ಗೆಲ್ಲುತ್ತಾರೆ.

ಕಾಂಗ್ರೆಸ್‌ನಲ್ಲಿ ಸ್ವತಃ ಮುಖ್ಯಮಂತ್ರಿಗಳ ಕುಟುಂಬವೇ ಭ್ರಷ್ಟಾಚಾರದಲ್ಲಿ ಮುಳುಗಿದೆ. ಮುಖ್ಯಮಂತ್ರಿ ಕುರ್ಚಿ ಅಲ್ಲಾಡುತ್ತಿದೆ ಎಂಬುದು ಮನವರಿಕೆಯಾಗಿದೆ. ಕಾಂಗ್ರೆಸ್ಸಿನ ಕೆಲವು ಹಿರಿಯ ಮುಖಂಡರು ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲು ಮುಂದಾಗಿದ್ದಾರೆ.

ಹೊರಗಡೆಯಿಂದ ಬಂದವರಿಗೆ 5 ವರ್ಷ ಅವಕಾಶ ಕೊಟ್ಟಿದ್ದು, ಈಗ ಮತ್ತೆ 2 ವರ್ಷವಾಗಿದೆ ಎಂಬ ಭಾವನೆ ಇದೆ.

ಹರಿಯಾಣದಲ್ಲಿ ಕಾಂಗ್ರೆಸ್ ಗೆಲ್ಲುವ ಭ್ರಮೆಯಲ್ಲಿದ್ದರು, ಕರ್ನಾಟಕದಲ್ಲಿನ ಭ್ರಷ್ಟ ಆಡಳಿತದ ಪರಿಣಾಮ ಆ ರಾಜ್ಯದಲ್ಲಿ ಸೋಲಾಯಿತು. ಈಗ ಮಹಾರಾಷ್ಟ್ರದಲ್ಲೂ ಸೋಲಲಿದ್ದಾರೆ ಎಂದರು.

ವಿಧಾನಮಂಡಲ ಅಧಿವೇಶನ ಸಂದರ್ಭದಲ್ಲಿ ಬೆಳಗಾವಿಯಲ್ಲಿ ರೈತರ ಬೃಹತ್ ಪ್ರತಿಭಟನೆ ನಡೆಸುತ್ತೇವೆ. ಎರಡು ಹಂತದಲ್ಲಿ ಹೋರಾಟಕ್ಕೆ ನಿರ್ಧರಿಸಿದ್ದೇವೆ, ಅದರ ಪ್ರಕಾರ 3 ತಂಡಗಳನ್ನು ರಚಿಸಿದ್ದೇವೆ.

ರೈತರ ಪರ ಹೋರಾಟಕ್ಕೆ ನಮ್ಮ ತಕರಾರಿಲ್ಲ, ವಕ್ಫ್ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಅಯೋಗ್ಯತನ ಪ್ರದರ್ಶಿಸುತ್ತಿದೆ. ರೈತರ ಜಮೀನು ಕಿತ್ತುಕೊಳ್ಳುತ್ತಿದ್ದು, ರಾಜ್ಯದ ರೈತರು ಆತಂಕದಲ್ಲಿದ್ದಾರೆ, ಮಠಮಾನ್ಯಗಳ ಜಮೀನು, ದೇವಸ್ಥಾನಗಳ ಜಮೀನು ಕಿತ್ತುಕೊಳ್ಳಲಾಗುತ್ತಿದೆ.

ರಾಜ್ಯ ಸರ್ಕಾರ ಸ್ಪಷ್ಟ ಉತ್ತರ ಕೊಡುವವರೆಗೆ, ರೈತರಿಗೆ ನಿರಾಳತೆ ಸಿಗುವವರೆಗೆ ದೃಢ ಹೋರಾಟ ಮುಂದುವರೆಯಲಿದೆ.

ಶಾಸಕರು, ವಿಧಾನಪರಿಷತ್ ಸದಸ್ಯರು, ಕೇಂದ್ರಸಚಿವರೂ ಹೋರಾಟದಲ್ಲಿ ಪಾಲ್ಗೊಂಡು ರೈತರ ಪರ ಧ್ವನಿ ಎತ್ತಲಿದ್ದಾರೆ, ಯಡಿಯೂರಪ್ಪ ಅವರು ರೈತರ ಹೆಸರಿನಲ್ಲೇ ಪ್ರಮಾಣ ವಚನ ಸ್ವೀಕರಿಸಿ ಆಡಳಿತ ನಡೆಸಿದವರು, ರೈತರ ವಿಚಾರದ ಹೋರಾಟದಲ್ಲಿ ಬಿಜೆಪಿ ಹಿಂದೆ ಬೀಳುವ ಪ್ರಶ್ನೆಯೇ ಇಲ್ಲ ಎಂದರು.

ಜಾರ್ಖಂಡ್‌ನಲ್ಲಿ ರಾಹುಲ್ ಗಾಂಧಿ ಹೆಲಿಕಾಪ್ಟರ್‌ಗೆ ತಡೆ

ಗೊಡ್ಡಾ, ನ.15– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಹೆಲಿಕಾಪ್ಟರ್ ಟೇಕಾಫ್ ಮಾಡಲು ಏರ್ ಟ್ರಾಫಿಕ್ ಕಂಟ್ರೋಲ್ ಅನುಮತಿ ನೀಡದ ಹಿನ್ನೆಲೆಯಲ್ಲಿ ಶುಕ್ರವಾರ ಜಾರ್ಖಂಡ್‌ನ ಗೊಡ್ಡಾದಲ್ಲಿ ಅವರ ಚಾಪರ್ ಅನ್ನು ತಡೆಯಲಾಗಿದೆ.



ಜಾರ್ಖಂಡ್ ವಿಧಾನಸಭೆ ಚುನಾವಣೆಯ ಅಂತಿಮ ಹಂತದ ಮತದಾನಕ್ಕೂ ಮುನ್ನ ರಾಜ್ಯದಲ್ಲಿ ರಾಹುಲ್ ಗಾಂಧಿ ಅವರ ಚುನಾವಣಾ ಪ್ರಚಾರದ ದಿಕ್ಕು ತಪ್ಪಿಸಲು ಉದ್ದೇಶಪೂರ್ವಕವಾಗಿ ಹೆಲಿಕಾಪ್ಟರ್ ತಡೆಯಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಎಟಿಸಿ ಅನುಮತಿ ಸಿಗದೇ ಇರುವುದು ಬಿಜೆಪಿಯ ಚುನಾವಣಾ ಷಡ್ಯಂತ್ರದ ಭಾಗವೆಂದು ಕಾಂಗ್ರೆಸ್ ಮತ್ತು ಜೆಎಂಎಂ ಆಪಾದಿಸಿದೆ.

ಗೊಡ್ಡಾದಿಂದ ಸುಮಾರು 150 ಕಿಮೀ ದೂರದಲ್ಲಿರುವ ಚಕೈಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಕಾರಣ ಏರ್ ಟ್ರಾಫಿಕ್ ಕಂಟ್ರೋಲ್ ಅನುಮತಿ ನೀಡಿಲ್ಲ. ಇದು ಉದ್ದೇಶಪೂರ್ವಕ ಕೃತ್ಯ ಎಂದು ಕಾಂಗ್ರೆಸ್ ಆರೋಪಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ವಕ್ಫ್ ವಿರುದ್ಧ ಮಾತನಾಡುವ ಭರದಲ್ಲಿ ಪ್ರಚೋದನಕಾರಿ ಹೇಳಿಕೆ

ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ವಿರುದ್ಧ ಸುಮೋಟೋ ಕೇಸ್



ಶಿವಮೊಗ್ಗ, ನ.15– ವಕ್ಫ್ ವಿಚಾರದಲ್ಲಿ ಮುಸ್ಲಿಂಮರ ವಿರುದ್ಧ ಮಾತನಾಡಿದ್ದಕ್ಕೆ ಮಾಜಿ ಉಪ ಮುಖ್ಯ ಮಂತ್ರಿ ಕೆ.ಎಸ್. ಈಶ್ವರಪ್ಪ ವಿರುದ್ಧ ಸುಮೋಟೋ ಕೇಸ್ ದಾಖಲಾಗಿದೆ. ಕಳೆದ 13ರಂದು ನಡೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಈಶ್ವರಪ್ಪ ಅವರು ಮುಸ್ಲಿಮರ ವಿರುದ್ಧ ಹೇಳಿಕೆ ನೀಡಿದ್ದರು.

ವಕ್ಫ್ ವಿಚಾರಕ್ಕೆ ಸಂಬಂಧಿಸಿ ಈಶ್ವರಪ್ಪ ಅವರು ರಾಜ್ಯದಲ್ಲಿ ವಕ್ಫ್ ಜಾರಿಗೆ ಬಂದರೆ, ಸಾಧು ಸಂತರ ನೇತೃತ್ವದಲ್ಲಿ ಧಂಗೆ ಏಳ ಬೇಕಾಗುತ್ತದೆ. ಮುಸ್ಲಿಂಮರನ್ನು ರಸ್ತೆಯಲ್ಲಿ ಹುಡುಕಿ ಹುಡುಕಿ ಹೊಡೆಯುತ್ತಾರೆ ಇನ್ನು ಭವಿಷ್ಯದಲ್ಲಿ ಮುಸ್ಲಿಮರನ್ನು ಕೊಲ್ಲುವಂತಹ ದಿನ ಬರುತ್ತದೆ ಎಂದು ಹೇಳಿದ್ದರು. ಈಶ್ವರಪ್ಪ ಅವರ ಈ ಹೇಳಿಕೆಯಿಂದ ಸಮಾಜದಲ್ಲಿ ಅಶಾಂತಿ ಸೃಷ್ಟಿಯಾಗುತ್ತದೆ ಎಂಬ ಕಾರಣದಿಂದ ಅವರ ವಿರುದ್ಧ ಜಯನಗರ ಠಾಣೆಯಲ್ಲಿ ಸುಮೋಟೋ ಕೇಸ್ ದಾಖಲಾಗಿದೆ.

ರಾಜ್ಯದ ಹಲವು ಭಾಗಗಳಲ್ಲಿ ರೈತರ ಭೂಮಿ ಜತೆ ಮಠ, ದೇವಸ್ಥಾನ, ಪುರಾತತ್ವ ಇಲಾಖೆ ಭೂಮಿ, ಸರ್ಕಾರಿ ಶಾಲೆಯ ಜಾಗವನ್ನೂ ವಕ್ಫ್ ಆಸ್ತಿ ಎಂದು ಪಹಣಿಯಲ್ಲಿ ನಮೂದಿಸುತ್ತಿದ್ದಾರೆ. ಇದು ಸೂಕ್ತವಲ್ಲ. ಮಠ, ಮಂದಿರ, ಬಡ ರೈತರ ಭೂಮಿ ದೋಚುತ್ತಿರುವ ವಕ್ಫ್ ಮಂಡಳಿ ನಡೆಯಿಂದ ಮುಸ್ಲಿಂ ಸಮುದಾಯ ಅಧೋಗತಿಗೆ ಹೋಗುತ್ತದೆ. ಹಿಂದೂ ಸಮಾಜದ ಆಸ್ತಿ ಕಬಳಿಸುತ್ತಿರುವುದರ ವಿರುದ್ಧ ಎಲ್ಲಾ ಜಾತಿಯ ಸಾಧು ಸಂತರು ಎಚ್ಚೆತ್ತಿದ್ದಾರೆ. ಇದಕ್ಕಾಗಿ ಹೋರಾಟ ನಡೆಸಲು ಸಿದ್ಧರಾಗಿದ್ದಾರೆ ಎಂದು ವಕ್ಫ್ ವಿರುದ್ಧ ಈಶ್ವರಪ್ಪ ಗುಡುಗಿದ್ದರು.

ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್ ದಾಖಲೆ ಸೇರಿದ ಬಾಲಕಿ ವಿಹಿಕ

ಕುತ್ತಿಗೆಗೆ ರಿಂಗ್ ಹಾಕಿಕೊಂಡು ನಿಮಿಷದಲ್ಲಿ 118 ಮೂಲ ಧಾತು ಹೇಳುವ ಮೂಲಕ ದಾಖಲೆ ಸ್ಥಾಪನೆ



ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್ ದಾಖಲೆ ಮಾಡಿದ ವಿಹಿಕ

ಮೈಸೂರು,ನ.15(ಜಿಎ)–ಕುತ್ತಿಗೆಗೆ ರಿಂಗ್ ಹಾಕಿಕೊಂಡು ಸತತವಾಗಿ ತಿರುಗಿಸಿಕೊಂಡು 1 ನಿಮಿಷದಲ್ಲಿ 118 ಮೂಲ ಧಾತು ಹೇಳುವ ಮೂಲಕ ತಮ್ಮ ಪುತ್ರಿ ವಿಹಿಕ ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್ ದಾಖಲೆಗೆ ಸೇರ್ಪಡೆ ಆಗಿದ್ದಾಳೆ ಎಂದು ತಾಯಿ ರಮ್ಯ ತೇಜಸ್ವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಚಿಕ್ಕ ಅಂಕನಹಳ್ಳಿಯ ನಿವಾಸಿಯಾದ ತಮ್ಮ ಸುಮಾರು 5 ವರ್ಷ ವಯಸ್ಸಿನ ಪುತ್ರಿ ವಿಹಿಕ ಕತ್ತಿನಲ್ಲಿ ರಿಂಗನ್ನು ಸತತ ತಿರುಗಿಸುತ್ತ ಒಂದು ನಿಮಿಷದಲ್ಲಿ 118 ಮೂಲ ಧಾತು ಹೇಳುವ ಮೂಲಕ ಇಂಟರ್ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್ ದಾಖಲೆಗೆ ಸೇರ್ಪಡೆ ಆಗಿದ್ದಾಳೆ. ಹಾಗೇ ಈಗಾಗಲೇ ಜ್ಞಾಪಕ ಶಕ್ತಿ ಪರೀಕ್ಷೆಯಲ್ಲಿಯೂ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಸೇರ್ಪಡೆ ಆಗಿದ್ದಾಳೆ ಎಂದರು. ಗ್ರಾಮದ ಭವಾನಿ ಕಾನ್ವೆಂಟ್‌ನಲ್ಲಿ ಯುಕೆಜಿ ವಿದ್ಯಾಭ್ಯಾಸ ಮಾಡುತ್ತಿದ್ದು, ಮೂರು ವರ್ಷ ವಯಸ್ಸಿನವಳಾಗಿರುವಾಗ ಈಕೆಯ ಸಾಮರ್ಥ್ಯ ಕುಟುಂಬಸ್ಥರ ಗಮನಕ್ಕೆ ಬಂದಿತು. ಆಗಿನಿಂದ ತಾವು ಶ್ಲೋಕ, ದೇಹದ ಭಾಗಗಳು, ಕಾರುಗಳ ಹೆಸರು, ಜ್ಞಾನಪೀಠ ಪುರಸ್ಕೃತರು ಸೇರಿದಂತೆ ಎಲ್ಲಾ ಕ್ಷೇತ್ರದ ಬಗ್ಗೆ ಹೇಳಿಕೊಡಲಾಗಿದ್ದು, ಈ ರೀತಿಯ ಸಾಮರ್ಥ್ಯ ಗಳಿಸಿಕೊಂಡಿದ್ದಾಳೆ. ಖಾಸಗಿ ವಾಹಿನಿಯಲ್ಲಿ ನಡೆಯುವ ಮಕ್ಕಳ ರಿಯಾಲಿಟಿ ಶೋಗಳ ಸ್ಪರ್ಧೆಯಲ್ಲಿ ಭಾಗವಹಿಸಲು ಆಡಿಷನ್ ಎದುರಿಸಿದ್ದಾಳೆ. ಆದರೆ, ಅವಕಾಶ ದೊರೆತ್ತಿಲ್ಲ. ಅವಕಾಶ ಸಿಕ್ಕರೇ ಮತ್ತಷ್ಟು ಜ್ಞಾನ ವೃದ್ಧಿಯಾಗಲಿದೆ ಎಂದರು. ಈ ವೇಳೆ ಬಾಲಕಿ ವಿಹಿಕ ಕುತ್ತಿಗೆಗೆ ರಿಂಗ್ ಹಾಕಿಕೊಂಡು ಒಂದು ನಿಮಿಷದಲ್ಲಿ 118 ಧಾತುಗಳ ಹೆಸರು ಹೇಳುವ ಮೂಲಕ ತನ್ನ ಸಾಮರ್ಥ್ಯ ಪ್ರದರ್ಶಿಸಿ, ಎಲ್ಲರ ಗಮನ ಸೆಳೆದಳು. ಸುದ್ದಿಗೋಷ್ಠಿಯಲ್ಲಿ ವಿಹಿಕ ಅಜ್ಜಿ ನೇತ್ರಾವತಿ, ಮಂಜುಳಾ ಉಪಸ್ಥಿತರಿದ್ದರು.

ದ.ಆಫ್ರಿಕಾ ವಿರುದ್ಧ ಟಿ20 ಸರಣಿ ಗೆದ್ದ ಭಾರತ




ಜೋಹಾನ್ಸ್‌ಬರ್ಗ್, ನ.15– ಸಂಜು ಸ್ಯಾಮ್ಸನ್ ಹಾಗೂ ತಿಲಕ್ ವರ್ಮಾ ಅವರ ಶತಕಗಳ ನೆರವಿನಿಂದ ಭಾರತ ದಕ್ಷಿಣ ಆಫ್ರಿಕಾ ವಿರುದ್ಧದ ಅಂತಿಮ ಟಿ20 ಪಂದ್ಯದಲ್ಲಿ 135 ರನ್‌ಗಳ ಭರ್ಜರಿ ಜಯ ಸಾಧಿಸಿದೆ ಆ ಮೂಲಕ 4 ಪಂದ್ಯಗಳ ಟಿ20 ಸರಣಿಯನ್ನು 3–1 ಅಂತರದಲ್ಲಿ ತನ್ನದಾಗಿಸಿಕೊಂಡಿದೆ.

ಇಲ್ಲಿನ ದಿ ವಾಂಡರಸ್ಸ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 283 ರನ್‌ಗಳ ಬೃಹತ್ ಮೊತ್ತದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಸಂಜು ಸ್ಯಾಮ್ಸನ್ ಹಾಗೂ ಅಭಿಷೇಕ್ ಶರ್ಮಾ ಮೊದಲ ವಿಕೆಟ್‌ಗೆ ಕೇವಲ 5.5 ಓವರ್‌ಗಳಲ್ಲಿ 73 ರನ್ ಜೊತೆಯಾಟವಾಡಿ ಉತ್ತಮ ಆರಂಭ ಒದಗಿಸಿದರು. ಈ ವೇಳೆ 18 ಎಸೆತಗಳಲ್ಲಿ 4 ಸಿಕ್ಸ್ ಹಾಗೂ 2 ಬೌಂಡರಿ ಒಳಗೊಂಡ 36 ರನ್ ಗಳಿಸಿ ಅಭಿಷೇಕ್ ಶರ್ಮಾ ವಿಕೆಟ್ ಒಪ್ಪಿಸಿದರು. ನಂತರ ಜೊತೆಯಾದ ಸಂಜು ಸ್ಯಾಮ್ಸನ್ ಹಾಗೂ ತಿಲಕ್ ವರ್ಮಾ ಬೌಂಡರಿ, ಸಿಕ್ಸರ್‌ಗಳ ಮೂಲಕ ದಕ್ಷಿಣ ಆಫ್ರಿಕಾ ಬೌಲರ್‌ಗಳ ಬೆವರಿಳಿಸಿದರು. ಪಂದ್ಯದಲ್ಲಿ ಅಬ್ಬರಿಸಿದ ತಿಲಕ್ ವರ್ಮಾ 47 ಎಸೆತಗಳಲ್ಲಿ 10 ಸಿಕ್ಸರ್, 9 ಬೌಂಡರಿ ಒಳಗೊಂಡ 120 ರನ್ ಗಳಿಸಿ ಅಜೇಯರಾಗಿ ಉಳಿಯುವ ಮೂಲಕ ಟೂರ್ನಿಯಲ್ಲಿ ಸತತ 2ನೇ ಶತಕ ಸಿಡಿಸಿ ಮಿಂಚಿದರು. ಮತ್ತೊಂದೆಡೆ ಆರಂಭದಿಂದಲೂ ಆಕ್ರಮಣಕಾರಿ ಆಟವಾಡಿದ ಸ್ಯಾಮ್ಸನ್ ಕೂಡ 56 ಎಸೆತಗಳಲ್ಲಿ 9 ಸಿಕ್ಸ್, 6 ಬೌಂಡರಿ ಒಳಗೊಂಡ 109 ರನ್ ಗಳಿಸಿ ಅಜೇಯರಾಗಿ ಉಳಿದರು. ದಕ್ಷಿಣ ಆಫ್ರಿಕಾ ಪರ ಸಿಪಾಮ್ಲಾ ಒಂದು ವಿಕೆಟ್ ಉರುಳಿಸಿದರು.

ಭಾರತ ನೀಡಿದ 284ರನ್‌ಗಳ ಕಠಿಣ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ 18.2 ಓವರ್‌ಗಳಲ್ಲಿ 148 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಟ್ರಿಸ್ಟನ್ ಸ್ಟಬ್ಸ್ 43, ಡೇವಿಡ್ ಮಿಲ್ಲರ್ 36, ಮಾರ್ಕೊ ಯಾನ್ಸನ್ 29, ಗೆರಾಲ್ಡ್ ಕೋಟ್ಜೆ 12 ರನ್ ಗಳಿಸಿದರು. ಭಾರತದ ಪರ ಅರ್ಶದೀಪ್ ಸಿಂಗ್ 3, ವರುಣ್ ಚಕ್ರವರ್ತಿ, ಅಕ್ಷರ್ ಪಟೇಲ್ ತಲಾ 2, ಹಾರ್ದಿಕ್ ಪಾಂಡ್ಯ, ರಮಣ್‌ದೀಪ್ ಸಿಂಗ್ ಹಾಗೂ ರವಿ ಬಿಷ್ಣೋಯಿ ತಲಾ ಒಂದೊಂದು ವಿಕೆಟ್ ಪಡೆದರು. ತಿಲಕ್ ವರ್ಮಾ ಪಂದ್ಯ ಹಾಗೂ ಸರಣಿ ಶ್ರೇಷ್ಠ ಪ್ರಶಸ್ತಿ ಪಡೆದರು.

ಅನಂತಗೀತ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಬಹುಮಾನ



ಮೈಸೂರಿನ ಸಂತ ಫಿಲೋಮಿನಾ ಪ್ರೌಢಶಾಲೆಯಲ್ಲಿ ಮೈಸೂರು ಉತ್ತರ ವಲಯ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಸಹಯೋಗದೊಂದಿಗೆ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಹಲವು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ವಿಜಯನಗರದ ಅನಂತಗೀತ ವಿದ್ಯಾಲಯದ 10ನೇ ತರಗತಿಯ ವಿದ್ಯಾರ್ಥಿಗಳಾದ ಪ್ರೇರಣ್ ಮತ್ತು ಕೀರ್ತಿರಾಜ್ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, ಭುವನ ಧಾರ್ಮಿಕ ಪಠಣದಲ್ಲಿ ಪ್ರಥಮ ಸ್ಥಾನ, ಹಾಗೂ ನಿಖಿತಾ ಜಾನಪದ ಗೀತೆಯಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ವಿಜೇತ ವಿದ್ಯಾರ್ಥಿಗಳನ್ನು ಶಾಲೆಯ ಮುಖ್ಯ ಶಿಕ್ಷಕರಾದ ಲೋಕೇಶ್ ಹೆಚ್. ಪಿ, ಹಿರಿಯ ಶಿಕ್ಷಕರಾದ ಇಂದು ಕುಮಾರ್, ಜಮುನಾ, ಕಾವೇರಮ್ಮ, ಶಿಲ್ಪಾ, ರೂಪಶ್ರೀ, ಗೀತಾ, ಸುಲೋಚನಾ ಹಾಗೂ ದೈಹಿಕ ಶಿಕ್ಷಕ ಜಗದೀಶ್ ಅಭಿನಂದಿಸಿದರು.

ನಿವೇಶನ ಹಂಚಿಕೆ ಹಗರಣ ಹಿನ್ನೆಲೆ

ಮಾಹಿತಿ ಹಕ್ಕು ಅಧಿನಿಯಮದಡಿ ಬರುವ ಅರ್ಜಿ ವಿಲೇವಾರಿಗೆ ಮುಡಾ ಕಚೇರಿಯಲ್ಲಿ ಪ್ರತ್ಯೇಕ ಕೌಂಟರ್

ಮೈಸೂರು, ನ. 15(ಆರ್‌ಕೆ)– ಶೇ. 50:50ರ ಅನುಪಾತದಡಿ ಕಾನೂನು ಬಾಹಿರವಾಗಿ ನಿವೇಶನಗಳನ್ನು ಹಂಚಿಕೆ ಮಾಡಿರುವ ಭಾರೀ ಹಗರಣದ ಹಿನ್ನೆಲೆಯಲ್ಲಿ ಆರ್‌ಟಿಐ (ಮಾಹಿತಿ ಹಕ್ಕು) ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾರೀ ಸಂಖ್ಯೆಯಲ್ಲಿ ಮಾಹಿತಿ ಕೋರಿ ಅರ್ಜಿ ಸಲ್ಲಿಸುತ್ತಿದ್ದಾರೆ.

ಈಗಾಗಲೇ ವಿವಿಧ ಸೇವೆಗಳಿಗಾಗಿ ಸಾರ್ವಜನಿಕರಿಂದ ಬರುವ ಅರ್ಜಿಗಳನ್ನು ಸ್ವೀಕರಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಕಚೇರಿ ಪ್ರಧಾನ ದ್ವಾರದ ಬಳಿ ನಾಲ್ಕು ಕೌಂಟರ್‌ಗಳು ಈ 'ಸ್ಪಂದನ' ಹೆಸರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸ್ವೀಕರಿಸಿದ ಅರ್ಜಿಗಳನ್ನು ಸಂಬಂಧಪಟ್ಟ ಶಾಖೆಗಳಿಗೆ ನಂಬರಿಂಗ್ ಮಾಡಿ ಕಳುಹಿಸಿಕೊಡುವ ವ್ಯವಸ್ಥೆ ಇದೆ.

ನಿವೇಶನ ಹಂಚಿಕೆಯಲ್ಲಿ ನಡೆದಿರುವ ಬ್ರಹ್ಮಾಂಡ ಭ್ರಷ್ಟಾಚಾರ ಬಯಲುಗೊಂಡ ಬಳಿಕ ಮಾಹಿತಿ ಹಕ್ಕು ಅಧಿನಿಯಮ (ಆರ್‌ಟಿಐ)ದನ್ವಯ ಸಾರ್ವಜನಿಕರು ಹಾಗೂ ಸಾರ್ವಜನಿಕರಿಂದ ಅತೀ ಹೆಚ್ಚು ಅರ್ಜಿಗಳು ಬರಲಾರಂಭಿಸಿರುವುದರಿಂದ ಅವರಿಗೆ ಅನುಕೂಲವಾಗಲೆಂದು ಮುಡಾ ಕಚೇರಿಯ ನೆಲಮಹಡಿಯಲ್ಲಿರುವ ವಲಯ ಕಚೇರಿ–6ರಲ್ಲಿ ಪ್ರತ್ಯೇಕ ಕೌಂಟರ್ ತೆರೆಯಲಾಗಿದೆ ಎಂದು ಪ್ರಾಧಿಕಾರದ ಕಾರ್ಯದರ್ಶಿ ಪ್ರಸನ್ನಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.



ಆರ್‌ಟಿಐ ಕಾರ್ಯಕರ್ತರ ಅರ್ಜಿ ಸ್ವೀಕರಿಸಲು ಮುಡಾ ಕಚೇರಿಯಲ್ಲಿ ತೆರೆದಿರುವ ವಿಶೇಷ ಸ್ಪಂದನಾ ಕೌಂಟರ್.

ಆರ್‌ಟಿಐನಡಿ ಆ ಕೌಂಟರ್‌ನಲ್ಲಿ ಸ್ವೀಕರಿಸಿದ ಅರ್ಜಿಗಳನ್ನು ಸಂಬಂಧಿಸಿದ ಆಯಾ ಮಾಹಿತಿ ಅಧಿಕಾರಿಗಳಿಗೆ ಕಳುಹಿಸಲಾಗುತ್ತದೆ. ಅವುಗಳನ್ನು ಪರಿಶೀಲಿಸಿ ಅರ್ಜಿದಾರರು ಕಳೆದ ಮಾಹಿತಿ, ದೃಢೀಕೃತ ದಾಖಲೆಗಳನ್ನು ನಿಗದಿತ ಅವಧಿಯೊಳಗೆ ನೀಡಲಾಗುವುದು ಎಂದು ಅವರು ತಿಳಿಸಿದರು. ಈವರೆಗೆ ಆರ್‌ಟಿಐ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾತ್ರ ಸಲ್ಲಿಸಬೇಕಾಗಿತ್ತು. ಕೆಲವೊಮ್ಮೆ ಆ ಅಧಿಕಾರಿ ಲಭ್ಯವಿಲ್ಲದಿದ್ದರೆ, ವಾಪಸ್ ಕಚೇರಿಗೆ ಬರಬೇಕಾಗಿತ್ತು. ಜೊತೆಗೆ ಕೆಲ ಸಂದರ್ಭ ಅರ್ಜಿ ಸಲ್ಲಿಸಲು ಭೇಟಿಯಾದ ವ್ಯಕ್ತಿಗಳಿಂದ ಅನಗತ್ಯ ಕಿರಿಕಿರಿಯೂ ಉಂಟಾಗುತ್ತಿದ್ದರಿಂದ ಸುಧಾರಣೆ ತರುವ ನಿಟ್ಟಿನಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತಂದಿರುವುದಾಗಿಯೂ ಪ್ರಸನ್ನಕುಮಾರ್ ತಿಳಿಸಿದರು. ಅರ್ಜಿ ಸಲ್ಲಿಸಲು ಹಲವು ಬಾರಿ ಕಚೇರಿಗೆ ಬರುವುದು, ಫಾಲೋಅಪ್‌ನಂತಹ ತೊಂದರೆ ತಪ್ಪಿಸಿ ಸಾರ್ವಜನಿಕರು, ಆರ್‌ಟಿಐ ಕಾರ್ಯಕರ್ತರಿಗೆ ಅನುಕೂಲಕ್ಕಾಗಿ ಪ್ರತ್ಯೇಕ ಕೌಂಟರ್ ತೆರೆಯಲಾಗಿದೆ ಎಂದು ಅವರು ತಿಳಿಸಿದರು. ಒಮ್ಮೆ ಕೌಂಟರ್‌ನಲ್ಲಿ ಅರ್ಜಿ ಸಲ್ಲಿಸಿದರೆ ಸಾಕು, ನಿಗದಿತ ಅವಧಿಯೊಳಗೆ ಅರ್ಜಿದಾರರಿಗೆ ಮಾಹಿತಿ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಒಂದು ವೇಳೆ ನೀಡದಿದ್ದರೆ ಮೇಲಧಿಕಾರಿಗಳಿಗೆ ಸ್ವಯಂಚಾಲಿತವಾಗಿ ಆ ಅರ್ಜಿ ರವಾನೆಯಾಗುತ್ತದೆ. ಸಾರ್ವಜನಿಕರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆಯೂ ಮುಡಾ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ನಾಗರಿಕರ ಕುಂದು ಕೊರತೆಗಳನ್ನು ದಾಖಲಿಸಲು 'ಜನಸ್ಪಂದನ' ಎಂಬ ಏಕೀಕೃತ ವ್ಯವಸ್ಥೆಯೂ ಜಾರಿಗೆ ಬಂದಿದೆ. ಮುಡಾ ಕಚೇರಿಯಿಂದ ಯಾವುದೇ ಸೇವೆ ಪಡೆಯಲು ವಿಳಂಬ ಅಥವಾ ತೊಂದರೆ ಉಂಟಾದಲ್ಲಿ ದೂರು ದಾಖಲಿಸಬಹುದು. ಅದೇ ರೀತಿ ವೆಬ್ ಪೋರ್ಟಲ್ https://ipgrs.karnataka.gov.in ಮೊಬೈಲ್ ಆ್ಯಪ್ ಸಹಾಯವಾಣಿ 1902 ಮತ್ತು ಬಾಪೂಜಿ ಸೇವಾ ಕೇಂದ್ರಗಳ ಮೂಲಕವೂ ದೂರು ದಾಖಲಿಸಬಹುದೆಂದು ಮುಡಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಮುರಳೀಧರ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ನಕಲಿ ಸಹಿ ಪ್ರಕರಣ, ಪೂರ್ವಾನುಮತಿ ಇಲ್ಲದೇ ವಿದೇಶ ಪ್ರವಾಸ ಆರೋಪ

ಮುಡಾ ದ್ವಿತೀಯ ದರ್ಜೆ ಸಹಾಯಕ ನಂದೀಶ್ ವಿರುದ್ಧ ಕ್ರಮಕ್ಕೆ ಸೂಚನೆ

ಮೈಸೂರು, ನ. 15(ಆರ್‌ಕೆ)– ನಿವೇಶನಗಳ ಅಕ್ರಮ ಮಂಜೂರು ಸೇರಿದಂತೆ ಒಂದಲ್ಲ ಒಂದು ಹಗರಣದಲ್ಲಿ ಭಾಗಿಯಾಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಜೊತೆಗೆ ಇದೀಗ ಮತ್ತೊಬ್ಬನಿಗೆ ಕಂಟಕ ಶುರುವಾಗಿದೆ.

ಮುಡಾದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ನಂದೀಶ್, ಸರ್ಕಾರದ ಪೂರ್ವಾನುಮತಿ ಪಡೆಯದೇ ವಿದೇಶ ಪ್ರವಾಸ ಕೈಗೊಂಡಿರುವುದು ಹಾಗೂ ನಕಲಿ ಸಹಿ ಬಳಸಿದ ಪ್ರಕರಣದಲ್ಲಿ ಭಾಗಿಯಾಗಿದ್ದರು ಎಂಬ ಗಂಭೀರ ಆರೋಪ ಕೇಳಿಬಂದಿದೆ. ಈ ಕುರಿತಂತೆ ಮೈಸೂರಿನ ರಾಮಕೃಷ್ಣನಗರ ಹೆಚ್ ಬ್ಲಾಕ್ 7ನೇ ಮೇನ್ 2ನೇ ಕ್ರಾಸ್ ನಿವಾಸಿಯಾದ ಎಂ.ಕೆ. ಯಶವಂತಕುಮಾರ್ ಎಂಬುವರು ಬೆಂಗಳೂರಿನ ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ನಗರ ಹಾಗೂ ಗ್ರಾಮಾಂತರ ಯೋಜನಾ ಆಯುಕ್ತಾಲಯಕ್ಕೆ ಲಿಖಿತ ದೂರು ಸಲ್ಲಿಸಿದ್ದರು. ನಂದೀಶ್ ಈ ಹಿಂದೆ ಬ್ಯಾಂಕ್ ಚಲನ್‌ಗಳಿಗೆ ನಕಲಿ ಸಹಿ ಹಾಕುತ್ತಿದ್ದ ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಸರ್ಕಾರದ ಪೂರ್ವಾನುಮತಿ ಇಲ್ಲದೇ ವಿದೇಶ ಪ್ರವಾಸಗಳನ್ನು ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದರು.

ಅವರ ದೂರನ್ನು ಪರಿಶೀಲಿಸಿದ ಆಯುಕ್ತಾಲಯದ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಪತ್ರ ಬರೆದಿದ್ದು, ಯಶವಂತಕುಮಾರ್ ನೀಡಿರುವ ದೂರುಗಳ ಕುರಿತಂತೆ ಎಲ್ಲಾ ಅಂಶಗಳನ್ನು ನಿಯಮಾನುಸಾರ ಪರಿಶೀಲಿಸಿ 15 ದಿನದೊಳಗಾಗಿ ಸ್ಪಷ್ಟ ಅಭಿಪ್ರಾಯದೊಂದಿಗೆ ಕೂಡಲೇ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದ್ದಾರೆ.

ಇತ್ತೀಚೆಗಷ್ಟೇ ಬಿ.ಕೆ. ಕುಮಾರ್ ಎಂಬುವರು ಮುಡಾ ಮತ್ತು ಪಾಲಿಕೆ ಎರಡೂ ಸಂಸ್ಥೆಗಳಲ್ಲಿ ಕೆಲಸ ಮಾಡಿ ಏಕ ಕಾಲದಲ್ಲಿ ಎರಡೆರಡೂ ಕಡೆ ವೇತನ ಪಡೆಯುತ್ತಿದ್ದುದ್ದಲ್ಲದೇ, ಶೇ. 50:50ರ ಅನುಪಾತದಡಿ ಕಾನೂನು ಬಾಹಿರವಾಗಿ ನಿವೇಶನಗಳನ್ನು ಮಂಜೂರು ಮಾಡುವ ಹಗರಣದ ಕಿಂಗ್‌ಪಿನ್ ಎಂದು ಬಿಂಬಿತರಾಗಿದ್ದ ಹಿನ್ನೆಲೆಯಲ್ಲಿ ಆತನನ್ನು ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಅಶಾದ್ ಉರ್ ರೆಹಮಾನ್ ಷರೀಫ್, ಸೇವೆಯಿಂದ ವಜಾಗೊಳಿಸಿ, ಆತನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ವಾಣಿವಿಲಾಸ ವಾಟರ್ ವರ್ಕ್ಸ್ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಶ್ವಿನ್‌ಕುಮಾರ್ ಅವರಿಗೆ ನಿರ್ದೇಶನ ನೀಡಿದ್ದರು.

ಅದರಂತೆ ಅಶ್ವಿನ್ ಅವರು ವಾಣಿವಿಲಾಸ ವಾಟರ್ ವರ್ಕ್ಸ್ ವ್ಯಾಪ್ತಿಯ ವಿವಿ ಪುರಂ ಠಾಣೆಗೆ ದೂರು ನೀಡಲು ಮುಂದಾದರು. ಆದರೆ, ಈ ವಿಚಾರ ಸೇವಾ ನಿಯಮಗಳಿಗೆ ಸಂಬಂಧಿಸಿರುವುದರಿಂದ ಸದರಿ ಆರೋಪಿತ ಬಿ.ಕೆ. ಕುಮಾರ್ ಅವರ ಸೇವೆಯನ್ನು ಯಾವ ಸಂಸ್ಥೆಯಿಂದ (ಮುಡಾ ಅಥವಾ ಪಾಲಿಕೆ) ಪರಿಗಣಿಸಬೇಕೆಂಬ ಬಗ್ಗೆ ಕಾನೂನು ಅಭಿಪ್ರಾಯ ಪಡೆದ ಬಳಿಕ ದೂರು ದಾಖಲಿಸುವುದಾಗಿ ಇನ್ಸ್‌ಪೆಕ್ಟರ್ ವಿವೇಕಾನಂದ ಹೇಳಿದ್ದಾರೆ.

ನಾಳೆ ಮಹಿಳೆಯರಿಗೆ ಮೆಹಂದಿ, ಟ್ಯಾಟೊ ಸ್ಪರ್ಧೆ

ಮೈಸೂರು,ನ.15– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ನವೆಂಬರ್ 17 ರಂದು ಬೆಳಗ್ಗೆ 11 ಗಂಟೆಗೆ ಪಿ.ಕಾಳಿಂಗರಾವ್ ರಂಗಮಂಟಪದಲ್ಲಿ ಮಹಿಳೆಯರಿಗಾಗಿ "ಮೆಹಂದಿ ಮತ್ತು ಟ್ಯಾಟೊ" (Tatto) ಸ್ಪರ್ಧಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ನವೆಂಬರ್ 16 ರೊಳಗೆ ತಮ್ಮ ಹೆಸರುಗಳನ್ನು ಮಹಿಳಾ ಉದ್ಯಮಿ ಉಪಸಮಿತಿ ಅಧ್ಯಕ್ಷರಾದ ಪಿ.ರಾಜೇಶ್ವರಿ ಅವರ ಮೊ.ಸಂ: 9980532363, ಕಾರ್ಯಾಧ್ಯಕ್ಷರಾದ ರಾಣಿಪ್ರಭಾ ಅವರ ಮೊ.ಸಂ: 9035555500, ಉಪಾಧ್ಯಕ್ಷರಾದ ಎಸ್.ರೇಷ್ಮೆ ಅವರ ಮೊ.ಸಂ: 8861960474 ಮತ್ತು ಎಸ್.ಭವ್ಯ ಅವರ ಮೊ: 9164835719 ಅನ್ನು ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದು.

ಸಿಎಫ್‌ಟಿಆರ್‌ಐಗೆ ಭೇಟಿ ನೀಡಿದ ರಂಗರಾವ್ ಸ್ಮಾರಕ ವಿಶೇಷಚೇತನರ ಶಾಲೆಯ ವಿದ್ಯಾರ್ಥಿಗಳು



ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆಯ ವಿದ್ಯಾರ್ಥಿಗಳು ಮಕ್ಕಳ ದಿನಾಚರಣೆ ಪ್ರಯುಕ್ತ ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ)ಗೆ ಗುರುವಾರ ಭೇಟಿ ನೀಡಿದರು.

ಮೈಸೂರು,ನ.15–ಎನ್‌ಆರ್ ಫೌಂಡೇಶನ್‌ನಿಂದ ನಡೆಸಲ್ಪಡುವ ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆಯ ವಿದ್ಯಾರ್ಥಿಗಳು ಮಕ್ಕಳ ದಿನಾಚರಣೆ ಪ್ರಯುಕ್ತ ಮೈಸೂರಿನಲ್ಲಿರುವ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ)ಗೆ ಭೇಟಿ ನೀಡಿದರು. 8ನೇ ತರಗತಿಯಿಂದ ಹಿಡಿದು 10ನೇ ತರಗತಿವರೆಗಿನ 35 ವಿದ್ಯಾರ್ಥಿಗಳು ಸಿಎಫ್‌ಟಿಆರ್‌ಐಗೆ ಭೇಟಿ ನೀಡಿ ಜ್ಞಾನ ವೃದ್ಧಿಸಿಕೊಂಡರು. ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ (ಸಿಎಸ್‌ಐಆರ್) ನವದೆಹಲಿ ಸಂಸ್ಥೆಯ ಪ್ರಯೋಗಾಲಯ ಘಟಕವಾಗಿರುವ ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ)ಯು ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿಕೊಂಡಿರುವ ಶ್ರದ್ಧಾವಂತ ವಿಜ್ಞಾನಿಗಳ ತಂಡವನ್ನು ಹೊಂದಿದೆ. ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆ ಮಕ್ಕಳ ಭೇಟಿಯ ಸಂದರ್ಭದಲ್ಲಿ ಸಂಸ್ಥೆಯ ಹಿರಿಯ ವಿಜ್ಞಾನಿ ಡಾ.ಪರಿಗಿ ರಮೇಶ್ ಕುಮಾರ್ ವಿದ್ಯಾರ್ಥಿಗಳಿಗೆ ಸಂಸ್ಥೆಯ ಕುರಿತು ಸಂಪೂರ್ಣ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎನ್‌ಆರ್ ಗ್ರೂಪ್ ಅಧ್ಯಕ್ಷ ಗುರು, ಮಕ್ಕಳಿಗೆ ನೈಜ ಪ್ರಪಂಚದ ಅರಿವಿದ್ದರೆ ಅವರು ಉತ್ತಮವಾಗಿ ಕಲಿಯುತ್ತಾರೆ ಎಂಬುದು ನಮ್ಮ ಭಾವನೆ. ಹಾಗಾಗಿ ರಂಗರಾವ್ ಸ್ಮಾರಕ ವಿಕಲಚೇತನರ ಶಾಲೆಯು ಮಕ್ಕಳಿಗೆ ಅಂತಹ ಅವಕಾಶಗಳನ್ನು ಒದಗಿಸುತ್ತೇವೆ. ಸಿಎಫ್‌ಟಿಆರ್‌ಐ ಭೇಟಿಯಿಂದ ಮಕ್ಕಳಿಗೆ ಉತ್ತಮ ಜ್ಞಾನ ದೊರೆತಿದ್ದು, ಆ ಜ್ಞಾನ ಮುಂದಿನ ದಾರಿಗೆ ದೀಪವಾಗಲಿದೆ ಎಂದು ಹೇಳಿದರು.

ಮುಡಾ ಅಕ್ರಮಕ್ಕೆ ಸಚಿವರಿಬ್ಬರ ಸಹಕಾರ!

ಬೆಂಗಳೂರು, ನ.15– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಸೈಟ್ ಹಂಚಿಕೆ ಹಗರಣ ಕುಣಿಕೆ ಈಗ ಇಬ್ಬರು ಸಚಿವರಿಗೆ ಸುತ್ತಿಕೊಳ್ಳುವ ಸಾಧ್ಯತೆಯಿದೆ. ಸಿಎಂ ವಿರುದ್ಧ ಜಾರಿ ನಿರ್ದೇಶನಾಲಯದ (ಇಡಿ) ತನಿಖೆ ತೀವ್ರಗೊಳ್ಳುತ್ತಿದ್ದಂತೆ ಅಧಿಕಾರಿಗಳು ಈಗ ಇಬ್ಬರು ಸಚಿವರ ಹೆಸರನ್ನು ಹೇಳಿರುವ ವಿಚಾರ ಮೂಲಗಳಿಂದ ತಿಳಿದಿದೆ. ಇಡಿ ಮುಡಾದಲ್ಲಿ ಹಿಂದೆ ಕೆಲಸ ಮಾಡಿದ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಿದೆ. ಈ ವೇಳೆ 50:50 ಅನುಪಾತದಲ್ಲಿ ಸೈಟ್ ಹಂಚಿಕೆ ಮಾಡುವಾಗ ಇಬ್ಬರು ಸಚಿವರು ಪ್ರಭಾವ ಬೀರಿದ್ದಾರೆ. ಈ ಪ್ರಮುಖ ಸಚಿವರಿಂದಲೇ ಅಕ್ರಮ ನಡೆದಿದೆ ಎಂಬ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಮುಡಾ ಮಾಜಿ ಅಧಿಕಾರಿಗಳ ಹೇಳಿಕೆಯನ್ನು ಬೆನ್ನತ್ತಿರುವ ಇಡಿ ಈಗ ದಾಖಲೆ ಪರಿಶೀಲನೆಯನ್ನು ತೀವ್ರಗೊಳಿಸಿದೆ. ಒಂದು ವೇಳೆ ಅಧಿಕಾರಿಗಳ ಹೇಳಿಕೆಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳು ಸಿಕ್ಕಿದರೆ ಇಡಿ ಇಬ್ಬರು ಸಚಿವರನ್ನು ವಿಚಾರಣೆಗೆ ಕರೆಸಿಕೊಳ್ಳುವ ಸಾಧ್ಯತೆಯಿದೆ. ಮುಡಾ ವಿಚಾರಣೆ ತೀವ್ರಗೊಳ್ಳುತ್ತಿದ್ದಂತೆ ಸಿಎಂ ಸಿದ್ದರಾಮಯ್ಯ ದೆಹಲಿಯಲ್ಲಿರುವ ಕಾನೂನು ತಂಡದ ಜೊತೆ ಸಮಾಲೋಚನೆ ನಡೆಸಿ ಮುಂದಿನ ಕಾನೂನು ಹೋರಾಟಕ್ಕೆ ಸಿದ್ಧತೆ ಮಾಡುತ್ತಿದ್ದಾರೆ ಎನ್ನಲಾಗಿದೆ.

ನ.17, ಮಧುಮೇಹ, ರಕ್ತದೊತ್ತಡ ಉಚಿತ ಶಿಬಿರ

ಮೈಸೂರು, ನ.15(ಜಿಎ)– ಮೈಸೂರಿನ ಕಾರುಣ್ಯ ಕ್ಲಿನಿಕ್ ಮತ್ತು ಡಯಾಗ್ನೋಸ್ಟಿಕ್ ಕೇಂದ್ರದಲ್ಲಿ ವಿಶ್ವ ಮಧುಮೇಹ ದಿನಾಚರಣೆ ಪ್ರಯುಕ್ತ ನ.17ರಂದು ಭಾನುವಾರ ಬೆಳಗ್ಗೆ 10 ರಿಂದ ಮಧ್ಯಾಹ್ನ ಒಂದರವರೆಗೆ ಮಧುಮೇಹ, ರಕ್ತದೊತ್ತಡ ತಪಾಸಣಾ ಉಚಿತ ಶಿಬಿರ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಮುಖ್ಯಸ್ಥ ಡಾ.ವೆಂಕಟಸುಬ್ಬಯ್ಯ ಈ ವಿಷಯ ತಿಳಿಸಿ, ಬಹಳಷ್ಟು ಮಂದಿಗೆ ತಮಗೆ ಮಧುಮೇಹ ಇರುವುದೇ ತಿಳಿದಿರುವುದಿಲ್ಲ. ಹೀಗಾಗಿ ಕ್ರಮೇಣ ಅನೇಕ ಆರೋಗ್ಯ ಸಮಸ್ಯೆ ಎದುರಿಸುತ್ತಾರೆ. ಮಧುಮೇಹ ಇರುವವರೂ ಸಹಾ ಅದನ್ನು ನಿರ್ಲಕ್ಷಿಸಿ ಸಮಸ್ಯೆಗೆ ಒಳಗಾಗುತ್ತಾರೆ. ಹೀಗಾಗಿ ಇವರಿಗೆ ಶಿಬಿರ ಆಯೋಜಿಸಿದ್ದು, ಉಚಿತ ಪ್ರಯೋಜನ ಪಡೆಯಬಹುದಾಗಿದೆ ಎಂದರು.


ಮಧುಮೇಹ ಇರುವುದು ಕಂಡುಬಂದಲ್ಲಿ ಅವರಿಗೆ ಉಚಿತ ಸಲಹೆ ನೀಡಲಾಗುವುದು. ಇದಕ್ಕೆ ನೋಂದಣಿ ಅಗತ್ಯವಿಲ್ಲ. ಆ ದಿನದಂದು ಆಗಮಿಸಿ ತಪಾಸಣೆಗೆ ಒಳಗಾಗಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ರಘುನಂದನ್, ವೆಂಕಟೇಶ್ ಉಪಸ್ಥಿತರಿದ್ದರು.

ಅರ್ಹರಲ್ಲದಿದ್ದರೂ 36 ವೈದ್ಯರಿಗೆ 3.50 ಕೋಟಿಗೂ ಅಧಿಕ ವಿಶೇಷ ಭತ್ಯೆ

ಬೆಂಗಳೂರು, ನ.15–ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ 36ಕ್ಕೂ ಹೆಚ್ಚು ವೈದ್ಯಾಧಿಕಾರಿಗಳು ಅರ್ಹತೆ ಇಲ್ಲದಿದ್ದರೂ ವಿಶೇಷ ಭತ್ಯೆಯಾಗಿ 3.50 ಕೋಟಿಗೂ ಅಧಿಕ ಮೊತ್ತವನ್ನು ಪಡೆದಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿವಿಧ ವೃಂದಗಳ ತಜ್ಞ ವೈದ್ಯರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹಾಗೂ ದಂತ ಆರೋಗ್ಯಾಧಿಕಾರಿಗಳಿಗೆ ಅವರ ತಜ್ಞತೆ ಮತ್ತು ಸೇವಾವಧಿಗೆ ಅನುಸಾರವಾಗಿ ವಿಶೇಷ ಭತ್ಯೆಗಳಿಗೆ ರಾಜ್ಯ ಸರ್ಕಾರ ಮಂಜೂರಾತಿ ನೀಡಿದೆ. ಅದರಂತೆ ಸದರಿ ವೈದ್ಯಾಧಿಕಾರಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯ ವೃತ್ತಿಗೆ ಅನುಸಾರವಾಗಿ ವಿಶೇಷ ಭತ್ಯೆಗಳನ್ನು ವೇತನದೊಂದಿಗೆ ಪಡೆಯಬಹುದಾಗಿದೆ.

ವಿಶೇಷ ಭತ್ಯೆ ಪಡೆಯಬೇಕಾದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳು ತಮ್ಮ ವೈದ್ಯ ವೃತ್ತಿಗೆ ಅನುಸಾರವಾದ ಕರ್ತವ್ಯ ಮತ್ತು ಜವಾಬ್ದಾರಿ ನಿರ್ವಹಿಸುವುದು ಕಡ್ಡಾಯ. ಆದರೆ, ಈ ನಿಯಮ ಅನುಸರಿಸದೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ವಿಭಾಗದ ಅಂಕಿತಾಧಿಕಾರಿ ಇಲ್ಲವೇ ಆಹಾರ ಸುರಕ್ಷಾಧಿಕಾರಿಯಾಗಿ ಕಾರ್ಯಕಾರಿ ಹುದ್ದೆಗಳಿಗೆ ನಿಯೋಜನೆಗೊಳ್ಳುವ ವೈದ್ಯಾಧಿಕಾರಿಗಳು ನಿಯೋಜನೆ ಪ್ರಾರಂಭಗೊಂಡು ಮುಕ್ತಾಯದ ಅವಧಿವರೆಗೆ ವೈದ್ಯ ವೃತ್ತಿಗೆ ತಕ್ಕಂತೆ ಪಡೆಯುತ್ತಿದ್ದ ಯಾವುದೇ ವೈದ್ಯಕೀಯ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ ಎಂಬ ನಿಯಮವಿದೆ. ಹೀಗಿದ್ದರೂ 35ಕ್ಕೂ ಅಧಿಕ ವೈದ್ಯಾಧಿಕಾರಿಗಳು ವಿಶೇಷ ಭತ್ಯೆ ಪಡೆದು ನಿಯಮ ಉಲ್ಲಂಘಿಸಿರುವುದು ಪತ್ತೆಯಾಗಿದೆ. 2023 ಮೇ 24ರಂದು ರಾಜ್ಯದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಆಯುಕ್ತಾಲಯ ಹಾಗೂ ಅಂಕಿತಾಧಿಕಾರಿಗಳ ಕಚೇರಿಗಳು ಸೇರಿದಂತೆ ಒಟ್ಟು 38 ಡಿಡಿಓ ಕೋಡ್ ಸೃಜಿಸಲಾಗಿತ್ತು. ಈ ಎಲ್ಲಾ ಕಚೇರಿಯ ಅಂಕಿತಾಧಿಕಾರಿಗಳ ಡಿಡಿಓ ಕೋಡ್ ಅನ್ನು ವಿಶೇಷ ಭತ್ಯೆಗಳನ್ನು ಡ್ರಾ ಮಾಡಲಾಗದಂತೆ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ತಡೆಹಿಡಿಯಲು ಕ್ರಮ ಕೈಗೊಳ್ಳುವಂತೆ ಎಚ್‌ಆರ್‌ಎಂಎಸ್ ನಿರ್ದೇಶಕರಿಗೆ ಕೋರಲಾಗಿತ್ತು. ಜೊತೆಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಂಕಿತಾಧಿಕಾರಿಗಳಿಗೆ ವಿಶೇಷ ಭತ್ಯೆ ಪಡೆಯದಂತೆ ಸೂಚಿಸಲಾಗಿತ್ತು.



ಈ ಎಲ್ಲಾ ಸೂಚನೆಗಳ ನಡುವೆಯೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ನಿಯೋಜನೆ ಮೇಲೆ ಬಿಬಿಎಂಪಿ. ಬೀದರ್, ರಾಮನಗರ, ದಾವಣಗೆರೆ, ಮೈಸೂರು ಗ್ರಾಮಾಂತರ, ಚಿಕ್ಕಮಗಳೂರು, ಕೊಡಗು, ಧಾರವಾಡ, ಕೊಪ್ಪಳ, ರಾಯಚೂರು, ಬೆಂಗಳೂರು ಗ್ರಾಮಾಂತರ (ಮೂವರು ಅಧಿಕಾರಿಗಳು ನಿವೃತ್ತರಾಗಿದ್ದಾರೆ), ಬೆಂಗಳೂರು ನಗರ, ತುಮಕೂರು, ಬಿಚ್‌ಡಿಎಂಸಿ, ವಿಜಯಪುರ, ಬೆಳಗಾವಿ ಸೇರಿದಂತೆ ಇತರೆಡೆ ಕರ್ತವ್ಯ ನಿರ್ವಹಿಸುತ್ತಿರುವ 35 ವೈದ್ಯಾಧಿಕಾರಿಗಳು ನಿಯಮಾನುಸಾರ ತಮ್ಮ ವಿದ್ಯಾರ್ಹತೆ, ತಜ್ಞತೆ, ಕಾರ್ಯ ಸ್ವರೂಪವನ್ನು ಆಧರಿಸಿ ನೀಡಲಾಗುವ ವಿಶೇಷ ಭತ್ಯೆಗೆ ಅರ್ಹರಲ್ಲದಿದ್ದರೂ ನವೆಂಬರ್ 2019ರಿಂದ ಆಗಸ್ 2024ರವರೆಗೆ ಬರೋಬ್ಬರಿ 3.50 ಕೋಟಿ ರೂ.ಗಳಿಗೂ ಹೆಚ್ಚು ವಿಶೇಷ ಭತ್ಯೆಯನ್ನು ಡ್ರಾ ಮಾಡಿಕೊಂಡಿರುವ ಬಗ್ಗೆ ಇಲಾಖೆ ಸರ್ಕಾರಕ್ಕೆ ಮಾಹಿತಿ ನೀಡಲಾಗಿತ್ತು.

ಸಂಬಳದಲ್ಲಿ ಕಡಿತಕ್ಕೆ ಆದೇಶ: ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ನಿಯೋಜನೆಗೊಂಡು ಕಾನೂನು ಬಾಹಿರವಾಗಿ ವಿಶೇಷ ಭತ್ಯೆ ಪಡೆದಿರುವ 35ಕ್ಕೂ ಹೆಚ್ಚು ವೈದ್ಯಾಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರ ಕ್ರಮಕ್ಕೆ ಮುಂದಾಗಿದೆ. ವಿಶೇಷ ಭತ್ಯೆ ಡ್ರಾ ಮಾಡಿಕೊಂಡಿರುವ ವೈದ್ಯಾಧಿಕಾರಿಗಳ ಸಂಬಳದಲ್ಲಿ ಅವರು ಪಡೆದಿರುವ ವಿಶೇಷ ಭತ್ಯೆ ಆಧಾರದಲ್ಲಿ ಪ್ರತಿ ತಿಂಗಳು ಕಂತಿನಂತೆ(ಇನ್ಸ್ಟಾಲ್‌ಮೆಂಟ್) ಕಡಿತ ಮಾಡಲು ಇಲಾಖೆಗೆ ಸೂಚಿಸಿದೆ. ಒಂದು ವೇಳೆ ವಿಶೇಷ ಭತ್ಯೆ ಪಡೆದು ನಿವೃತ್ತರಾಗಿದ್ದರೆ ಅವರು ಪಡೆದ ಹಣವನ್ನು ಪಿಂಚಣಿಯಿಂದ ಕಟಾವು ಮಾಡಿ ಸರ್ಕಾರಿ ಖಜಾನೆಗೆ ಜಮೆ ಮಾಡುವಂತೆ ಆದೇಶಿಸಲಾಗಿದೆ.

ಮೈಸೂರು ಮಿತ್ರ

ಶನಿವಾರ 16 ನವೆಂಬರ್ 2024

ಬಿರ್ಸಾ ಮುಂಡಾ ಬುಡಕಟ್ಟು ಜನಾಂಗಕ್ಕೆ ಆರಾಧ್ಯ ದೈವ

ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್ ಅಭಿಮತ



ಕಾರ್ಯಕ್ರಮವನ್ನು ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್ ಉದ್ಘಾಟಿಸಿದರು.

ಮಂಡ್ಯ,ನ.15– ಬಿರ್ಸಾ ಮುಂಡಾ ಅವರು ಬುಡಕಟ್ಟು ಜನಾಂಗದವರಿಗೆ ಆರಾಧ್ಯ ದೈವವಿದ್ದಂತೆ, ಅವರ ಜನಾಂಗದ ಅಳಿವು ಉಳಿವಿಗಾಗಿ ಹೋರಾಡಿ ಮಡಿದ ಧೀಮಂತ ನಾಯಕ ಬಿರ್ಸಾ ಮುಂಡಾ. ಅವರ ಧೈರ್ಯ ದಿಟ್ಟತನವನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್ ಅವರು ತಿಳಿಸಿದರು.

ಶುಕ್ರವಾರ ನಗರದ ಜಿಲ್ಲಾ ಪಂಚಾಯತಿ ಕಾವೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಧರ್ತಿ ಆಬಾ ಭಗವಾನ್ ಬಿರ್ಸಾ ಮುಂಡಾ ರವರ 150ನೇ ಜನ್ಮ ಜಯಂತಿ ಅಂಗವಾಗಿ ಜನ ಜಾತಿಯ ಗೌರವ್ ದಿವಸ ಸಮಾರಂಭ ಹಾಗೂ ಧರ್ತಿ ಆಬಾ ಜನಜಾತಿಯ ಗ್ರಾಮ ಉತ್ಕರ್ಷ್ ಅಭಿಯಾನದ ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಿ ಮಾತನಾಡಿದರು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಆದಿವಾಸಿಗಳು ಅನೇಕ ರೀತಿಯಲ್ಲಿ ಕೊಡುಗೆ ನೀಡಿದ್ದು ಅಂತಹವರ ಸಾಲಿಗೆ ಬಿರ್ಸಾ ಮುಂಡಾ ಕೂಡ ಸೇರಿದ್ದಾರೆ. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಬುಡಕಟ್ಟು ನಾಯಕರಾಗಿ ಗುರುತಿಸಿಕೊಂಡವರು. ಬ್ರಿಟಿಷರ ಅನ್ಯಾಯ ಮತ್ತು ಬುಡಕಟ್ಟು ಜನರ ಶೋಷಣೆಯ ವಿರುದ್ಧ ಧ್ವನಿ ಎತ್ತುವ ಮೂಲಕ ಬುಡಕಟ್ಟು ಸಮುದಾಯದ ಹಕ್ಕುಗಳಿಗಾಗಿ ಹೋರಾಡಿದ್ದಾರೆ. ಇವರು ನೀಡಿರುವ ಕೊಡುಗೆಯನ್ನು ಗೌರವಿಸುದಕ್ಕಾಗಿಯೇ ಅವರ ಜನ್ಮ ದಿನವನ್ನು ನ.15 ರಂದು ರಾಷ್ಟ್ರೀಯ ಮಟ್ಟದಲ್ಲಿ ಬುಡಕಟ್ಟು ಹೆಮ್ಮೆಯ ದಿನವನ್ನಾಗಿ ಆಚರಣೆ ಮಾಡಲಾಗುತ್ತದೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷ ಪ್ರಕಾಶ್ ಮಾತನಾಡಿ, ಬುಡಕಟ್ಟು ಸಮಾಜದ ಹೋರಾಟ, ಸ್ವಾಭಿಮಾನ ಮತ್ತು ಅವರ ಹಕ್ಕುಗಳ ರಕ್ಷಣೆಯ ಸಂಕೇತವೆಂದು ಈ ದಿನವನ್ನು ಪರಿಗಣಿಸಲಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವೇದಿಕೆಯ ಮೇಲೆ ಬುಡಕಟ್ಟು ಸಮುದಾಯಕ್ಕೆ ಸಂಬಂಧಿಸಿದಂತೆ ಭಿತ್ತಿ ಪತ್ರ ಬಿಡುಗಡೆಗೊಳಿಸಲಾಯಿತು. ತದನಂತರ ಬುಡಕಟ್ಟು ಜನಾಂಗದವರು ಅವರ ಸಮುದಾಯದ ನೃತ್ಯ ಪ್ರದರ್ಶನ ಮಾಡಿದರು. ಕಾರ್ಯಕ್ರಮದಲ್ಲಿ ಎಎಸ್ಪಿ ಗಂಗಾಧರಸ್ವಾಮಿ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಸಿದ್ದಲಿಂಗೇಶ್, ನಗರಸಭೆ ಸದಸ್ಯ ಶಿವಲಿಂಗು, ಭಾರತ ಆಡಳಿತ ಸೇವೆಯ ವೃತ್ತಿಪರ ಅಧಿಕಾರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಂಡ್ಯ ಸಾಹಿತ್ಯ ಸಮ್ಮೇಳನ ಇಡೀ ಇಂಡಿಯಾದಲ್ಲಿ ಹೆಸರಾಗಬೇಕು

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ



ಸಭೆಯಲ್ಲಿ ಜಿಲ್ಲಾಧಿಕಾರಿ ಕುಮಾರ್ ಮಾತನಾಡಿದರು.

ಮಂಡ್ಯ, ನ.15– ಮಂಡ್ಯ ನಗರದಲ್ಲಿ ಡಿ.20, 21, 22ರಂದು ಜರುಗಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಇಂಡಿಯಾದಲ್ಲಿ ಹೆಸರಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಹಾಗೂ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಂಸ್ಕೃತಿಕ ಸಮನ್ವಯ ಸಮಿತಿ ಅಧ್ಯಕ್ಷ ದಿನೇಶ್ ಗೂಳಿಗೌಡ ಅವರು ಹೇಳಿದರು.

ಶುಕ್ರವಾರ ನಗರದ ಹೊರವಲಯದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಂಸ್ಕೃತಿಕ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇತಿಹಾಸದಲ್ಲಿ ಉಳಿಯುವಂತಹ ಕಾರ್ಯಕ್ರಮಗಳನ್ನು ಆಯೋಜಿಸುವ ಮುಖಾಂತರ ಸಮ್ಮೇಳನ ಯಶಸ್ವಿಗೊಳಿಸಿ ಜಿಲ್ಲೆಯ ಹೆಸರನ್ನು ಎತ್ತಿ ಹಿಡಿಯಬೇಕು ಎಂದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲಾ ವರ್ಗದವರಿಗೆ ಸಮಾನ ಅವಕಾಶ ನೀಡಬೇಕು. ಸ್ಥಳೀಯ ಕಲೆ, ಕಲಾವಿದರನ್ನು ಪ್ರೋತ್ಸಾಹಿಸುವ ಕೆಲಸವಾಗಬೇಕು. ನೋಂದಣಿಯಾಗಿರುವ ಕಲಾವಿದರ ಪಟ್ಟಿಯನ್ನು ಅಂತಿಮಗೊಳಿಸಿ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವಾಗಿರುವುದರಿಂದ ದೇಶದ ನಾನಾ ಭಾಗದ ಕಲಾ ಪ್ರದರ್ಶನಕ್ಕೆ ಅವಕಾಶ ನೀಡುವುದರ ಜೊತೆಗೆ 31 ಜಿಲ್ಲೆಯ ಮುಖ್ಯ ಕಲಾಪ್ರಕಾರಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಹೇಳಿದರು.

ಸಾಂಸ್ಕೃತಿಕ ಸಮಿತಿ ಉಪಾಧ್ಯಕ್ಷರಾದ ಪ್ರೊ.ಜಯಪ್ರಕಾಶ್‌ಗೌಡ ಮಾತನಾಡಿ, ಕಲಾವಿದರ ಆಯ್ಕೆಗೆ ಮಾನದಂಡ ನಿಗದಿಗೊಳಿಸಬೇಕು. ಕಲಾವಿದರಿಗೆ ಗೌರವಧನ ಹೆಚ್ಚಿಸಬೇಕು. ಕಲಾಮಂದಿರ, ಅಂಬೇಡ್ಕರ್ ಭವನದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ಸ್ಥಳೀಯ ಕಲಾವಿದರಿಗೆ ಅವಕಾಶ ಕಲ್ಪಿಸಬೇಕು. ಸ್ಥಳೀಯ ಕಲಾವಿದರ ಜೊತೆ ರಾಜ್ಯದ ಕಲಾವಿದರ ಸಮನ್ವಯತೆ ಕಾಯ್ದುಕೊಂಡು ವೇದಿಕೆ ಹಂಚಿಕೆಯಾಗಬೇಕು ಎಂದು ಹೇಳಿದರು.

ನಾಡಗೀತೆ, ನಾಲ್ವಡಿ ಕೃಷ್ಣರಾಜ ಒಡೆಯರ್, ರೈತಗೀತೆ ಇರಬೇಕು. ಸ್ಥಳೀಯ ಕಲಾವಿದರೇ ಹಾಡಬೇಕು. ಕನ್ನಡ ಸಾಹಿತ್ಯ ಪರಿಷತ್‌ಗೆ ಶಂಕರೇಗೌಡರು, ಜಿ.ನಾರಾಯಣ್ ಅವರುಗಳ ಕೊಡುಗೆ ಸಾಕಷ್ಟಿದೆ. ಸಮ್ಮೇಳನದ ಸ್ಥಳಗಳಲ್ಲಿ ನಿರ್ಮಿಸುವ ಮಹಾದ್ವಾರಗಳಿಗೆ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಸೇರಿದಂತೆ ಮಂಡ್ಯ ಜಿಲ್ಲೆಯ ಮಹನೀಯರ ಹೆಸರಿಡಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಪಾರದರ್ಶಕ ನಿಯಮ, ಮಾನದಂಡಗಳನ್ನು ಅನುಸರಿಸಿ ಎಲ್ಲಾ ಕಲಾವಿದರಿಗೆ ಅವಕಾಶ ಕಲ್ಪಿಸಬೇಕು. ಮೂರು ವೇದಿಕೆಗಳಲ್ಲಿ ವಿವಿಧ ವಿಚಾರ ಗೋಷ್ಠಿ ಮುಗಿದ ನಂತರ ಕಾರ್ಯಕ್ರಮಕ್ಕೆ ಅವಕಾಶ ಸಿಗಲಿದೆ. ಅಂಬೇಡ್ಕರ್ ಭವನ, ಕಲಾಮಂದಿರದಲ್ಲಿ ಸ್ಥಳೀಯ ಕಲಾವಿದರ ಕಾರ್ಯಕ್ರಮಗಳಿಗೆ ಅವಕಾಶ ಸಿಗಲಿದೆ ಎಂದರು.

ಸಭೆಯಲ್ಲಿ ಮೈಸೂರು ವಿಭಾಗದ ಕನ್ನಡ ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಕಸಾಪ ಜಿಲ್ಲಾ ಸಂಚಾಲಕರಾದ ಮೀರಾ ಶಿವಲಿಂಗಯ್ಯ, ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ನಂದೀಶ್, ಡಿಡಿಪಿಐ ಶಿವರಾಮೇಗೌಡ ಸೇರಿದಂತೆ ಉಪಸಮಿತಿಯ ಸಂಚಾಲಕರು, ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ದೊಡ್ಡಬ್ಯಾಡರಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಎಸ್.ಆನಂದ್ ಆಯ್ಕೆ



ಗ್ರಾಪಂ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಸದಸ್ಯ ಎಸ್.ಆನಂದ್ ಅವರನ್ನು ಮುಖಂಡರು ಅಭಿನಂದಿಸಿದರು.

ಪಾಂಡವಪುರ, ನ.15– ತಾಲೂಕಿನ ದೊಡ್ಡಬ್ಯಾಡರಹಳ್ಳಿ ಗ್ರಾಪಂನ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಜಿಲ್ಲಾ ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಎಸ್.ಆನಂದ್ ಅವರು ಅವಿರೋಧವಾಗಿ ಆಯ್ಕೆಯಾದರು.

ಗ್ರಾಪಂನ ಹಿಂದಿನ ಅಧ್ಯಕ್ಷ ಕೆ.ಮನು ಅವರು ಒಡಂಬಡಿಕೆ ಅನ್ವಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಿಗಧಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಎಸ್.ಆನಂದ್ ಹೊರತುಪಡಿಸಿ ಉಳಿದ ಯಾವೊಬ್ಬ ಸದಸ್ಯರೂ ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಗ್ರಾಪಂ ನೂತನ ಅಧ್ಯಕ್ಷರನ್ನಾಗಿ ಎಸ್.ಆನಂದ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಇಂಜಿನಿಯರ್ ಪುಟ್ಟಮಾಯಿಗೌಡ ಘೋಷಿಸಿದರು.

ನೂತನ ಅಧ್ಯಕ್ಷರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಲಯನ್ ಕ್ಲಬ್ ಫ್ರೆಂಚ್‌ರಾಕ್ಸ್ ಖಜಾಂಚಿ ಡಾ.ಸ್ವಾಮೀಗೌಡ, ಕಾರ್ಯದರ್ಶಿ ಪುಟ್ಟಬಸವೇಗೌಡ ಸೇರಿದಂತೆ ಗ್ರಾಪಂ ಸದಸ್ಯರು, ಮುಖಂಡರು ಅಭಿನಂದಿಸಿದರು. ಅಧ್ಯಕ್ಷ ಎಸ್.ಆನಂದ್ ಮಾತನಾಡಿ, ಮುಂದಿನ ದಿನಗಳಲ್ಲಿ ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಉಪಾಧ್ಯಕ್ಷೆ ಪವಿತ್ರ, ಸದಸ್ಯರಾದ ಶಂಕರ್, ಪ್ರಸನ್ನ, ನಿಂಗರಾಜು, ಕೆ.ಮನು, ಕೆ.ರವಿರಾಜ್, ಮಹದೇವಮ್ಮ ಕುಮಾರಿ, ಶಿವಲಿಂಗ, ಬಿ.ಕೆ.ಶಕುಂತಲ, ಮಂಜುಳ, ಕೆ.ಎಸ್.ಶಿಲ್ಪ, ಮಂಗಳಮ್ಮ, ಭಾರತಿ, ಮುಖಂಡರಾದ ಅಂಗಡಿ ಚನ್ನೇಗೌಡ, ಸಿ.ಎ.ನಿಂಗೇಗೌಡ, ಕುಳ್ಳೇಗೌಡ, ಡೇರಿ ಅಧ್ಯಕ್ಷ ಸಿ.ಎನ್. ಚಂದನ್, ಟಿ.ಪಿ. ಸ್ವಾಮಿ, ಶಂಕರೇಗೌಡ, ರವಿ, ಗೆಂಡೇಗೌಡ, ಡಿ.ಪಿ.ಧರ್ಮ, ಡಿ.ಎಂ.ನಿಂಗೇಗೌಡ, ಮಂಜು, ಅಣ್ಣೇಗೌಡ, ರವಿ, ನಿಂಗರಾಜು (ರಂದ), ಪರಮೇಶ್, ನಂಜುಂಡಪ್ಪ, ಉಮೇಶ, ರಾಜಣ್ಣ, ಸುರೇಶ್, ಮಹದೇವಸ್ವಾಮಿ, ಹನುಮಂತು, ಮಹೇಂದ್ರ, ಜವರಪ್ಪ, ಸತೀಶ, ವೀರಶೈವ ಮುಖಂಡರಾದ ಐಡಿಯಲ್ ಪ್ರಕಾಶ್, ರಮೇಶ್, ಗೂಳಪ್ಪ, ವಿಶ್ವೇಶ್ವರಯ್ಯ, ಶಿವಕುಮಾರ್, ರವಿ, ಜಯಣ್ಣ, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ಹರಿಹರಪುರ: ಹಳೇ ವಿದ್ಯಾರ್ಥಿಗಳ ಸ್ನೇಹಮಿಲನ, ಗುರುವಂದನೆ



ಕೆ.ಆರ್.ಪೇಟೆ ತಾಲೂಕಿನ ಹರಿಹರಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದ 1994–1997 ನೇ ಅವಧಿಯಲ್ಲಿ 8ರಿಂದ 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಹಾಗೂ ಶಿಕ್ಷಕರಿಗೆ ಗುರುವಂದನಾ ಕಾರ್ಯಕ್ರಮ ಸಡಗರ ಮತ್ತು ಸಂಭ್ರಮದಿಂದ ನಡೆಯಿತು.

ಕೆ.ಆರ್.ಪೇಟೆ, ನ.15– ತಾಲೂಕಿನ ಹರಿಹರಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದ 1994–1997 ನೇ ಅವಧಿಯಲ್ಲಿ 8ರಿಂದ 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಹಾಗೂ ಶಿಕ್ಷಕರಿಗೆ ಗುರುವಂದನಾ ಕಾರ್ಯಕ್ರಮ ಸಡಗರ ಮತ್ತು ಸಂಭ್ರಮದಿಂದ ನಡೆಯಿತು.

ಮೂರು ದಶಕಗಳ ಹಿಂದೆ ಸ್ನೇಹಿತರಾಗಿ ಒಂದೇ ಶಾಲೆಯಲ್ಲಿ ಕಲಿತು ಈಗ ಬೇರೆ– ಬೇರೆ ಕಡೆ, ಬೇರೆ ಬೇರೆ ಉದ್ಯೋಗದಲ್ಲಿ ಬದುಕು ಕಟ್ಟಿಕೊಂಡಿರುವ ಐವತ್ತಕ್ಕೂ ಅಧಿಕ ವಿದ್ಯಾರ್ಥಿಗಳು ಒಂದೆಡೆ ಸೇರಿ ತಮ್ಮ ಹಳೆಯ ನೆನಪುಗಳನ್ನು ಬಿಚ್ಚಿಟ್ಟರು.

ತಮಗೆ ಅಕ್ಷರ ಕಲಿಸಿಕೊಟ್ಟು, ಸನ್ಮಾರ್ಗವನ್ನು ತೋರಿಸಿದ್ದ ಶಿಕ್ಷಕರಾದ ಜೆ.ಜಿ. ರಾಜೇಗೌಡ, ಎಂ.ಎನ್.ನಾಗೇಶ್, ಬಿ.ಎನ್. ಪರಶಿವಮೂರ್ತಿ, ಸ್ವಾಮೀಗೌಡ, ಸುರೇಶ್ ಹಂಚಿನಾಳ್, ವೆಂಕಟರಾಮ್ ಮತ್ತು ಶ್ರೀನಿವಾಸಮೂರ್ತಿಯವರನ್ನು ತಳಿರು ತೋರಣಗಳಿಂದ ಸಿಂಗರಿಸಿದ ಎತ್ತಿನ ಬಂಡಿಯಲ್ಲಿ ಹರಿಹರಪುರ ಮುಖ್ಯ ರಸ್ತೆಯಲ್ಲಿ ಜಾನಪದ ಕಲಾತಂಡಗಳ ಕಲರವದೊಂದಿಗೆ ಮೆರವಣಿಗೆ ಮಾಡಿ ಶಾಲೆಗೆ ಕರೆತಂದು ಗುರುವಂದನೆ ಸಲ್ಲಿಸಿದರು. ಸಾಮೂಹಿಕವಾಗಿ ತಮ್ಮ ಗುರುಗಳಿಗೆ ಫಲತಾಂಬೂಲ ನೀಡಿ ಗೌರವಿಸುವ ಮೂಲಕ ಆಶೀರ್ವಾದ ಪಡೆದುಕೊಂಡರು.

ಕಾರ್ಯಕ್ರಮದ ಅಂಗವಾಗಿ ಇಡೀ ಶಾಲೆಯನ್ನು ತಳಿರು–ತೋರಣಗಳಿಂದ ಹಾಗೂ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಸಮಾರಂಭದಲ್ಲಿ ಹಿರಿಯ ವಿದ್ಯಾರ್ಥಿಗಳಾದ ಜಯಕೀರ್ತಿ, ಪ್ರೇಮ್ ಕುಮಾರ್, ಅಶ್ವಿನಿ, ಧನಂಜಯ, ಎಚ್.ಎಸ್.ಲೋಕೇಶ್, ಮೋಹನ್ ಕುಮಾರ್, ಸಂತೋಷ್, ಡಿ.ಕೆ.ರಾಣಿ ಎಂ.ಎಸ್, ರಾಣಿ, ಎಂ.ಜೆ. ವೀರಭದ್ರ, ಸುನೀತ, ಕುಸುಮ, ಸೌಮ್ಯ, ಎನ್.ಜಿ.ಬಾಬು, ಎಂ.ಎಸ್.ಯೋಗೇಶ್, ಶಿವಕುಮಾರ, ಚಂದ್ರಶೇಖರ್, ಹರೀಶ್. ಡಿ.ಎಸ್, ರಾಘವೇಂದ್ರ, ಎಲ್.ಆರ್. ಕುಮಾರಾಚಾರಿ, ಪಾರ್ವತಿ, ಡಿ.ಎಂ. ಸೌಮ್ಯ, ಶೈಲಜಾ, ಕೆ.ಆರ್.ಸುಧಾಮಣಿ, ಎಂ.ಟಿ.ರೇವಣ್ಣ, ಧನಂಜಯ, ಎ.ಎಸ್, ಉಮೇಶ್, ಪ್ರಸಾದ್ ಟಿ. ಮಹೇಶ, ಟಿ.ಎಸ್.ಶ್ರೀನಿವಾಸ್, ಎಚ್.ಜೆ.ಸತೀಶ್, ಲೀಲಾವತಿ, ಕಾಂತಾಮಣಿ, ಎಂ.ಬಿ. ನಿಂಗೇಗೌಡ, ರಘು, ಪ್ರಭಾಕರ, ನಟೇಶ ಬಾಬು, ಸುರೇಶ್, ಗೀತಾ.ಎಚ್.ಕೆ. ಗಿರಿಜ, ಡಿ.ಸಿ.ರೇವಣ್ಣ, ನಿತ್ಯಾನಂದ, ಪ್ರಸನ್ನ , ಮನೋಹರ್, ಬಾಲಸುಬ್ರಹ್ಮಣ್ಯ ಸೇರಿದಂತೆ 1994–97ನೇ ಅವಧಿಯಲ್ಲಿನ ಕಲಿತ ಎಲ್ಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹಿರಿಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿ ಸಾಧನೆ ಅನನ್ಯ

● ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಬಣ್ಣನೆ ● ವಸುಂಧರ 75ನೇ ಜನ್ಮ ದಿನಾಚರಣೆ; ಕುರಿತಾದ ಪುಸ್ತಕ ಬಿಡುಗಡೆ



40ನೇ ವರ್ಷದ ರಾಷ್ಟ್ರಿಯ ಮಟ್ಟದ ಶಾಸ್ತ್ರೀಯ ಸಂಗೀತ–ನೃತ್ಯಗಳ ಹಬ್ಬ ಹಾಗೂ ನೃತ್ಯ ಪಯಣದ ವ್ಯಕ್ತಿಚಿತ್ರಣ ಬಿಂಬಿಸುವ `Orbit of Vasundhara-Realm of Dance`s Truth' ಮತ್ತು ವಸುಂಧರಾ ಅವರೊಂದಿಗೆ ಲೇಖಕಿ ಶುಭದ ಸುಬ್ರಹ್ಮಣಂ ಸಂವಾದ ನಡೆಸಿರುವ 'ಗೆಜ್ಜೆ ಉಲುಹಿನ ನಡುವೆ' ಪುಸ್ತಕವನ್ನು ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಬಿಡುಗಡೆಗೊಳಿಸಿದರು.

> ಒಬ್ಬ ಕಲಾವಿದನಿಗೆ ನಿರಂತರ ಸಾಧನೆ ಮಾಡುವ ಹಂಬಲವಿರಬೇಕು. ವೇದಿಕೆ ಮೇಲೆ ಪ್ರದರ್ಶನಕ್ಕೂ ಮೊದಲು ಪ್ರತಿನಿತ್ಯ ಅಭ್ಯಾಸ ಮಾಡಬೇಕು ಆಗ ಮಾತ್ರ ಕಲೆ ಸಿದ್ದಿಸುತ್ತದೆ.
> – ಅನುಪಮ ಬಿ.ಪಂಡಿತ್, ಆಡಳಿತಾಧಿಕಾರಿ ಜಿಎಸ್‌ಎಸ್‌ಎಸ್‌ಐಇಟಿಡಬ್ಲೂ

> ನಮ್ಮ ಕಲೆಯನ್ನು ಉಳಿಸಿ–ಬೆಳೆಸಲು ಎಲ್ಲರೂ ಕೈಜೋಡಿಸಬೇಕು. ಹಿಂದೆ ರಾಜ–ಮಹಾರಾಜರು ಕಲೆಗೆ ಆಶ್ರಯ ನೀಡುತ್ತಿದ್ದರು. ಪ್ರಜಾಪ್ರಭುತ್ವದಲ್ಲಿ ಕಲೆಯನ್ನು ಉಳಿಸಿಕೊಳ್ಳಲು ಕಲಾಪೋಷಕರು ಪ್ರಯತ್ನಿಸಬೇಕು. ಆ ಕೆಲಸವನಷ್ಟೇ ನಾನು ಮಾಡುತ್ತಿದ್ದೇನೆ.
> – ಡಾ.ಜಗನ್ನಾಥ್ ಶೆಣೈ, ಉದ್ಯಮಿ

ಮೈಸೂರು, ನ.15(ಎಸ್‌ಪಿಎನ್)– ಮೈಸೂರು ಸೇರಿದಂತೆ ಜಗತ್ತಿನ ಎಲ್ಲಾ ದೇಶಗಳಲ್ಲಿ ಶಿಷ್ಯವೃಂದವನ್ನು ಹೊಂದಿರುವ ಖ್ಯಾತ ನೃತ್ಯಪಟ್ಟು ಡಾ.ವಸುಂಧರ ದೊರೆಸ್ವಾಮಿ ಅವರ ಸಾಧನೆ ಅನನ್ಯ ಎಂದು ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂ ಕಾಮಾಕ್ಷಿ ಆಸ್ಪತ್ರೆ ರಸ್ತೆಯಲ್ಲಿನ ಕಲಾಂಧಿಕ ಅಕಾಡೆಮಿ ಆಫ್ ಆರ್ಟ್ಸ್ ಆವರಣದ ವಸುಂಧರ ಭವನದಲ್ಲಿ ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಆಯೋಜಿಸಿದ್ದ ವಸುಂಧರೋತ್ಸವ–2024ರ ಕಾರ್ಯಕ್ರಮದಲ್ಲಿ ಡಾ.ವಸುಂಧರ ದೊರೆಸ್ವಾಮಿಯವರ 75ನೇ ಜನ್ಮದಿನಾಚರಣೆ, 50 ವರ್ಷಗಳ ಸಂಗೀತ–ನೃತ್ಯಕಲೆಗಳ ಸೇವೆ ಸಂಭ್ರಮ ಹಾಗೂ 40ನೇ ವರ್ಷದ ರಾಷ್ಟ್ರಿಯ ಮಟ್ಟದ ಶಾಸ್ತ್ರೀಯ ಸಂಗೀತ–ನೃತ್ಯಗಳ ಹಬ್ಬ ಹಾಗೂ ನೃತ್ಯ ಪಯಣದ ವ್ಯಕ್ತಿಚಿತ್ರಣ ಬಿಂಬಿಸುವ `Orbit of Vasundhara-Realm of Dance`s Truth' ಮತ್ತು ಹಿರಿಯ ಕಲಾವಿದೆ ಡಾ. ವಸುಂಧರಾ ಅವರೊಂದಿಗೆ ಲೇಖಕಿ ಶುಭದ ಸುಬ್ರಹ್ಮಣಂ ಸಂವಾದ ನಡೆಸಿರುವ 'ಗೆಜ್ಜೆ ಉಲುಹಿನ ನಡುವೆ' ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಡಾ.ವಸುಂಧರ ದೊರೆಸ್ವಾಮಿ ತಮ್ಮ ನೃತ್ಯ ಕಲಾಸಾಧನೆ ಮೂಲಕ ಮೈಸೂರಿನ ಕೀರ್ತಿಯನ್ನು ವಿಶ್ವಮಟ್ಟಕ್ಕೆ ಎತ್ತರಿಸುವಲ್ಲಿ ಇವರ ಕೊಡುಗೆ ಸೇರಿದೆ. ತಮ್ಮ 75ನೇ ವಯಸ್ಸಿನಲ್ಲೂ ದಣಿವರಿಯದೇ ಭರತನಾಟ್ಯದಲ್ಲಿ ತೊಡಗಿಸಿಕೊಂಡು ಲಕ್ಷಾಂತರ ಶಿಷ್ಯ ವೃಂದವನ್ನು ಹೊಂದಿದ್ದಾರೆ. ಓರ್ವ ವ್ಯಕ್ತಿಯಿಂದ ಇಂತಹ ಸಾಧನೆ ಸಾಧ್ಯವಿಲ್ಲ. ದೈವಿ ಸ್ವರೂಪಿಯಿಂದ ಈ ಕಲೆಯನ್ನು ಒಲಿಸಿಕೊಂಡು ಮುಂದಿನ ಪೀಳಿಗೆಗೂ ಕಲಿಸಿಕೊಡುವಲ್ಲಿ ವಸುಂಧರ ಯಶಸ್ವಿಯಾಗಿದ್ದಾರೆ ಎಂದರು.

ಲೇಖಕಿ ಶುಭದ ಸುಬ್ರಹ್ಮಣಂ ಅವರು, ವಸುಂಧರ ಅವರ ಶಿಷ್ಯೆಯಾಗಿ, ನೃತ್ಯ ಕಲಿತು ಇದೀಗ ಜರ್ಮನಿಯಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಿ ಅದರ ಮೂಲಕ ನಮ್ಮ ಪರಂಪರೆಯನ್ನು ಪರಿಚಯಿಸುತ್ತಿದ್ದಾರೆ. ಇದಕ್ಕೆ ಕಾರಣ ವಸುಂಧರ ದೊರೆಸ್ವಾಮಿ. ತಾವು ಕಲಿತ ವಿದ್ಯೆಯಲ್ಲಿ ತಾವು ಬೆಳೆದು, ಕಲೆಯನ್ನು ಆ ಎತ್ತರ ಸ್ಥಾನಕ್ಕೆ ಬೆಳೆಸಿ, ಶಿಷ್ಯವೃಂದವನ್ನು ಕಲಿಕೆಯಲ್ಲಿ ತೊಡಗಿಸಿಕೊಂಡಿರುವುದು ಸಾಮಾನ್ಯ ಸಂಗತಿಯಲ್ಲ ಎಂದ ರು.

ಉದ್ಯಮಿ ಜಗನಾಥ್ ಶೆಣೈ ಮಾತನಾಡಿ, ನನಗೆ ಡಾ.ವಸುಂಧರ ದೊರೆಸ್ವಾಮಿ, ಕಳೆದ 50 ವರ್ಷಗಳಿಂದ ಪರಿಚಿತರು. ನಾನು ಯಾವುದೇ ಕಲೆಯನ್ನು ಕಲಿತಿಲ್ಲ. ಆದರೆ, ಕಲೆಗಳ ಬಗ್ಗೆ ಪ್ರೀತಿಯಿದೆ. ಇಂತಹ ಶಾಸ್ತ್ರೀಯ ಕಲೆಗಳನ್ನು ಉಳಿಸುವ ದೃಷ್ಟಿಯಿಂದ ಇಂತಹ ಸಾಧಕರ ಕಾರ್ಯಕ್ರಮಗಳಿಗೆ ಪೋಷಕನಾಗುತ್ತೇನೆ. ವಸುಂಧರ ಪ್ರದರ್ಶಕ ಕಲೆ ಕೇಂದ್ರದಲ್ಲಿ ನಾನೂ ಕೂಡ ಸದಸ್ಯನಾಗಿದ್ದೇನೆ ಎಂದರು.

ನಾಡು–ನುಡಿಗೆ ತೊಡಗಿಸಿಕೊಂಡಿರುವ ಕಲಾವಿದರನ್ನು ಮೊದಲು ಗೌರವಿಸಬೇಕು. ಇದರಿಂದ ನಮ್ಮ ಸಮಾಜ ಮತ್ತು ಆ ನಗರಕ್ಕೆ ಉತ್ತಮ ಸ್ಥಾನ ದೊರಕುತ್ತದೆ. ಯಾವ ನಗರದಲ್ಲಿ ಕಲೆಗಳಿಗೆ ಉತ್ತಮ ಗೌರವ ಇರುತ್ತದೆಯೋ ಅಂತಹ ನಗರಗಳು ಉತ್ತಮ ಸಂಸ್ಕಾರಗಳನ್ನು ಕೊಡುವ ಕೇಂದ್ರಗಳಾಗಿರುತ್ತವೆ. ಅದಕ್ಕಾಗಿಯೇ ಮೈಸೂರಿನ ಹೆಸರು ಇತರೆ ನಗರಗಳಿಗಿಂತ ವಿಭಿನ್ನ ಎಂದು ತಿಳಿಸಿದರು.

ಲೇಖಕಿ ಶುಭದ ಸುಬ್ರಹ್ಮಣ್ಯಂ ಮಾತನಾಡಿ, ನಾನು ಹೊರದೇಶದಲ್ಲಿದ್ದರೂ ವಸುಂಧರೋತ್ಸವ ಕಾರ್ಯಕ್ರಮವನ್ನು ಸದಾ ನೆನಪಿಸಿಕೊಳ್ಳುತ್ತೇನೆ. ಏಕೆಂದರೆ, ನಾನು ಚಿಕ್ಕವಳಿದ್ದಾಗ ಈ ಸಂಸ್ಥೆಯಲ್ಲಿ ನೃತ್ಯ ಕಲಿತು. ವಸುಂಧರೋತ್ಸವ ಕಾರ್ಯಕ್ರಮದಲ್ಲಿ ಗಣ್ಯರು ಬಂದಾಗ ಅವರನ್ನು ಅತ್ಯಂತ ಗೌರವಯುತವಾಗಿ ಸ್ವಾಗತಿಸುವುದು. ಅವರು ಹೇಳುವ ಪ್ರೋತ್ಸಾಹದ ಮಾತುಗಳನ್ನು ಕೇಳುವುದು ಅತ್ಯಂತ ಆಕರ್ಷಕದಾಯಕವಾಗಿರುತ್ತಿದ್ದವು. ಅದಕ್ಕಾಗಿ ಈ ಕಾರ್ಯಕ್ರಮ ನನ್ನ ಜೀವನದ ತಿರುವು ಎಂದರೆ ತಪ್ಪಾಗಲಾರದು ಎಂದರು.

ಈ ವೇಳೆ ವೇದಿಕೆಯಲ್ಲಿ ಹಿರಿಯ ಸಾಹಿತಿಗಳಾದ ಕೆ.ಸಿ.ಶಿವಪ್ಪ, ಜಿಎಸ್‌ಎಸ್ ಎಸ್‌ಐಇಟಿಡಬ್ಲೂ ಆಡಳಿತಾಧಿಕಾರಿ ಅನುಪಮ ಬಿ.ಪಂಡಿತ್, ಡಾ.ಸಿ.ಪಿ.ಕೃಷ್ಣಕುಮಾರ್, ಪ್ರೊ.ಸಿ.ನಾಗಣ್ಣ, ಉದ್ಯಮಿ ಡಾ.ಎಂ.ಜಗನ್ನಾಥ್ ಶೆಣೈ, ಭರತನಾಟ್ಯ ಮತ್ತು ಕಥಕ್ ನೃತ್ಯ ಕಲಾವಿದೆ ಶುಭ ಧನಂಜಯ ಸೇರಿದಂತೆ ಅನೇಕರಿದ್ದರು.

ನಾಳೆ ಪ್ರತಿಭಾ ಪುರಸ್ಕಾರ

ಮೈಸೂರು, ನ.15–ಮೈಸೂರಿನ ದಿನೇಶ್ ಕೋಚಿಂಗ್ ಸೆಂಟರ್‌ನ ಪ್ರತಿಭಾ ಪುರಸ್ಕಾರ ಸಮಾರಂಭ ಹಾಗೂ ಸ್ವಾಮಿ ವೀರೇಶಾನಂದ ಸರಸ್ವತಿಯವರ 'ವಿವೇಕ ಧಾರಾ' ಕೃತಿ ಬಿಡುಗಡೆ ಕಾರ್ಯಕ್ರಮವನ್ನು ನ.17ರಂದು ಸಂಜೆ 4.15ಕ್ಕೆ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ತುಮಕೂರಿನ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವಿವೇಕಾನಂದ ಸರಸ್ವತಿ, ಮೈಸೂರು ವಿವಿ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ಕೆ.ಅನಂತರಾಮು ಭಾಗವಹಿಸಲಿದ್ದಾರೆ.

ನ.21ರಿಂದ ರಾಷ್ಟ್ರ ರಾಜಧಾನಿಯಲ್ಲೂ ಸಿಗಲಿದೆ ಕೆಎಂಎಫ್ ಉತ್ಪನ್ನ



ಬೆಂಗಳೂರು, ನ.15– ರಾಜ್ಯದ ಹೆಮ್ಮೆಯ ಉತ್ಪನ್ನ ನಂದಿನಿ ಇದೀಗ ರಾಷ್ಟ್ರ ರಾಜಧಾನಿ ದೆಹಲಿಗೆ ಮತ್ತೊಮ್ಮೆ ಎಂಟ್ರಿ ಕೊಡಲು ತಯಾರಿ ನಡೆಸಿದೆ. ನವೆಂಬರ್ 21ರಿಂದ ದೆಹಲಿಯಲ್ಲಿ ನಂದಿನ ಹಾಲಿನ ಉತ್ಪನ್ನಗಳು ಲಭ್ಯವಾಗಲಿವೆ.

ದೆಹಲಿಯಲ್ಲಿ ಕೆಎಂಎಫ್ ಔಟ್‌ಲೆಟ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ಕೊಡಲಿದ್ದಾರೆ. ಆರಂಭಿಕ ಹಂತದಲ್ಲಿ ನಿತ್ಯ 1 ಲಕ್ಷ ಲೀಟರ್ ಹಾಲನ್ನು ದೆಹಲಿಗೆ ಪೂರೈಸಲು ಕೆಎಂಎಫ್ ಮುಂದಾಗಿದೆ. ಹಸುವಿನ ಹಾಲು ಪೂರೈಸುವಂತೆ ಕೆಎಂಎಫ್‌ಗೆ ದೆಹಲಿ ಸರ್ಕಾರ ಮನವಿ ಮಾಡಿತ್ತು. ಈ ಸಂಬಂಧ ಕಳೆದ ನಾಲ್ಕೈದು ತಿಂಗಳಿಂದ ದೆಹಲಿ ಸರ್ಕಾರದ ಜೊತೆ ಕೆಎಂಎಫ್ ಮಾತುಕತೆ ನಡೆಸುತ್ತಿತ್ತು. 29 ವರ್ಷದ ಹಿಂದೆಯೇ ದೆಹಲಿಗೆ ಕೆಎಂಎಫ್ ಹಾಲನ್ನು ಪೂರೈಸುತ್ತಿತ್ತು. ಇದು ಕಾರಣಾಂತರಗಳಿಂದ ನಂತರದ ದಿನಗಳಲ್ಲಿ ಸ್ಥಗಿತಗೊಂಡಿತ್ತು. ಇದೀಗ ದೆಹಲಿಯಲ್ಲಿ ಚಾಲ್ತಿಯಲ್ಲಿರುವ ಅಮೂಲ್, ಮದರ್ ಡೈರಿಗೆ ಕೆಎಂಎಫ್ ಪೈಪೋಟಿ ನೀಡಲಿದೆ. ಈಗಾಗಲೇ ತಮಿಳುನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ಕೇರಳಕ್ಕೆ ಕೆಎಂಎಫ್ ಉತ್ಪನ್ನಗಳನ್ನು ಪೂರೈಸುತ್ತಿದೆ.

ಡಿಎವಿ ಶಾಲೆಯ ವಿದ್ಯಾರ್ಥಿಗಳ ಸಾಧನೆ



ಮೈಸೂರಿನ ಪ್ರೆಸೆಂಟೇಶನ್ ಪಬ್ಲಿಕ್ ಶಾಲೆಯ (ನವಜ್ಯೋತಿ ಟ್ರಸ್ಟ್) ವತಿಯಿಂದ ಆಯೋಜಿಸಿದ್ದ ಮದರ್ ಲುಸಿನಾ ಮೆಮೋರಿಯಲ್‌ಕಪ್ 2024 ಖೋ–ಖೋ ಪಂದ್ಯಾವಳಿಯಲ್ಲಿ ಡಿ.ಎ.ವಿ ಪಬ್ಲಿಕ್ ಶಾಲೆಯ ಬಾಲಕರು ದ್ವಿತೀಯ ಬಹುಮಾನ ಪಡೆದರು. ಈ ಸಂದರ್ಭ ಶಾಲೆಯ ಆಡಳಿತ ಮಂಡಳಿಯ ಕಾರ್ಯದರ್ಶಿ ಆರ್.ಆನಂದ್, ಸಿ.ಇ.ಓ ಶ್ರೀಮತಿ ಜಯಶ್ರೀ.ಎಸ್.ಮೂರ್ತಿ, ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಕೆ.ಆರ್.ಶೋಭಾ, ಉಪಪ್ರಾಂಶುಪಾಲರಾದ ಶ್ರೀಮತಿ ಕಾವ್ಯಶ್ರೀ.ಬಿ, ದೈಹಿಕ ಶಿಕ್ಷಕ ಮಂಜುನಾಥ.ಎಚ್.ಸಿ ಇತರರು ಸಾಧನೆಗೈದಿರುವ ಮಕ್ಕಳನ್ನು ಅಭಿನಂದಿಸಿದರು.

ಅಕ್ರಮ ಕುದುರೆ ಬೆಟ್ಟಿಂಗ್: ಇಬ್ಬರ ಬಂಧನ

ಮೈಸೂರು, ನ.15(ಎಸ್‌ಬಿಡಿ)– ಕುದುರೆ ರೇಸ್‌ಗೆ ಸಾರ್ವಜನಿಕರಿಂದ ಹಣ ಪಣಕ್ಕಿಟ್ಟುಕೊಂಡು ಸ್ನೇಹಿತನ ಮೂಲಕ ಫಲಿತಾಂಶ ತಿಳಿದುಕೊಂಡು ಅಕ್ರಮವಾಗಿ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಡಿ ಇಬ್ಬರನ್ನು ಮೈಸೂರಿನ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.


ಮೈಸೂರಿನ ಹೆಬ್ಬಾಳ್ ಎರಡನೇ ಹಂತ 4ನೇ ಕ್ರಾಸ್‌ನ ಮನೆಯೊಂದರ ಮೇಲೆ ನ.13ರಂದು ದಾಳಿ ನಡೆಸಿದ ಪೊಲೀಸರು ಜೂಜಾಟ ನಡೆಸುತ್ತಿದ್ದವನ ಬಂಧಿಸಿ, ಎರಡು ಮೊಬೈಲ್, 1 ಟ್ಯಾಬ್ ಇನ್ನಿತರ ಪರಿಕರಗಳನ್ನು ವಶಪಡಿಸಿಕೊಂಡಿದ್ದಾರೆ. ಬಳಿಕ ರೇಸ್‌ನ ಫಲಿತಾಂಶ ತಿಳಿಸುವ ಮೂಲಕ ಜೂಜಾಟಕ್ಕೆ ಸಹಕರಿಸುತ್ತಿದ್ದ ಮತ್ತೋರ್ವನನ್ನು ಬಂಧಿಸಲಾಗಿದೆ.

ಅಕ್ರಮವಾಗಿ ಲಾಭ ಗಳಿಸುವ ಉದ್ದೇಶದಿಂದ ಮೈಸೂರಿನ ರೇಸ್ ಕೋರ್ಸ್‌ನಲ್ಲಿ ನಡೆಯುವ ಕುದುರೆ ರೇಸ್ ಫಲಿತಾಂಶವನ್ನು ಮುಂಚಿತವಾಗಿ ತಿಳಿದುಕೊಂಡು ಮೊಬೈಲ್ ಮೂಲಕ ಸಾರ್ವಜನಿಕರಿಂದ ಹಣವನ್ನು ಪಣವನ್ನಾಗಿ ಇಟ್ಟುಕೊಂಡು, ಜೂಜಾಟ ನಡೆಸುವ ಬಗ್ಗೆ ಬಾತ್ಮೀದಾರರಿಂದ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್‌ಕುಮಾರ್ ನೇತೃತ್ವದಲ್ಲಿ ಸಿಸಿಬಿ ಸಬ್‌ಇನ್ಸ್‌ಪೆಕ್ಟರ್ ಮಾರುತಿ ಅಂತರಗಟ್ಟಿ, ಸಿಬ್ಬಂದಿ ರಾಘವೇಂದ್ರ, ಮಂಜುನಾಥ್ ದಾಳಿ ನಡೆಸಿದ್ದರು. ಈ ಸಂಬಂಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗುವನಹಳ್ಳಿಯಲ್ಲಿ ಚಿನ್ನಾಭರಣ ಕದ್ದಿದ್ದ ಖದೀಮ ಮೈಸೂರಲ್ಲಿ ಬಂಧನ



ಖದೀಮನ ಬಂಧಿಸಿದ ಮೈಸೂರಿನ ಕುವೆಂಪುನಗರ ಠಾಣೆ ಪೊಲೀಸ್ ತಂಡ.



ಮೈಸೂರು, ನ.15(ಎಸ್‌ಬಿಡಿ)– ಶ್ರೀರಂಗಪಟ್ಟಣ ತಾಲೂಕಿನ ನಗುವನಹಳ್ಳಿಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಖದೀಮ, ಮೈಸೂರು ಪೊಲೀಸರಿಗೆ ಗುರುವಾರ ಸಿಕ್ಕಿಬಿದ್ದಿದ್ದಾನೆ.

ಮೈಸೂರಿನ ಕುವೆಂಪುನಗರ ಠಾಣೆ ಪೊಲೀಸರು ಶ್ರೀರಾಂಪುರ ಚೆಕ್‌ಪೋಸ್ಟ್ ಬಳಿ ವಾಹನ ತಪಾಸಣೆ ನಡೆಸುವ ವೇಳೆ ಖದೀಮ ಸೆರೆಯಾಗಿದ್ದು, ಆತನಿಂದ 516 ಗ್ರಾಂ ಚಿನ್ನಾಭರಣ, 26 ಗ್ರಾಂ ಬೆಳ್ಳಿ ವಸ್ತುಗಳು ಹಾಗೂ ದ್ವಿಚಕ್ರ ವಾಹನ ಸೇರಿದಂತೆ ಒಟ್ಟು 36.22 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚೆಕ್‌ಪೋಸ್ಟ್ ಬಳಿ ಅನುಮಾನಾಸ್ಪದ ವಾಹನಗಳನ್ನು ತಪಾಸಣೆ ನಡೆಸುತ್ತಿದ್ದಾಗ ಸ್ಕೂಟರ್ ಸವಾರ ತಿರುಗಿಸಿಕೊಂಡು ವಾಪಸ್ ಹೋಗುತ್ತಿದ್ದ. ಅನುಮಾನಗೊಂಡ ಪೊಲೀಸರು ಆತನನ್ನು ಅಡ್ಡಗಟ್ಟಿ ಸ್ಕೂಟರ್ ಡಿಕ್ಕಿ ತೆಗೆಸಿ ನೋಡಿದಾಗ, ಚಿನ್ನಾಭರಣಗಳು ಮತ್ತು ಬೆಳ್ಳಿ ಪದಾರ್ಥಗಳು ಪತ್ತೆಯಾಗಿವೆ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಮತ್ತೋರ್ವ ಸಹಚರ ನೊಂದಿಗೆ ಸೇರಿಕೊಂಡು ನ.10 ರಂದು ಶ್ರೀರಂಗಪಟ್ಟಣ ತಾಲೂಕು, ನಗುವನಹಳ್ಳಿಯಲ್ಲಿ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದಾನೆ. ಈ ಸಂಬಂಧ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತಲೆಮರೆಸಿಕೊಂಡಿರುವ ಮತ್ತೋರ್ವ ಆರೋಪಿ ಬಂಧನಕ್ಕೆ ಶೋಧ ನಡೆಸಲಾಗಿದೆ. ಕೃಷ್ಣರಾಜ ವಿಭಾಗದ ಎಸಿಪಿ ಹೆಚ್.ಬಿ. ರಮೇಶ್‌ಕುಮಾರ್ ನೇತೃತ್ವದಲ್ಲಿ ಕುವೆಂಪುನಗರ ಠಾಣೆಯ ಇನ್ಸ್‌ಪೆಕ್ಟರ್ ಎಲ್. ಅರುಣ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಗೋಪಾಲ್, ಮದನ್ ಕುಮಾರ್, ಸಿಬ್ಬಂದಿ ವಿ.ಆನಂದ್, ಮಹೇಶ್ವರ್, ಕೆ.ಟಿ.ಮಂಜುನಾಥ್, ಎಂ.ಪಿ.ಮಂಜುನಾಥ್, ಯಶವಂತ್, ಹೆಚ್.ವಿ.ಮಂಜು,ಹಜರತ್, ಸುರೇಶ್, ರವಿ ಮತ್ತು ನಾಗೇಶ್ ಕಾರ್ಯಾಚರಣೆ ನಡೆಸಿದ್ದರು.

ನಿಧನ

ವಿಠಲಾಪುರ ದೇವೇಗೌಡ



ಕೆ.ಆರ್.ಪೇಟೆ: ವಿಠಲಾಪುರ ಗ್ರಾಮದ ಹಿರಿಯ ಮುಖಂಡರಾದ ದೇವೇಗೌಡ (80) ಅವರು ಶುಕ್ರವಾರ ಸಂಜೆ ನಿಧನರಾದರು. ಮೃತರು ಭಾರತೀಯ ಸೇನೆಯ ಪಂಜಾಬ್ ವಿಭಾಗದ ಯೋಧ ಎ.ಡಿ.ಸುರೇಶ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಶನಿವಾರ ಸಂಜೆ 4 ಗಂಟೆಗೆ ವಿಠಲಾಪುರ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರತಾಪ್ ಸಿಂಹ ಕುರಿತ 'ಕತ್ತಲೆ ಜಗತ್ತು' ಪುಸ್ತಕ ಬಿಡುಗಡೆಗೆ ತಡೆ

ಬೆಂಗಳೂರು, ನ.15– ನಾಳೆ (ನ.16) ಬಿಡುಗಡೆಯಾಗಬೇಕಿದ್ದ ಮೈಸೂರು–ಕೊಡಗು ಕ್ಷೇತ್ರದ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಕುರಿತು ಪ್ರವೀಣ್ ಕುಮಾರ್ ಮಾವಿನಕಾಡು ಅವರು ಬರೆದಿರುವ 'ಕತ್ತಲೆ ಜಗತ್ತು' ಪುಸ್ತಕ ಬಿಡುಗಡೆಗೆ ಬೆಂಗಳೂರು ಗ್ರಾಮಾಂತರ ಸಿವಿಲ್ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದೆ.

ಪ್ರವೀಣ್ ಕುಮಾರ್ ಮಾವಿನಕಾಡು ಅವರು ಬರೆದಿರುವ ಪುಸ್ತಕದಲ್ಲಿ ತಮ್ಮ ಬಗ್ಗೆ ಅಸಭ್ಯ ಮತ್ತು ಮಾನಹಾನಿಕರ ವಿಷಯಗಳಿದ್ದು, ಈ ಪುಸ್ತಕ ಬಿಡುಗಡೆ, ಮಾರಾಟ ಹಾಗೂ ಪ್ರಸಾರ ಮಾಡದಂತೆ ತಡೆಯಾಜ್ಞೆ ನೀಡಬೇಕೆಂದು ಪ್ರತಾಪ್ ಸಿಂಹ ಅವರು ನ್ಯಾಯಾಲಯದ ಮೊರೆ ಹೋಗಿದ್ದರು. ಈ ಹಿನ್ನಲೆಯಲ್ಲಿ ನ್ಯಾಯಾಲಯ ಈ ಪುಸ್ತಕ ಬಿಡುಗಡೆಗೆ ತಡೆಯಾಜ್ಞೆ ನೀಡಿದೆ.

ಕಾರ್ಯಕ್ರಮ ರದ್ದು: ಪುಸ್ತಕ ಬಿಡುಗಡೆಗೆ ಪ್ರತಾಪ್ ಸಿಂಹ ತಡೆಯಾಜ್ಞೆ ತಂದಿರುವ ಕಾರಣದಿಂದ ನಾಳೆ ಮೈಸೂರಿನ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ನಡೆಯಬೇಕಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮ ರದ್ದುಪಡಿಸಲಾಗಿದೆ ಎಂದು ಆಯೋಜಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ನಾಳೆ ರಾಜ್ಯಮಟ್ಟದ ವಿಜ್ಞಾನ ವಸ್ತುಪ್ರದರ್ಶನ

ಮೈಸೂರು,ನ.15(ಎಂಟಿವೈ)– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಗೋಪಾಲಸ್ವಾಮಿ ಶಿಶು ವಿಹಾರ ಸಂಸ್ಥೆಯ ಪ್ರೌಢಶಾಲೆ ಆವರಣದಲ್ಲಿ ನ. 16 ಮತ್ತು 17 ರಂದು ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಸ್ಪರ್ಧೆ 'ಬೆರಗು–2024' ಆಯೋಜಿಸಲಾಗಿದೆ ಎಂದು ಶಾಲೆ ಮುಖ್ಯೋಪಾಧ್ಯಾಯ ಎಸ್.ರಾಮಪ್ರಸಾದ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ವಿಜ್ಞಾನ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ಹೆಚ್ಚಿನ ಮಾಹಿತಿ ಒದಗಿಸುವುದಕ್ಕಾಗಿ ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಹಾಗೂ ವಿಜ್ಞಾನ ಸ್ಪರ್ಧೆ ಏರ್ಪಡಿಸಲಾಗಿದೆ. ವಸ್ತು ಪ್ರದರ್ಶನವನ್ನು ನ. 16 ರ ಬೆಳಗ್ಗೆ 10ಕ್ಕೆ ನಿವೃತ್ತ ಡಿಜಿ ಪ್ರೊ ಸುಬ್ಬಣ್ಣ ಅಯ್ಯಪ್ಪನ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಐಟಿ ಸಂಸ್ಥೆ ಉಪಾಧ್ಯಕ್ಷ ಡಾ.ಜಿ.ಹೇಮಂತ್ ಕುಮಾರ್, ಡಯಟ್ ಪ್ರಾಂಶುಪಾಲ ಸಿ.ಆರ್.ನಾಗರಾಜಯ್ಯ, ಡಿಡಿಪಿಐ ಟಿ.ಜವರೇಗೌಡ, ಬಿಇಓಗಳಾದ ಸಿ.ಎನ್.ರಾಜು, ಎಸ್.ರೇವಣ್ಣ, ಪ್ರಕಾಶ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಎರಡು ದಿನಗಳ ಕಾಲ ನಡೆಯುವ ಈ ಪ್ರದರ್ಶನದ ವೇಳೆ ಕೆಲ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣ ನಡೆಯಲಿದೆ. ನ. 17ರಂದು ಬೆಳಗ್ಗೆ 10ರಿಂದ 11.30ರವರೆಗೆ ಡ್ರೋನ್ ಶೋ ನಡೆಯಲಿದೆ. ಅಂದು ಮಧ್ಯಾಹ್ನ 3 ಗಂಟೆಗೆ ವಸ್ತು ಪ್ರದರ್ಶನದ ಸಮಾರೋಪ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಮತ್ತು ವಿಜ್ಞಾನ ವಿಚಾರ ಕುರಿತು ಉತ್ತೇಜನಕ್ಕೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ರಾಜ್ಯ ವಿವಿಧ ಶಾಲೆಗಳಿಂದ ನೂರಾರು ಶಾಲೆಗಳ ವಿದ್ಯಾರ್ಥಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಪ್ರದರ್ಶನದಲ್ಲಿ 300ಕ್ಕೂ ಹೆಚ್ಚು ಮಾದರಿ ಪ್ರದರ್ಶಿಸಲಾಗುತ್ತದೆ. ಪಠ್ಯಕ್ಕೆ ಸಂಬಂಧಿಸಿದ ವಿಜ್ಞಾನ ಮಾದರಿ ತರಲು ಎಲ್ಲರಿಗೂ ತಿಳಿಸಲಾಗಿದೆ ಇದರೊಡನೆ ಹಲವಾರು ಸಂಪನ್ಮೂಲ ವ್ಯಕ್ತಿಗಳು ವೈಜ್ಞಾನಿಕ ಮಾಹಿತಿ ನೀಡಲಿದ್ದಾರೆ. ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ತಮ್ಮ ಸಂಸ್ಥೆ ವತಿಯಿಂದ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಾಲೆಯ ಶಿಕ್ಷಕರಾದ ದಿನೇಶ್, ಗುರುಭಕ್ತ ಹಾಗೂ ರಘೋತ್ತಮ್ ಇದ್ದರು.

ಅಭಿನಂದನೆ



ಕನ್ನಡ ರಾಜ್ಯೋತ್ಸವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾಡಳಿತ ವತಿಯಿಂದ ಜಿಲ್ಲಾ ಮಟ್ಟದ ಪುರಸ್ಕಾರಕ್ಕೆ ಭಾಜನರಾದ ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ.ಶೋಭಾ ಅವರನ್ನು ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಕೀಯ ಶಿಕ್ಷಣ ಇಲಾಖೆ ಶುಶ್ರೂಷಾಧಿಕಾರಿಗಳ ಸಂಘ ಜಿಲ್ಲಾ ಶಾಖೆ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಕಚೇರಿ ಅಧೀಕ್ಷಕ ಶಶಿ, ಸಂಘದ ಅಧ್ಯಕ್ಷ ಗಿರೀಶ್, ಪ್ರಧಾನ ಕಾರ್ಯದರ್ಶಿ ಜೆ.ಮಂಜು, ಖಜಾಂಚಿ ಬಾಬು ಹಾಗೂ ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ನ.20ರ ಮದ್ಯದಂಗಡಿ ಬಂದ್‌ಗೆ ಲಿಕ್ಕರ್ ಮರ್ಚೆಂಟ್ಸ್ ಸೊಸೈಟಿ ಬೆಂಬಲ ಇಲ್ಲ

● ಪತ್ರಿಕಾಗೋಷ್ಠಿಯಲ್ಲಿ ಸೊಸೈಟಿ ಅಧ್ಯಕ್ಷ ಎಸ್.ಚಂದ್ರಶೇಖರ್ ಸ್ಪಷ್ಟನೆ ● ಬಂದ್‌ಗೆ ಕರೆ ನೀಡಿರುವ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಅಸ್ತಿತ್ವದಲ್ಲೇ ಇಲ್ಲ!

ಮೈಸೂರು, ನ.15(ಎಸ್‌ಬಿಡಿ)– ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಕರೆ ನೀಡಿರುವ ಮದ್ಯದಂಗಡಿ ಬಂದ್‌ಗೆ ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ–ಆಪರೇಟಿವ್ ಸೊಸೈಟಿಯ ಬೆಂಬಲವಿಲ್ಲ ಎಂದು ಸೊಸೈಟಿಯ ಅಧ್ಯಕ್ಷ ಎಸ್.ಚಂದ್ರಶೇಖರ್ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಹೆಚ್ಚಿದೆ ಎಂದು ಆರೋಪಿಸಿ ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ನ.20ರಂದು ಮದ್ಯ ಮಾರಾಟ ಬಂದ್‌ಗೆ ಕರೆ ನೀಡಿದ್ದು, ಇದನ್ನು ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಸೊಸೈಟಿ ಸಂಪೂರ್ಣ ವಿರೋಧಿಸುತ್ತದೆ. ಅಂದು ಎಂದಿನಂತೆ ಅಂಗಡಿ ತೆರೆದು ವ್ಯಾಪಾರ ವಹಿವಾಟು ನಡೆಸಲಾಗುವುದು. ಇದು ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆ ಸನ್ನದುದಾರರ ಸಭೆಯ ನಿರ್ಧಾರ ಎಂದು ತಿಳಿಸಿದರು.

ಮದ್ಯದಂಗಡಿ ಬಂದ್‌ಗೆ ಬೆಂಬಲ ಇಲ್ಲವೆಂದು ಈಗಾಗಲೇ ಬೆಂಗಳೂರಿನಲ್ಲೂ ಘೋಷಿಸಿ, ನ.11ರಂದು ಸನ್ನದುದಾರರಿಗೆ ಸಂಬಂಧಿಸಿದ ಐದು ಅಂಶಗಳ ಬೇಡಿಕೆಯನ್ನೊಳಗೊಂಡ ಮನವಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದೇವೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅಲ್ಲದೆ ನ.20ರ ಮದ್ಯದಂಗಡಿ ಬಂದ್‌ಗೆ ನಮ್ಮ ಸಂಸ್ಥೆ ಬೆಂಬಲ ನೀಡುತ್ತಿಲ್ಲ, ಅಂದು ಎಂದಿನಂತೆ ವ್ಯಾಪಾರ ವಹಿವಾಟು ನಡೆಸುತ್ತೇವೆ. ಬಂದ್‌ಗೆ ಕರೆ ನೀಡಿರುವ ನಕಲಿ ಸಂಘದ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ನಿನ್ನೆ ಅಬಕಾರಿ ಆಯುಕ್ತರು ಹಾಗೂ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದೇವೆ ಎಂದರು.



ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಸ್.ಚಂದ್ರಶೇಖರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ದೊಡ್ಡನಾಯಕ, ದೇವರಾಜು ಸೇರಿದಂತೆ ಹಲವು ಸನ್ನದುದಾರರು ಹಾಜರಿದ್ದರು.

ಆ ಸಂಘ ಅಸ್ತಿತ್ವದಲ್ಲೇ ಇಲ್ಲ: ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಅಸಲಿಗೆ ಅಸ್ತಿತ್ವದಲ್ಲೇ ಇಲ್ಲ. 2002–03ನೇ ಸಾಲಿನಲ್ಲಿ ನೋಂದಣಿಯಾಗಿದ್ದು, ನಂತರದಲ್ಲಿ ಈವರೆಗೂ ಸಂಘದ ನವೀಕರಣವಾಗಲೀ, ಯಾವುದೇ ಲೆಕ್ಕಪರಿಶೋಧನಾ ವರದಿಯಾಗಲೀ ಸಲ್ಲಿಕೆಯಾಗಿಲ್ಲ. ಈ ಸಂಘ ಅಸ್ತಿತ್ವದಲ್ಲಿ ಇಲ್ಲ ಎಂದು ಬೆಂಗಳೂರಿನ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿ ದೃಢೀಕರಣ ಪತ್ರ ನೀಡಿದೆ. ಈ ಆಧಾರದಲ್ಲಿ ನಮ್ಮ ಸಂಸ್ಥೆ ವತಿಯಿಂದ ಬೆಂಗಳೂರು ಆಯುಕ್ತರಿಗೆ ದೂರು ಸಲ್ಲಿಸಲಾಗಿದೆ ಎಂದು ಹೇಳಿದರು.

ಹಫ್ತಾ ವಸೂಲಿ: ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಇರುವುದು ಅಧ್ಯಕ್ಷ ಎಸ್.ಗುರುಸ್ವಾಮಿ ಹಾಗೂ ಕಾರ್ಯದರ್ಶಿ ಬಿ.ಗೋವಿಂದರಾಜ್ ಹೆಗ್ಡೆ ಅವರಿಗೆ ಮಾತ್ರ. ಸನ್ನದುದಾರರಿಂದ ಹಫ್ತಾ ವಸೂಲಾತಿ, ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಬೆದರಿಕೆ ಒಡ್ಡುವುದು ಹಾಗೂ ಸರ್ಕಾರವನ್ನು ಮುಜುಗರಕ್ಕೀಡು ಮಾಡಲೆಂದು ಸಂಘ ಮಾಡಿಕೊಂಡಿದ್ದಾರೆ. ಆ ಸಂಘದಿಂದ ಸನ್ನದುದಾರರಿಗೆ ಯಾವುದೇ ಅನುಕೂಲವಾಗಿಲ್ಲ. ಸನ್ನದುದಾರರಿಂದ 500–600 ಕೋಟಿ ರೂ. ಸಂಗ್ರಹಿಸಿ ಅಬಕಾರಿ ಅಧಿಕಾರಿಗಳು ಹಾಗೂ ಸಚಿವರಿಗೆ ಲಂಚ ನೀಡಲಾಗಿದೆ ಎಂಬ ಆರೋಪ ಸತ್ಯಕ್ಕೆ ದೂರ. ಈ ನಕಲಿ ಸಂಘದ ಹೇಳಿಕೆ ಮಹಾರಾಷ್ಟ್ರ ಚುನಾವಣಾ ಪ್ರಚಾರದಲ್ಲಿ ಪ್ರತಿಧ್ವನಿಸಿ, ಸನ್ನದುದಾರರು ಹಾಗೂ ರಾಜ್ಯ ಸರ್ಕಾರದ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ ಎಂದರು.

ವೈಯಕ್ತಿಕ ಹಿತಾಸಕ್ತಿ: ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷರೆಂದು ತಿಳಿಸಿರುವ ಗುರುಸ್ವಾಮಿ ನಾಲ್ಕು ತಿಂಗಳ ಹಿಂದೆ ಅಧಿಕಾರಿಗಳನ್ನು ಹೆದರಿಸಿ, ಕೆ.ಆರ್.ನಗರದಿಂದ ಮೈಸೂರಿಗೆ ಸಿಎಲ್–7 ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಬಳಿಕ ಅದು ನಿಯಮಬಾಹಿರ ಎಂದು ವರ್ಗಾವಣೆ ರದ್ದಿಗೆ ಆದೇಶವಾಗಿದೆ. ಹೀಗೆ ವೈಯಕ್ತಿಕ ಕೆಲಸಗಳಿಗೆ ಅಡ್ಡಿಯಾದಾಗ ಈ ರೀತಿ ಪ್ರತಿಭಟನೆಗೆ ಮುಂದಾಗುತ್ತಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ಸನ್ನದುದಾರರೂ ಆದ ಮಾಜಿ ಕಾರ್ಪೊರೇಟರ್ ದೇವರಾಜು, ಸೊಸೈಟಿಯ ಉಪಾಧ್ಯಕ್ಷ ಎಂ.ಸಿ.ದೊಡ್ಡನಾಯಕ, ಹನುಮಂತೇಗೌಡ, ಕೃಷ್ಣಪ್ಪ, ಸಿ.ಜಿ.ಗಂಗಾಧರ್, ಶ್ರೀನಿವಾಸ್, ಗುರುರಾಜ್, ಚನ್ನಕೇಶವ ಸೇರಿದಂತೆ ಮೈಸೂರು ಹಾಗೂ ಚಾಮರಾನಗರದ ಅನೇಕ ಸನ್ನದುದಾರರು ಹಾಜರಿದ್ದರು.

ಸಿಎಂ ಸಿದ್ದರಾಮಯ್ಯರಿಗೆ ಶಿಕ್ಷೆ ಕೊಡಿಸಲು ಲಕ್ಷ್ಮಣ್ ಪರೋಕ್ಷವಾಗಿ ನನಗೆ ಸಹಕರಿಸುತ್ತಿದ್ದಾರೆ

ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸ್ವಾರಸ್ಯಕರ ಹೇಳಿಕೆ

ಮೈಸೂರು, ನ.15(ಬಿಎಲ್‌ಯು)– ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಶಿಕ್ಷೆ ಕೊಡಿಸಲು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನನಗೆ ಪ್ರಮುಖ ಸಾಕ್ಷ್ಯಾಧಾರ ಕಲ್ಪಿಸುತ್ತಿದ್ದಾರೆ ಎಂದು ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸ್ವಾರಸ್ಯಕರವಾಗಿ ಹೇಳಿದ್ದಾರೆ.



ಮೈಸೂರಿನ ಕೆಸರೆ ಸರ್ವೇ ನಂಬರ್ 464 ರ 3.16 ಎಕರೆ ಭೂಮಿ ದಾನಪತ್ರದ ಮೂಲಕ ತಮ್ಮ ಪತ್ನಿ ಪಾರ್ವತಿ ಅವರಿಗೆ ವರ್ಗಾವಣೆಯಾಗಿದ್ದರೂ 2013 ರ ಚುನಾವಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣಾ ಆಯೋಗಕ್ಕೆ ಈ ವಿಚಾರ ತಿಳಿಸದೆ ಮುಚ್ಚಿಟ್ಟಿದ್ದಾರೆ ಎಂದು ದೂರಿದ್ದಾರೆ.

ಜಮೀನನ್ನು ಮುಡಾ ಸ್ವಾಧೀನಪಡಿಸಿಕೊಂಡಿದ್ದ ಕಾರಣ, ಜಮೀನು ನಮ್ಮದಾಗಿರಲಿಲ್ಲವೆಂದು 2013 ರಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಇದನ್ನು ಉಲ್ಲೇಖಿಸಿಲ್ಲ ಎಂದು ಸಿದ್ದರಾಮಯ್ಯ ಪರ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸ್ಪಷ್ಟಪಡಿಸಿದ್ದಾರೆ.


2013 ರ ಚುನಾವಣೆ ಸಂದರ್ಭದಲ್ಲಿ ತಮ್ಮ ಪತ್ನಿ ಹೆಸರಿನಲ್ಲಿರುವ ಜಮೀನು ಸಂಪೂರ್ಣ ಮುಡಾ ಮಾಲೀಕತ್ವ ಮತ್ತು ಸ್ವಾಧೀನಕ್ಕೆ ಹೋಗಿದೆ ಎಂಬುದು ಗೊತ್ತಿದ್ದರೂ, 2014 ರಲ್ಲಿ ಬದಲಿ ಭೂಮಿ ನೀಡುವಂತೆ ಪಾರ್ವತಿ ಮನವಿ ಪತ್ರ ಸಲ್ಲಿಸಿದ್ದರು. ಆದರೆ ತಾವು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಬದಲಿ ನಿವೇಶನ ಪಡೆದರೆ ವಿವಾದ ಉಂಟಾಗುತ್ತದೆ ಎಂಬ ಕಾರಣದಿಂದ ಮೂರು ವರ್ಷಗಳ ತನಕ ಈ ಸಂಬಂಧ ಯಾವುದೇ ನಿರ್ಣಯ ಆಗದಂತೆ ಸಿದ್ದರಾಮಯ್ಯ ನೋಡಿಕೊಂಡರು ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ತಮ್ಮ ಅಧಿಕಾರಾವಧಿಯ ಕೊನೆ ಹಂತದಲ್ಲಿ ಅಂದರೆ ಡಿಸೆಂಬರ್ 15, 2017 ಹಾಗೂ ಡಿಸೆಂಬರ್ 30, 2017 ರಂದು ನಡೆದ ಮುಡಾ ಸಭೆಯಲ್ಲಿ ಪತ್ನಿ ಪಾರ್ವತಿ ಹೆಸರಿಗೆ ಬದಲಿ ಭೂಮಿ ನೀಡುವ ಸಂಬಂಧ ಪ್ರಾಧಿಕಾರದ ನಿರ್ಣಯ ಆಗುವಂತೆ ಮಾಡುತ್ತಾರೆ ಎಂದು ದೂರಿದ್ದಾರೆ.

ಸಿದ್ದರಾಮಯ್ಯ ಅಕ್ರಮ ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಅವರ ಅಣತಿಯಂತೆ, ಅವರ ಪ್ರಭಾವದಿಂದಲೇ ಅಕ್ರಮ ನಡೆದಿದೆ ಎಂಬುದಕ್ಕೆ ಇದಕ್ಕಿಂತ ಸಾಕ್ಷ್ಯಾಧಾರ ಬೇಕೆ ಎಂದು ಪ್ರಶ್ನಿಸಿರುವ ಸ್ನೇಹಮಯಿ ಕೃಷ್ಣ, ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಪತ್ರಿಕಾಗೋಷ್ಠಿ ಮೂಲಕ ನನಗೆ ಅವಶ್ಯವಿರುವ ಪ್ರಮುಖ ಸಾಕ್ಷ್ಯಾಧಾರ ಒದಗಿಸಿ, ಸಿದ್ದರಾಮಯ್ಯರಿಗೆ ಶಿಕ್ಷೆ ಕೊಡಿಸಲು ಪರೋಕ್ಷವಾಗಿ ಸಹಕರಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಶ್ರೀ ಕನಕದಾಸರ ಜಯಂತಿ; ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ನ.15(ಪಿಎಂ)– ಸಂತ ಶ್ರೀ ಕನಕದಾಸರ ಜಯಂತೋತ್ಸವ ಸಮಿತಿ ಮೈಸೂರು ವತಿಯಿಂದ ಶ್ರೀ ಸಂತ ದಾಸಶ್ರೇಷ್ಠ ಕನಕದಾಸರ ಜಯಂತಿ ಪ್ರಯುಕ್ತ ಪ್ರತಿಭಾ ಪುರಸ್ಕಾರಕ್ಕಾಗಿ 2023–24ನೇ ಸಾಲಿನ ಎಸ್‌ಎಸ್‌ಎಸ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.85ರಷ್ಟು ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಮೈಸೂರು ಜಿಲ್ಲೆಯ ಕುರುಬ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.



ನ.20ರೊಳಗೆ 'ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ ದೇವಸ್ಥಾನ, ನಾರಾಯಣಶಾಸ್ತ್ರಿ ರಸ್ತೆ, ಮೈಸೂರು' ಈ ವಿಳಾಸಕ್ಕೆ ಮೊಬೈಲ್ ಸಂಖ್ಯೆ ನಮೂದಿಸುವ ಜೊತೆಗೆ ಅಂಕಪಟ್ಟಿಯ ನಕಲು ಪ್ರತಿ ಹಾಗೂ ಇತ್ತೀಚಿನ 2 ಭಾವಚಿತ್ರಗಳು ಒಳಗೊಂಡಂತೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ದಾಖಲಾತಿಗಳನ್ನು ಎಂ.ಮಹಾದೇವೇಗೌಡ ಅವರ ಮೊ. ನಂಬರ್‌ಗೆ (94803 25656) ಸಹ ವಾಟ್ಸಪ್ ಕಳುಹಿಸಬಹುದು. ಮಾಹಿತಿ ಮೊ.ಸಂ. 81979 67641 ಅನ್ನು ಸಂಪರ್ಕಿಸಬಹುದು ಎಂದು ಸಮಿತಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಕ್ಕರೆ ಕಾಯಿಲೆ ಉಚಿತ ತಪಾಸಣೆ ಶಿಬಿರ

ಮೈಸೂರು, ನ 15– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ನ 18 ರಿಂದ 23 ರವರೆಗೆ ಸಕ್ಕರೆ ಕಾಯಿಲೆ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದು.

ಕೃತಕ ಬುದ್ಧಿಮತ್ತೆಯಿಂದ ರೋಗ ಪತ್ತೆ, ಚಿಕಿತ್ಸಾ ವಿಧಾನದಲ್ಲಿ ಕ್ರಾಂತಿಕಾರಿ ಬದಲಾವಣೆ

ವಿಶ್ರಾಂತ ಕುಲಪತಿ ಡಾ. ಕೆ.ಚಿದಾನಂದಗೌಡ ಅಭಿಮತ



ಮೈಸೂರಿನ ಸುಯೋಗ್ ಆಸ್ಪತ್ರೆಯಲ್ಲಿ ವಿಶ್ವ ಸಕ್ಕರೆ ಖಾಯಿಲೆ ದಿನದ ಅಂಗವಾಗಿ ಆಯೋಜಿಸಿದ್ದ ಸಿಹಿ ಸತ್ಯಾಗ್ರಹ ಆಂದೋಲನವನ್ನು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಕೆ.ಚಿದಾನಂದಗೌಡ ಉದ್ಘಾಟಿಸಿದರು.

ಮೈಸೂರು, ನ.15(ಬಿಎಲ್‌ಯು)– ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ವೈದ್ಯಕೀಯ ಕ್ಷೇತ್ರದಲ್ಲಿ ರೋಗ ಪತ್ತೆ ಮತ್ತು ಚಿಕಿತ್ಸಾ ವಿಧಾನಗಳಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದ ಗೌಡ ಅಭಿಪ್ರಾಯಪಟ್ಟರು.

ನಗರದ ಸುಯೋಗ್ ಆಸ್ಪತ್ರೆಯಲ್ಲಿ ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ವಿಶ್ವ ಸಕ್ಕರೆ ಖಾಯಿಲೆ ದಿನದ ಅಂಗವಾಗಿ ಆಯೋಜಿಸಿದ್ದ ಸಿಹಿ ಸತ್ಯಾಗ್ರಹ ಆಂದೋಲನ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆಯಿಂದ ರೋಗಗಳನ್ನು ನಿಖರವಾಗಿ ಪತ್ತೆ ಹಚ್ಚಿ ಸಮಂಜಸ ಚಿಕಿತ್ಸೆ ನೀಡಲು ಸಹಾಯವಾಗಿದೆ ಎಂದು ಹೇಳಿದರು.

ವೈದ್ಯರ ಸಹಜ ಬುದ್ಧಿಮತ್ತೆಗೆ ಇದು ಸವಾಲಾಗಿ ಪರಿಣಮಿಸಿದೆ ಎಂದು ತಿಳಿಸಿದ ಡಾ.ಚಿದಾನಂದಗೌಡ, ಸಕ್ಕರೆ ಖಾಯಿಲೆ ನಿಯಂತ್ರಣಕ್ಕೆ ಸುಯೋಗ್ ಆಸ್ಪತ್ರೆ ಆಯೋಜಿಸುತ್ತಿರುವ ರಚನಾತ್ಮಕ ಕಾರ್ಯಕ್ರಮವನ್ನು ಪ್ರಶಂಸಿಸಿದರು.

ಈ ವೇಳೆ ಮಾತನಾಡಿದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸಕ್ಕರೆ ಖಾಯಿಲೆಗಳ ನಿಯಂತ್ರಣಕ್ಕಾಗಿ ರೋಗಿಗಳಿಗೆ ವಾರ್ಷಿಕ 25 ಸಾವಿರ ಮೌಲ್ಯದಲ್ಲಿ ತಗಲುವ ಪರೀಕ್ಷೆಗಳನ್ನು ಮೂರೂವರೆ ಸಾವಿರ ರೂಪಾಯಿಗಳಲ್ಲಿ ಲಭ್ಯವಾಗುವಂತೆ ಪ್ಯಾಕೇಜ್‌ಗಳನ್ನು ರೂಪಿಸಲಾಗಿದೆ ಎಂದರು.

ಆಸ್ಪತ್ರೆಯ ಮಧುಮೇಹ ತಜ್ಞ ಡಾ. ಟಿ.ಎಂ.ಅಭಿಷೇಕ್, ಸಕ್ಕರೆ ಖಾಯಿಲೆ ನಿಯಂತ್ರಣಕ್ಕೆ ಅಗತ್ಯ ಆಹಾರ ಮಾರ್ಗಸೂಚಿ ಬಿಡುಗಡೆ ಮಾಡಿ ಉಪಯುಕ್ತ ಮಾಹಿತಿ ನೀಡಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಆಸ್ಪತ್ರೆ ಟ್ರಸ್ಟಿ ಸುಧಾ ಯೋಗಣ್ಣ, ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ ವೈದ್ಯಕೀಯ ನಿರ್ದೇಶಕ ಡಾ.ಆರ್. ರಾಜೇಂದ್ರ ಪ್ರಸಾದ್, ನಿರ್ದೇಶಕರಾದ ಡಾ. ಸೀಮಾ ಯೋಗಣ್ಣ ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ಅಧ್ಯಕ್ಷ ಡಾ.ಎಸ್.ಕೆ.ನಂಜಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಜನವರಿ 2025ರಲ್ಲಿ ಮೈಸೂರು ಫೆಸ್ಟ್ ಆಯೋಜನೆ

ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಪ್ರಕಟ

ಮೈಸೂರು,ನ15– 2025ರ ಜನವರಿಯಲ್ಲಿ ಮೈಸೂರು ಫೆಸ್ಟ್ ಆಯೋಜಿಸಲಾಗುವುದು ಎಂದು ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ತಿಳಿಸಿದರು.

ಇಂದು ನಗರದ ಮಯೂರ ಹೋಟೆಲ್‌ನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಹೂಡಿಕೆದಾರರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನವರಿ 2025ಕ್ಕೆ ಮೈಸೂರು ಫೆಸ್ಟ್ ಮಾಡುವ ಯೋಜನೆ ಇದ್ದು, ಇಂದನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸುವ ಕುರಿತು ಚಿಂತಿಸಲಾಗುತ್ತಿದೆ. ಇದರಲ್ಲಿ ಚಿತ್ರ ಸಂತೆ, ಫುಡ್ ಫೆಸ್ಟ್ ಆಯೋಜಿಸಲಾಗುವುದು. ಮೈಸೂರು ಫೆಸ್ಟ್‌ಗೆ ಹೊರ ಜಿಲ್ಲೆ ಹೊರ ರಾಜ್ಯಗಳ ಜನರನ್ನು ಆಕರ್ಷಿಸುವ ರೀತಿ ಯೋಜನೆ ರೂಪಿಸಲಾಗುವುದು. ಮನರಂಜನೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.



ಮೈಸೂರು ಸುಗಂಧ ಕಾರ್ಯಕ್ರಮ ಅದ್ಭುತವಾಗಿ ಯಶಸ್ವಿಯಾಗಿ 3 ದಿನಗಳ ಕಾಲ ನಡೆಯಿತು. ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿ ವಿಜೇತ ಸಂಗೀತ ವಿದ್ವಾಂಸರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕರ್ನಾಟಕ ಮ್ಯೂಸಿಕ್ ನ ದಾಸ ಸಾಹಿತ್ಯ, ಪುರಂದರ ದಾಸ, ಕನಕದಾಸರ ಕೀರ್ತನೆಗಳ ಸಂಗೀತ ಕಾರ್ಯಕ್ರಮಗಳು ಅದ್ಭುತವಾಗಿ ಮೂಡಿ ಬಂದಿತು ಎಂದು ಸಂತಸ ವ್ಯಕ್ತಪಡಿಸಿದರು.

ಮೈಸೂರು ಪ್ರವಾಸೋದ್ಯಮ ನಗರವಾಗಿದ್ದು ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ಇದರಿಂದ ಮೈಸೂರು ನಗರದ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಆಗುತ್ತದೆ. ಪ್ರವಾಸಿ ತಾಣಗಳ ಅಭಿವೃದ್ಧಿಯಿಂದ ಜಿಲ್ಲೆಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗುತ್ತಿದೆ. ಜಿಲ್ಲೆಗೆ ದೇಶ ವಿದೇಶಗಳಿಂದ ಪ್ರವಾಸಿಗರು ಭೇಟಿ ನೀಡುತ್ತಾರೆ. ಪ್ರವಾಸಿಗರ ಹೆಚ್ಚು ಭೇಟಿಯಿಂದ ಹೋಟೆಲ್, ರೆಸ್ಟೋರೆಂಟ್ ಉದ್ಯಮ ಅಭಿವೃದ್ಧಿ ಹೊಂದುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಹಾಗೂ ಮೈಸೂರು ಫೆಸ್ಟ್ ಕಾರ್ಯಕ್ರಮಕ್ಕೆ ಸಹಕರಿಸಿದ ನೇರ ಪಾಲುದಾರರಿಗೆ ಧನ್ಯವಾದ ತಿಳಿಸಿ ಸನ್ಮಾನಿಸಲಾಯಿತು.

ಸಭೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಕೆ ಹರೀಶ್, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಸ್ವಾಮಿ, ಹೋಟೆಲ್ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ನಾರಾಯಣ ಗೌಡ, ಸ್ಕಾಲ್ ಇಂಟರ್‌ನ್ಯಾಷನಲ್ ಮೈಸೂರು ವಿಭಾಗದ ಅಧ್ಯಕ್ಷ ಜಯಕುಮಾರ್, ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಹಾಗೂ ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್. ಪ್ರಶಾಂತ್, ವಾಣಿಜ್ಯ ಹಾಗೂ ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಲಿಂಗರಾಜು, ಹೋಟೆಲ್ ಜೇಡ್ ಗಾರ್ಡನ್ ಭರತ್ ಗೌಡ, ಪೈ ವಿಸ್ತಾ ಹೋಟೆಲ್ ಮಹೇಶ್ ಕುಮಾರ್, ಫೈನ್ ಆರ್ಟ್ಸ್‌ನ ಅಶೋಕ್ ಇತರರು ಉಪಸ್ಥಿತರಿದ್ದರು.

ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಮಂಡಲ ಪೂಜೆ

ಮೈಸೂರು, ನ.15–ಮೈಸೂರು ಚಾಮುಂಡಿಬೆಟ್ಟದ ಪಾದದಲ್ಲಿರುವ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಆವರಣದಲ್ಲಿ ಇಂದಿನಿಂದ ನ.19ರವರೆಗೆ ದೈನಂದಿನ ಅನ್ನದಾನವನ್ನು ಭಕ್ತಾದಿಗಳ ಅನುಕೂಲಕೋಸ್ಕರ ಸಮರ್ಪಕವಾಗಿ ನಡೆಸಲಾಗುವುದು. ನ.21 ರಿಂದ 25ರವರೆಗೆ ಮಹಾ ಅನ್ನದಾನ ಏರ್ಪಡಿಸಲಾಗಿದೆ.

ಭಕ್ತಾದಿಗಳು ಶಬರಿಮಲೆಗೆ ತೆರಳುವಾಗ ದೇವಸ್ಥಾನದ ಆವರಣದಲ್ಲಿ ಮಾಲಾ ಧಾರಣೆ, ಇರುಮುಡಿ ಕಟ್ಟುವ ಸೌಲಭ್ಯ ಮತ್ತು ಇರುಮುಡಿಗೆ ಬೇಕಾಗುವ ಎಲ್ಲಾ ಸಕಲ ಪದಾರ್ಥಗಳನ್ನು ಒದಗಿಸಲಾಗಿದೆ. ಭಕ್ತಾದಿಗಳು ದೇವಸ್ಥಾನದ ಆವರಣಕ್ಕೆ ಬಂದು ಸ್ನಾನಾದಿ ಕರ್ಮಗಳನ್ನು ಮುಗಿಸಿ ದೇವರ ದರ್ಶನ ಪಡೆಯುವ ಸೌಲಭ್ಯವನ್ನು ಒದಗಿಸಲಾಗಿದೆ. ಅದೇ ರೀತಿ ಭಕ್ತಾದಿಗಳು ಮಾಲಾ ಧಾರಣೆ ಮಾಡಿಕೊಂಡು ದೇವಸ್ಥಾನದ ಆವರಣದಲ್ಲಿ ರಾತ್ರಿಯ ವೇಳೆ ತಂಗುವ ವ್ಯವಸ್ಥೆಯನ್ನು ಭಕ್ತಾದಿಗಳ ಸಹಯೋಗದಿಂದ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ದೇವಸ್ಥಾನದ ದೂರವಾಣಿ ಸಂಖ್ಯೆ 0821–2484688 ಮತ್ತು 93428 20188 ಸಂಪರ್ಕಿಸಬಹುದು.

ದೇಶ – ವಿದೇಶ

ಇಸ್ಕಾನ್ ಉಗ್ರ ಸಂಘಟನೆಯೆಂದು ಘೋಷಿಸಿದ ಬಾಂಗ್ಲಾದೇಶ

ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂಗಳ ವಿರುದ್ಧ ಹೆಚ್ಚುತ್ತಿರುವ ಹಿಂಸಾಚಾರ ಮತ್ತು ದ್ವೇಷವು ಹೊಸ ತಿರುವು ಪಡೆದುಕೊಂಡಿದೆ. ಇದೀಗ ಬಾಂಗ್ಲಾದೇಶ ಪೊಲೀಸರು ಹಿಂದೂ ಧಾರ್ಮಿಕ ಸಂಘಟನೆಯಾದ ಇಸ್ಕಾನ್ (ಇಂಟರ್‌ನ್ಯಾಷನಲ್ ಸೊಸೈಟಿ ಫಾರ್ ಕೃಷ್ಣ ಕಾನ್ಶಿಯಸ್ ನೆಸ್) ಅನ್ನು ಭಯೋತ್ಪಾದಕ ಸಂಘಟನೆ ಎಂದು ಘೋಷಿಸಿದ್ದಾರೆ.

ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಕೋಮುಗಲಭೆಯಲ್ಲಿ ಇಸ್ಕಾನ್ ಸದಸ್ಯರು ಭಾಗಿಯಾಗಿದ್ದಾರೆ ಎಂದು ಪೊಲೀಸರು ಪ್ರತಿಪಾದಿಸಿದ್ದಾರೆ. ಈ ಹಿಂದೆ ಇಸ್ಕಾನ್‌ನ ಹಿರಿಯ ಬೋಧಕ ಚಿನ್ಮಯ್ ಕೃಷ್ಣ ದಾಸ್ ವಿರುದ್ಧವೂ ದೇಶದ್ರೋಹದ ಪ್ರಕರಣ ದಾಖಲಾಗಿತ್ತು. ಈ ಘಟನೆಯು ಬಾಂಗ್ಲಾದೇಶದ ಹಿಂದೂ ಸಂಘಟನೆಗಳು ಮತ್ತು ಅವರ ಅನುಯಾಯಿಗಳಲ್ಲಿ ಆತಂಕ ಸೃಷ್ಟಿಸಿದೆ.

ಬಾಂಗ್ಲಾದೇಶದ ಮೂಲಭೂತವಾದಿ ಗುಂಪುಗಳು ಬಹಳ ಹಿಂದಿನಿಂದಲೂ ಹಿಂದೂಗಳನ್ನು ಗುರಿಯಾಗಿಸಿಕೊಂಡು ಬರುತ್ತಿವೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳನ್ನು ಆಧರಿಸಿ, ಬಾಂಗ್ಲಾದೇಶ ಪೊಲೀಸ್ ಮತ್ತು ಸೇನೆಯ ಗುಪ್ತಚರ ವಿಭಾಗವು ಇಸ್ಕಾನ್‌ನ ಚಟುವಟಿಕೆಗಳು ಹಿಂಸಾಚಾರವನ್ನು ಉತ್ತೇಜಿಸುತ್ತಿದೆ ಎಂದು ಹೇಳಿಕೊಂಡಿದೆ.

ಶ್ರೀಲಂಕಾದಲ್ಲಿ ಅನುರಾ ಕುಮಾರ ಡಿಸ್ಸಾನಾಯಕೆಯವರ ಎನ್‌ಪಿಪಿಗೆ ಬಹುಮತ



ಕೊಲಂಬೊ: ಶುಕ್ರವಾರದ ಅಧಿಕೃತ ಚುನಾವಣಾ ಫಲಿತಾಂಶಗಳ ಪ್ರಕಾರ, ಶ್ರೀಲಂಕಾದ ಹೊಸ ಮಾರ್ಕ್ಸ್‌ವಾದಿ ಪ್ರವೃತ್ತಿಯ ಅಧ್ಯಕ್ಷ ಅನುರಾಕುಮಾರ ಡಿಸ್ಸಾನಾಯಕೆ ಅವರ ಪಕ್ಷವು ಸಂಸತ್ತಿನಲ್ಲಿ ಬಹುಮತ ಗಳಿಸಿದೆ.

ಚುನಾವಣಾ ಆಯೋಗವು ಬಿಡುಗಡೆ ಮಾಡಿದ ಭಾಗಶಃ ಫಲಿತಾಂಶಗಳ ಪ್ರಕಾರ, ಸಂಸತ್ತಿನ 225 ಸ್ಥಾನಗಳಲ್ಲಿ ಡಿಸ್ಸಾನಾಯಕೆ ಅವರ ನ್ಯಾಷನಲ್ ಪೀಪಲ್ಸ್ ಪವರ್ ಪಕ್ಷವು ಕನಿಷ್ಠ 123 ಸ್ಥಾನಗಳನ್ನು ಗೆದ್ದಿದೆ. ವಿಪಕ್ಷ ನಾಯಕ ಸಜಿತ್ ಪ್ರೇಮದಾಸ ನೇತೃತ್ವದ ಸಮಗಿ ಜನ ಬಲವೇಗಯಾ ಅಥವಾ ಯುನೈಟೆಡ್ ಪೀಪಲ್ಸ್ ಪವರ್ ಪಾರ್ಟಿ 31 ಸ್ಥಾನಗಳನ್ನು ಪಡೆದಿದೆ.

ಬಹುಸಂಖ್ಯಾತ ಜನಾಂಗೀಯ ಸಿಂಹಳೀಯ ನಾಯಕರ ಬಗ್ಗೆ ಬಹುಕಾಲದಿಂದ ಅನುಮಾನಾಸ್ಪದವಾಗಿರುವ ತಮಿಳರ ವರ್ತನೆಯಲ್ಲಿ ಇದು ಪ್ರಮುಖ ಬದಲಾವಣೆಯಾಗಿದೆ. ತಮಿಳು ಜನಾಂಗೀಯ ಬಂಡುಕೋರರು 1983–2009ರಲ್ಲಿ ಪ್ರತ್ಯೇಕ ತಾಯ್ನಾಡನ್ನು ರಚಿಸಲು ಅಂತರ್ಯುದ್ಧವನ್ನು ನಡೆಸಿದರು, ಕನ್ಸರ್ವೇಟಿವ್ ಯು.ಎನ್ ಅಂದಾಜಿನ ಪ್ರಕಾರ, ಸಂಘರ್ಷದಲ್ಲಿ 1,00,000ಕ್ಕಿಂತ ಹೆಚ್ಚು ಜನರು ಕೊಲ್ಲಲ್ಪಟ್ಟರು. ಸಂಸತ್ತಿನ 225 ಸ್ಥಾನಗಳಲ್ಲಿ, 196 ಶ್ರೀಲಂಕಾದ ಅನುಪಾತದ ಪ್ರಾತಿನಿಧಿಕ ಚುನಾವಣಾ ವ್ಯವಸ್ಥೆಯಡಿಯಲ್ಲಿ ಗ್ರಾಬ್‌ಗೆ ಒಳಪಟ್ಟಿವೆ ಇದು ಪ್ರತಿ ಜಿಲ್ಲೆಯಲ್ಲಿ ಪಕ್ಷಗಳಿಗೆ ಅವರು ಪಡೆಯುವ ಮತಗಳ ಅನುಪಾತಕ್ಕೆ ಅನುಗುಣವಾಗಿ ಸ್ಥಾನಗಳನ್ನು ಹಂಚುತ್ತದೆ.

ಸೈನ್ಸ್ ಟೀಚರ್ ಕುರ್ಚಿ ಕೆಳಗೆ ಬಾಂಬ್ ಫಿಕ್ಸ್ ಮಾಡಿ ರಿಮೋಟ್‌ನಿಂದ ಸ್ಫೋಟ

ಹರ್ಯಾಣ: ಹರಿಯಾಣದ ಭಿವಾನಿಯಲ್ಲಿ ಸರ್ಕಾರಿ ಶಾಲೆಯ ಮಕ್ಕಳು ಪಟಾಕಿಯಂತಹ ಬಾಂಬ್ ಅನ್ನು ತಮ್ಮ ಸೈನ್ಸ್ ಶಿಕ್ಷಕಿಯ ಕುರ್ಚಿಯ ಕೆಳಗೆ ಇರಿಸಿ, ಸ್ಫೋಟಿಸಿದ್ದರು. ಈ ವೇಳೆ ಶಿಕ್ಷಕಿ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇದೀಗ ಶಿಕ್ಷಣ ಇಲಾಖೆ ಈ ಬಗ್ಗೆ ಕ್ರಮ ಕೈಗೊಂಡಿದೆ.

ಕಳೆದ ಶನಿವಾರ ಇಲ್ಲಿ 12ನೇ ತರಗತಿ ನಡೆಯುತ್ತಿತ್ತು. ಈ ವೇಳೆ ಮಕ್ಕಳು ಶಿಕ್ಷಕಿಯ ಕುರ್ಚಿಯ ಕೆಳಗೆ ಬಾಂಬ್ ಇಟ್ಟಿದ್ದರು. ಒಬ್ಬ ಕುರ್ಚಿಯ ಕೆಳಗೆ ಬಾಂಬ್ ಅಳವಡಿಸಿದ್ದರೆ, ಇನ್ನೊಬ್ಬ ರಿಮೋಟ್‌ನಿಂದ ಬಟನ್ ಒತ್ತಿ ಸ್ಫೋಟಿಸಿತ್ತು ಎಂಬ ಆರೋಪ ಕೇಳಿ ಬಂದಿದೆ.

ಜಿಲ್ಲಾ ಶಿಕ್ಷಣಾಧಿಕಾರಿ ನರೇಶ್ ಮಹಾತ ಮಾತನಾಡಿ, ಮಕ್ಕಳನ್ನು ಶಾಲೆಯಿಂದ ತೆಗೆಯುವ ಬಗ್ಗೆ ಚರ್ಚೆ ನಡೆದಿದೆ. ಈ ಘಟನೆ ನಡೆದ ದಿನ ತರಗತಿಗೆ 13 ಮಕ್ಕಳು ಬಂದಿದ್ದರು. ಎಲ್ಲರೂ ಸೇರಿ ಈ ಕೃತ್ಯ ಎಸಗಿದ್ದಾರೆ. ಅದೇ ವೇಳೆಗೆ ಮಹಿಳಾ ಶಿಕ್ಷಕಿಯೂ ಮಕ್ಕಳನ್ನು ಕ್ಷಮಿಸಿ ಈ ಮಕ್ಕಳು ಮಾಡೆಲ್ ಮಾಡಿ ಪ್ರಸ್ತುತಪಡಿಸಿದ್ದರೆ ನಾವೇ ಅವರನ್ನು ಸನ್ಮಾನಿಸುತ್ತಿದ್ದೆವು. ಆದರೆ ಈಗ ವಾರ್ನಿಂಗ್ ನೀಡಿ ಇತ್ಯರ್ಥಪಡಿಸಿದ್ದಾರೆ. ಬಾಂಬ್ ಸ್ಫೋಟದ ನಂತರ, ಕುರ್ಚಿಯ ಕೆಳಗೆ ರಂಧ್ರವಾಗಿದ್ದು, ಯಾವುದೇ ಗಾಯಗಳಾಗಿಲ್ಲ ಎಂಬುದು ನೆಮ್ಮದಿಯ ವಿಚಾರ.

ಕೆನಡಾದಲ್ಲಿ ಧಾರ್ಮಿಕ ಸ್ಥಳಗಳ ಹೊರಗೆ ಪ್ರತಿಭಟನೆ ನಿಷೇಧಿಸುವ ಬೈಲಾ

ಕೆನಡಾ: ಖಲಿಸ್ತಾನ್ ಪರ ಪ್ರತಿಭಟನಾಕಾರರು ಹಿಂದೂ ಸಭಾ ದೇವಾಲಯದ ಹೊರಗೆ ದೂತಾವಾಸ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿ ಹಿಂಸಾಚಾರ, ಘರ್ಷಣೆಗೆ ಕಾರಣವಾದ ಎರಡು ವಾರಗಳ ನಂತರ ಗ್ರೇಟರ್ ಟೊರೊಂಟೊ ಪ್ರದೇಶದ ಬ್ರಾಂಪ್ಟನ್ ಮತ್ತು ಮಿಸಿಸೌಗಾದ ಎರಡು ಪಟ್ಟಣಗಳಲ್ಲಿ ಪೂಜಾ ಸ್ಥಳಗಳ ಹೊರಗೆ ಪ್ರತಿಭಟನೆಗಳನ್ನು ನಿಷೇಧಿಸುವ ಬೈಲಾಗಳನ್ನು ಅಂಗೀಕರಿಸಿವೆ.

ಬ್ರಾಂಪ್ಟನ್ ಮೇಯರ್ ಪ್ಯಾಟ್ರಿಕ್ ಬ್ರೌನ್ ತಮ್ಮ ಎಕ್ಸ್ ಪೋಸ್ಟ್‌ನಲ್ಲಿ, ನಿನ್ನೆ ಬ್ರಾಂಪ್ಟನ್ ಸಮಿತಿಯ ಕೌನ್ಸಿಲ್‌ನಲ್ಲಿ ನಾವು ಸರ್ವಾನುಮತದಿಂದ ಬೈಲಾವನ್ನು ಅಂಗೀಕರಿಸಿದ್ದೇವೆ. ಈ ಬೈಲಾವು ಪೂಜಾ ಸ್ಥಳಗಳಲ್ಲಿ ಪ್ರತಿಭಟನೆಗಳನ್ನು ನಿರ್ಬಂಧಿಸುತ್ತದೆ, ಮಂದಿರ, ಗುರುದ್ವಾರ, ಮಸೀದಿ, ಸಿನಗಾಗ್ ಅಥವಾ ಚರ್ಚ್‌ಗೆ ಹೋದರೂ, ಹಿಂಸಾಚಾರ, ಕಿರುಕುಳ ಮತ್ತು ಬೆದರಿಕೆಯಿಂದ ಮುಕ್ತವಾಗಿ ಪ್ರಾರ್ಥನೆ ಮಾಡುವ ಹಕ್ಕನ್ನು ಪ್ರತಿಯೊಬ್ಬರೂ ಹೊಂದಿರುತ್ತಾರೆ ಎಂದರು.

ಮಾಜಿ ಪ್ರಾಂತೀಯ ಕ್ಯಾಬಿನೆಟ್ ಸಚಿವರಾದ ಕೌನ್ಸಿಲರ್ ದೀಪಿಕಾ ದಮೆರ್ಲಾ ಅವರು ಮಂಡಿಸಿದ ಮತ್ತು ಕೌನ್ಸಿಲರ್ ನಟಾಲಿ ಹಾರ್ಟ್ ಅವರು ಅನುಮೋದಿಸಿದ ಈ ನಿರ್ಣಯವನ್ನು ಕೌನ್ಸಿಲ್‌ನ ಎಲ್ಲಾ ಹತ್ತು ಸದಸ್ಯರು ಸರ್ವಾನುಮತದಿಂದ ಅಂಗೀಕರಿಸಿದರು.

ಗುಜರಾತ್‌ನಲ್ಲಿ 700 ಕೆಜಿ ಡ್ರಗ್ ವಶ; 8 ಇರಾನ್ ಪ್ರಜೆಗಳ ಬಂಧನ

ಅಹಮದಾಬಾದ್: ಮಾದಕ ದ್ರವ್ಯ ನಿಗ್ರಹ ಸಂಸ್ಥೆಗಳ ಜಂಟಿ ಕಾರ್ಯಾಚರಣೆಯಲ್ಲಿ ಗುಜರಾತ್ ಕರಾವಳಿಯ ಭಾರತೀಯ ಪ್ರಾದೇಶಿಕ ಜಲಪ್ರದೇಶದಿಂದ ಸುಮಾರು 700 ಕೆಜಿ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದು ಎಂಟು ಇರಾನ್ ಪ್ರಜೆಗಳನ್ನು ಬಂಧಿಸಿದೆ.

ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ (ಎನ್‌ಸಿಬಿ) ಮಾಹಿತಿ ನೀಡಿದ್ದು, ಗುಪ್ತಚರ ಮಾಹಿತಿಯ ಆಧಾರದ ಮೇಲೆ 'ಸಾಗರ್ ಮಂಥನ್ – 4' ಎಂಬ ಹೆಸರಿನ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿತ್ತು. ಇದು ಕಡಲ ಗಸ್ತು ಸ್ವತ್ತುಗಳನ್ನು ಸಜ್ಜುಗೊಳಿಸುವ ಮೂಲಕ ನೌಕಾಪಡೆಯು ಹಡಗನ್ನು ಗುರುತಿಸಿ ವಶಕ್ಕೆ ಪಡೆದಿದೆ.

ಕಾರ್ಯಾಚರಣೆ ವೇಳೆ ಸುಮಾರು 700 ಕೆಜಿಯಷ್ಟು ಮೆಥಾಂಫೆಟಮೈನ್‌ನ ಬೃಹತ್ ಸಾಗಾಣೆಯನ್ನು ಭಾರತೀಯ ಜಲಗಡಿಯಲ್ಲಿ ತಡೆಯಲಾಯಿತು. ಈ ಕಾರ್ಯಾಚರಣೆ ಸಂದರ್ಭದಲ್ಲಿ, ಇರಾನಿಯನ್ನರು ಎಂದು ಹೇಳಿಕೊಳ್ಳುವ ಎಂಟು ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ ಎಂದು ಎನ್‌ಸಿಬಿ ತಿಳಿಸಿದೆ.

ಎನ್‌ಸಿಬಿ, ನೌಕಾಪಡೆ ಮತ್ತು ಗುಜರಾತ್ ಪೊಲೀಸ್ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಜಂಟಿಯಾಗಿ ಕಾರ್ಯಾಚರಣೆ ನಡೆಸಿತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ಕಾರ್ಯಾಚರಣೆಯು ದೂರದೃಷ್ಟಿ, ಸರ್ಕಾರದ ಬದ್ಧತೆ ಮತ್ತು ಅದನ್ನು ಸಾಧಿಸುವಲ್ಲಿ ನಮ್ಮ ಏಜೆನ್ಸಿಗಳ ನಡುವಿನ ತಡೆರಹಿತ ಸಮನ್ವಯಕ್ಕೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ ಎಂದು ಹೇಳಿದ್ದಾರೆ.

ಆಟೋ ಚಾಲಕಿ ಸುಜಾತಗೆ ಶಂಕರನಾಗ್ ಪ್ರಶಸ್ತಿ



ಸಿದ್ದಾಪುರ, ನ.15– ಎಂಟು ವರ್ಷಗಳಿಂದ ಆಟೋ ಚಾಲಕಿಯಾಗಿ ಸಮಾಜ ಸೇವೆಯಲ್ಲಿ ತೊಡಗಿರುವ ನೆಲ್ಯಹುದಿಕೇರಿಯ ಸುಜಾತಗೆ ದಿ.ಶಂಕರ್‌ನಾಗ್ ಪ್ರಶಸ್ತಿ ಲಭಿಸಿದೆ.

ಬೆಂಗಳೂರಿನ ಜಯನಗರದಲ್ಲಿ ಫೀಸ್ ಆಟೋ ಸಂಘಟನೆ ವತಿಯಿಂದ ಶಂಕರ್‌ನಾಗ್ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಸಾಧಕರ ಗೌರವ ಸಮರ್ಪಣಾ ಕಾರ್ಯಕ್ರಮದಲ್ಲಿ ಕುಶಾಲನಗರ ತಾಲೂಕಿನ ನೆಲ್ಯಹುದಿಕೇರಿಯ ಆಟೋ ಚಾಲಕಿ ಸುಜಾತಾಗೆ ಪ್ರಶಸ್ತಿ ನೀಡಲಾಯಿತು.

ಈಕೆ ಹಲವು ವರ್ಷಗಳಿಂದ ಆಟೋ ಚಾಲಕಿ ಹಾಗೂ ಗ್ರಾಮ ಪಂಚಾಯಿತಿ ಸದಸ್ಯೆಯಾಗಿ ಸೇವೆ ಸಲ್ಲಿಸುತ್ತಿದ್ದು, ಅವರ ಸೇವಾ ಮನೋಭಾವದ ಸಾಧನೆಗಾಗಿ ಸನ್ಮಾನಿಸಲಾಗಿದೆ.

ಪ್ರವಾಹ, ಪ್ರಕೃತಿ ವಿಕೋಪ, ಕೋವಿಡ್ ಸೇರಿದಂತೆ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಮಾದರಿ ಆಟೋ ಚಾಲಕಿಯಾಗಿ ಗುರುತಿಸಿಕೊಂಡಿರುವ ಸುಜಾತ ವಿವಿಧ ಸಂಘ–ಸಂಸ್ಥೆಗಳಿಂದಲೂ ಪ್ರಶಸ್ತಿ, ಸನ್ಮಾನಕ್ಕೆ ಭಾಜನರಾಗಿದ್ದಾರೆ.

ಕೊಡವ ಸಂಸ್ಕೃತಿ ಅಭಿಮಾನ ಮೂಡಿಸುವ ಕೆಲಸವಾಗಲಿ

● ಶಾಸಕ ಡಾ.ಮಂತರ್‌ಗೌಡ ಆಶಯ ● ಕೊಡವ ಸಾಹಿತ್ಯ ಅಕಾಡೆಮಿಯಿಂದ ವಿನೂತನ 'ನಾಡೊರ್ಮೆ'



ಕೊಡವ ಸಾಹಿತ್ಯ ಅಕಾಡೆಮಿಯ 'ನಾಡೊರ್ಮೆ' ಕಾರ್ಯಕ್ರಮದಲ್ಲಿ ಹಿರಿಯರನ್ನು ಸನ್ಮಾನಿಸಲಾಯಿತು.



ನಾಡೊರ್ಮೆ ಕಾರ್ಯಕ್ರಮದಲ್ಲಿ ಗಮನ ಸೆಳೆದ ಕೊಡವ ನೃತ್ಯ ಪ್ರದರ್ಶನ.

ಮಡಿಕೇರಿ, ನ.15–ವಿಭಿನ್ನ, ವಿಶಿಷ್ಟ ಸಂಸ್ಕೃತಿಯುಳ್ಳ ಜನಾಂಗ ಕೊಡವರಾಗಿದ್ದು, ಈ ಸಂಸ್ಕೃತಿ ಹಾಗೂ ಭಾಷೆ ಉಳಿಸಿ ಮುಂದಿನ ಪೀಳಿಗೆಯಲ್ಲಿ ಅಭಿಮಾನ ಹುಟ್ಟಿಸುವ ಕೆಲಸ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಿಂದ ಆಗಬೇಕಿದೆ ಎಂದು ಶಾಸಕ ಡಾ.ಮಂತರ್‌ಗೌಡ ಹೇಳಿದರು.

ಅರೆಕಾಡುವಿನ ರಿಯಾವರ್ ರೆಸಾರ್ಟ್‌ನಲ್ಲಿ ನಡೆದ ಕೊಡವ ಸಾಹಿತ್ಯ ಅಕಾಡೆಮಿ ವಿನೂತನ 'ನಾಡೊರ್ಮೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊಡವ ಸಾಂಸ್ಕೃತಿಕ ಹಬ್ಬವನ್ನು ಆಚರಿಸುವುದರೊಟ್ಟಿಗೆ ಆಯಾಯ ಊರು–ನಾಡಿನ ಯುವ ಜನಾಂಗದ ಪಾಲ್ಗೊಳ್ಳುವಿಕೆಗೆ ಪೂರಕ ವಾತಾವರಣ ನಿರ್ಮಾಣವಾಗಬೇಕಿದೆ. ಹೊರಗೆ ನೆಲೆಸಿರುವ ಯುವಕರನ್ನು ಕೊಡಗಿನಲ್ಲೇ ನೆಲೆಸುವಂತೆ ಮಾಡಬೇಕು. ಕೊಡವ ಅಕಾಡೆಮಿ ಕೆಲಸ–ಕಾರ್ಯಗಳಿಗೆ ಉತ್ತೇಜನ ನೀಡುವ ಸಲುವಾಗಿ ನಾನು ವೈಯಕ್ತಿಕವಾಗಿ ಹಾಗೂ ಸರ್ಕಾರದ ಮಟ್ಟದಲ್ಲಿ ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಮಾತನಾಡಿ, ಕೊಡವ ಆಚಾರ–ವಿಚಾರ, ಸಂಸ್ಕೃತಿ ದೇಶದಲ್ಲೇ ಅಗ್ರಸ್ಥಾನದಲ್ಲಿದೆ. ಇಂತಹ ಹಿರಿಮೆಯುಳ್ಳ ಸಂಸ್ಕೃತಿಯನ್ನು ಕೊಡವ ಜನಾಂಗ ಉಳಿಸಿ, ಬೆಳೆಸಿಕೊಂಡು ಹೋಗಬೇಕು. ಕೊಡಗಿನಲ್ಲಿ ಆಸ್ತಿ ಉಳಿಸಿಕೊಂಡರೇ ಮಾತ್ರ ಸಂಸ್ಕೃತಿ ಉಳಿಯಲು ಸಾಧ್ಯ ಎಂದರು.

ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಮಾತನಾಡಿ, ಕೊಡವ ಸಂಸ್ಕೃತಿ ಈ ನೆಲದ ಅಸ್ಮಿತೆಯಾಗಿದೆ. ಪ್ರಪಂಚದೆಲ್ಲೆಡೆ ಕೊಡವ ಸಂಸ್ಕೃತಿ–ಸಾಹಿತ್ಯದ ಕಂಪು ಪಸರಿಸುವ ಕೆಲಸವಾಗಬೇಕಿದೆ. ನಮ್ಮ ಭಾಷೆ, ಸಂಸ್ಕೃತಿ ಹಾಗೂ ನೆಲದ ಮೇಲಿನ ಅಭಿಮಾನ–ಹಕ್ಕನ್ನು ಮರುಸ್ಥಾಪಿಸುವ ಮೂಲಕ ಸಂಸ್ಕೃತಿಯ ವೈಭವ ಮರುಕಳುಹಿಸುವಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಕೊಡಗು ಜಿಲ್ಲಾ ಗ್ಯಾರಂಟಿ ಅನುಷ್ಠಾನ ಯೋಜನೆ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಮಾತನಾಡಿದರು. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಪ್ರಕಟಿತವಾದ 'ಕೊಡವೋಲೆ' ತ್ರೈಮಾಸಿಕ ಸಂಚಿಕೆಯನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ ಬಿಡುಗಡೆಗೊಳಿಸಿದರು. ಅರೆಕಾಡು–ಹೊಸ್ಕೇರಿ ಗ್ರಾಮದ ತೊಂಡಿಯಂಡ ವಾಸು ನಾಣಯ್ಯ, ಬಲ್ಲಚಂಡ ಶಂಭು ಸೋಮಯ್ಯ, ಅಣ್ಣಾರ್ ಕಂಡ ಪ್ರೇಮ್ ಅಯ್ಯಪ್ಪ, ಕಾಡುಮಂಡ ವಿನೋದ್ ತಿಮ್ಮಯ್ಯ, ಬಲ್ಲಾರಂಡ ಅಭಿನ್ ಮುತ್ತಣ್ಣ ಹಾಗೂ ರಿಯಾವರ್ ರೆಸಾರ್ಟ್ ಮಾಲೀಕ ಮುಕ್ಕಾಟಿರ ವಿನಯ್–ಶಿಲ್ಪ ದಂಪತಿಯನ್ನು ಅಕಾಡೆಮಿ ಹಾಗೂ ಕೊಡವ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.

ಇದೇ ವೇಳೆ 'ಅರೆಕಾಡು–ಹೊಸ್ಕೇರಿ ನಾಡೊರ್ಮೆ' ಯಶಸ್ಸಿಗೆ ಕಾರಣಕರ್ತರಾದ ಕೊಡವ ವೆಲ್ಫೇರ್ ಅಸೋಸಿಯೇಷಿನ್ ಅಧ್ಯಕ್ಷ ಕುಕ್ಕೇರ ಜಯಾ ಚಿಣ್ಣಪ್ಪ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮಹೇಶ್ ನಾಚಯ್ಯರನ್ನು ಕೊಡವ ಅಸೋಸಿಯೇಷಿನ್ ವತಿಯಿಂದ ಸನ್ಮಾನಿಸಲಾಯಿತು.

ವಿಚಾರ ಮಂಡನೆ: ಕಾರ್ಯಕ್ರಮದ ಮುಖ್ಯ ಅಂಗವೆಂಬಂತೆ ವಿಚಾರ ಮಂಡನೆಯನ್ನು ಆಯೋಜಿಸಲಾಗಿತ್ತು. ಡಾ.ಮುಲ್ಲೇಂಗಡ ರೇವತಿ ಪೂವಯ್ಯರಿಂದ 'ಕೊಡವಡ ಮಾಲ್–ಮಟ ಚಿಂಗಾರ' ವಿಷಯವಾಗಿ ಮಂಡಿಸಿದ ಮಾಹಿತಿಯನ್ನು ಪ್ರತಿಯೊಬ್ಬರೂ ಉತ್ಸಾಹದಿಂದ ಆಲಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ರೇವತಿ ಪೂವಯ್ಯರಿಗೆ ಅಕಾಡೆಮಿ ವತಿಯಿಂದ, ತಮಿಳಿನ 'ತಿರುಕ್ಕುರಳ್'ನ್ನು ಕೊಡವಕ್ಕೆ ಭಾಷಾಂತರಿಸಿರುವ ಗೌರವಧನ ನೀಡಲಾಯಿತು. ಊರಿನ ಹಿರಿಯರಿಂದ ದೀಪ ಬೆಳಗಿಸುವ ಮೂಲಕ ನಾಡೊರ್ಮೆಗೆ ಚಾಲನೆ ನೀಡಲಾಯಿತು.

ಕೊಡವ ನೃತ್ಯಗಳ ಪ್ರದರ್ಶನ: ನಾಡೊರ್ಮೆಯಲ್ಲಿ ಮೈಸೂರಿನ 'ಪಡಿಮ ಕಯ್ಯಾಲೆ' ತಂಡದ ಕುಲ್ಲಚಂಡ ವಿನುತ ಕೇಸರಿ ಮುಂದಾಳತ್ವದ ತಂಡದಿಂದ ಉಮ್ಮತಾಟ್, ಸ್ವಾಗತ ನೃತ್ಯ, ಕೊಡವ ನೃತ್ಯಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಬೆಕ್ಕೆಸೊಡ್ಲೂರಿನ ಮಂದತವ್ವ ಕೊಡವ ಸಾಂಸ್ಕೃತಿಕ ಸಂಘದ ಮಲ್ಲಮಡ ಶಾಮಲ ತಂಡದಿಂದ ನಡೆದ ಗೆಜ್ಜೆತಂಡ್ ನೃತ್ಯ ಎಲ್ಲರ ಮನಸೂರೆಗೊಂಡಿತು. ಹಾಡುಗಾರ ಮಾಳೇಟಿರ ಅಜಿತ್ ಪೂವಣ್ಣರಿಂದ ಕೊಡವ ಹಾಡುಗಳು ಪ್ರತಿಯೊಬ್ಬರಲ್ಲಿ ಮಂದಹಾಸ ಮೂಡಿಸಿದವು. ಮಡಿಕೇರಿ ಕೊಡವ ಕಲಾ ತಂಡದಿಂದ ಅಕಾಡೆಮಿ ಸದಸ್ಯ ಚೊಟ್ಟೆಯಂಡ ಸಂಜು ಕಾವೇರಪ್ಪ ಮುಂದಾಳತ್ವದಲ್ಲಿ ಬಾಳೋಪಾಟ್, ಬೊಳಕಾಟ್ ಕಾರ್ಯಕ್ರಮ ನಡೆದವು. ಮೈಸೂರಿನ ಕೊಡವ ಜಾನಪದ ತಜ್ಞ ಡಾ.ಚೇನಂಡ ರಘು ಉತ್ತಪ್ಪರಿಂದ ದುಡಿಕೊಟ್ಟ್ ದೇಶಕೆಟ್ಟ್ ಪಾಟ್ ಉತ್ತಮವಾಗಿ ಮೂಡಿಬಂತು.

ನಾಡೊರ್ಮೆಯ ಇಡೀ ದಿನದ ಕಾರ್ಯಕ್ರಮವನ್ನು ಚೆಯ್ಯಂಡ ಸತ್ಯ ಗಣಪತಿ ಹಾಗೂ ಚೀಯಂಡಿರ ರಕ್ಷಿತ ಉತ್ತಪ್ಪ ಅಚ್ಚುಕಟ್ಟಾಗಿ ನಿರೂಪಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ನಾಡೊರ್ಮೆಯಲ್ಲಿ ಕೊಡವ ಸಾಹಿತ್ಯ ಅಕಾಡೆಮಿ ಎಲ್ಲಾ ಸದಸ್ಯರು, ಕೊಡವ ವೆಲ್ಫೇರ್ ಅಸೋಸಿಯೇಷಿನ್ ಪದಾಧಿಕಾರಿಗಳು, ಗ್ರಾಮಸ್ಥರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಅಕಾಡೆಮಿ ಸಂಚಾಲಕ ಪುತ್ತರಿರ ಪಪ್ಪು ತಿಮ್ಮಯ್ಯ, ಸದಸ್ಯರಾದ ಕಂಬೆಯಂಡ ಡೀನ ಬೋಜಣ್ಣ, ಚೊಟ್ಟೆಯಂಡ ಸಂಜು ಕಾವೇರಪ್ಪ, ಪಾನಿಕುಟ್ಟಿರ ಕುಟ್ಟಪ್ಪ, ನಾಪಂಡ ಕುಟ್ಟಪ್ಪ, ಮೊಳ್ಳೆ ಕುಟ್ಟಡ ದಿನು ಬೋಜಪ್ಪ, ನಾಯಂದಿರ ಶಿವಾಜಿ, ನಾಯಕಂಡ ಬೇಬಿ ಚಿಣ್ಣಪ್ಪ, ಚೆಪ್ಪುಡಿರ ಎ.ಉತ್ತಪ್ಪ, ಪೊನ್ನಿರ ಯು.ಗಗನ್, ಕೊಡವ ಅಸೋಸಿಯೇಷಿನ್ ಉಪಾಧ್ಯಕ್ಷ ಬಲ್ಲಚಂಡ ವಿಠಲ್ ಕಾವೇರಪ್ಪ, ಖಜಾಂಚಿ ಕಮಾಂಡರ್ ಕುಕ್ಕೇರ ಕೇಶು ಉತ್ತಪ್ಪ, ಸಹ ಖಜಾಂಚಿ ಬಿದ್ದಂಡ ಭೀಮಯ್ಯ, ಕಾರ್ಯದರ್ಶಿ ನೆಲ್ಲಮಕ್ಕಡ ಪಾವನ್, ಸಹ ಖಜಾಂಚಿ ಕುಕ್ಕೇರ ಸಿ.ಅಯ್ಯಪ್ಪ ಮತ್ತಿತರರು ಪಾಲ್ಗೊಂಡಿದ್ದರು.

ಕುಶಾಲನಗರ–ಶ್ರೀರಂಗಪಟ್ಟಣ ಎಕ್ಸ್‌ಪ್ರೆಸ್ ಹೈವೆ ಕಾಮಗಾರಿ ಶೀಘ್ರ ಪೂರ್ಣ



ಮಡಿಕೇರಿ ತಾಲೂಕಿನ ಕಗ್ಗೋಡ್ಲು ಗ್ರಾಮದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಸಂಸದ ಯದುವೀರ್ ಮಾತನಾಡಿದರು.

ಮಡಿಕೇರಿ: ಕುಶಾಲನಗರ–ಶ್ರೀರಂಗಪಟ್ಟಣ ಎಕ್ಸ್‌ಪ್ರೆಸ್ ಹೈವೆ ಕಾಮಗಾರಿ ಶೀಘ್ರ ಪೂರ್ಣಗೊಳ್ಳಲಿದ್ದು, ಕೊಡಗಿನ ಜನರಿಗೆ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಗುವುದು ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದರು.

ಮಡಿಕೇರಿ ತಾಲೂಕಿನ ಕಗ್ಗೋಡ್ಲು ಗ್ರಾಮದಲ್ಲಿ ಶುಕ್ರವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಕೊಡಗು ಜಿಲ್ಲೆಗೆ ಅಗತ್ಯ ಮೂಲಸೌಲಭ್ಯಗಳನ್ನು ಒದಗಿಸಲು ಸದಾ ಶ್ರಮಿಸುವುದಾಗಿ ತಿಳಿಸಿದರು.

ಕುಶಾಲನಗರದವರೆಗಿನ ರೈಲು ಮಾರ್ಗ ಕಾಮಗಾರಿ ಕೂಡ ಸದ್ಯದಲ್ಲೇ ಆರಂಭಗೊಳ್ಳಲಿದೆ. ಬಿಎಸ್‌ಎನ್‌ಎಲ್ ನೆಟ್‌ವರ್ಕ್ ಸಮಸ್ಯೆ ಕುರಿತು ದೂರುಗಳು ಕೇಳಿ ಬಂದಿವೆ. ಜಿಲ್ಲೆಯಾದ್ಯಂತ ಟವರ್‌ಗಳ ಅಭಿವೃದ್ಧಿ ಕಾರ್ಯ ನಡೆಯುತ್ತಿದ್ದು, ಶೀಘ್ರ ನೆಟ್‌ವರ್ಕ್ ಸಮಸ್ಯೆ ಬಗೆಹರಿಯಲಿದೆ ಗ್ರಾಮೀಣ ಭಾಗಕ್ಕೆ ಕುಡಿಯುವ ನೀರು, ರಸ್ತೆ, ತಡೆಗೋಡೆ ಸೇರಿದಂತೆ ಮೂಲಸೌಲಭ್ಯ ಕಲ್ಪಿಸಲು ಬದ್ಧನಾಗಿರುವುದಾಗಿ ಹೇಳಿದರು.

ಮಾವುತರ ಸಮಸ್ಯೆಗೆ ಸ್ಪಂದನೆ: ದುಬಾರೆ ಸಾಕಾನೆ ಶಿಬಿರಕ್ಕೆ ಭೇಟಿ ನೀಡಿದ ಸಂಸದ ಯದುವೀರ್, ಮಾವುತರು ಹಾಗೂ ಕಾವಡಿಗರ ಸಮಸ್ಯೆಗಳನ್ನು ಆಲಿಸಿದರು. ಮನವಿ ಸ್ವೀಕರಿಸಿದ ಅವರು ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಸಾಕಾನೆಗಳಿಗೆ ಆಹಾರ ನೀಡಿದರು.

ಇದೇ ವೇಳೆ ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಕೊಡಗು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಿಧಾನಪರಿಷತ್ ಮಾಜಿ ಸದಸ್ಯ ಸುನಿಲ್ ಸುಬ್ರಮಣಿ, ಮಹಿಳಾ ಬಿಜೆಪಿ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ಮಡಿಕೇರಿ ನಗರ ಬಿಜೆಪಿ ಅಧ್ಯಕ್ಷ ಉಮೇಶ್ ಸುಬ್ರಮಣಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಪಿ.ಎಂ.ರವಿ ಇದ್ದರು.

ಇಬ್ಬರು ಮನೆಗಳ್ಳರ ಬಂಧನ; 168 ಗ್ರಾಂ ಚಿನ್ನಾಭರಣ ವಶ

ಕುಶಾಲನಗರ: ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಹಕ್ಕೆ ಗ್ರಾಮದಲ್ಲಿ ನಡೆದಿದ್ದ ಮನೆ ಕಳವು ಪ್ರಕರಣ ಬೇಧಿಸಿರುವ ಕುಶಾಲನಗರ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.



ಸೋಮಶೇಖರ್



ಎನ್.ಅಭಿಷೇಕ್

ಹಕ್ಕೆ ಗ್ರಾಮದ ಎಸ್.ಕೆ.ಸೋಮಶೇಖರ್(24) ಮತ್ತು ಹೊಳೆನರಸೀಪುರ ತಾಲೂಕಿನ ಮಾಚಗೌಡನಹಳ್ಳಿ ಗ್ರಾಮದ ಎನ್.ಅಭಿಷೇಕ್(24) ಬಂಧಿತರು. ಈ ಇಬ್ಬರು ಕಳವು ಮಾಡಿದ್ದ 168.02 ಗ್ರಾಂ ಚಿನ್ನಾಭರಣ, 2.54 ಲಕ್ಷ ರೂ., ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನ ಮತ್ತು ಕಬ್ಬಿಣದ ಹಾರೆ ವಶಪಡಿಸಿಕೊಳ್ಳಲಾಗಿದೆ.

ಹಕ್ಕೆ ಗ್ರಾಮದ ದೇವರಾಜು ಅವರು ನ.3ರಂದು ದೀಪಾವಳಿ ಹಬ್ಬದ ಪ್ರಯುಕ್ತ ಸಂಬಂಧಿಕರ ಮನೆಗೆ ತೆರಳಿದ್ದರು. ಮರಳಿ ಮನೆಗೆ ಬಂದು ನೋಡಿದಾಗ ಮನೆಯ ಹಿಂದಿನ ಬಾಗಿಲನ್ನು ಮುರಿದು ಲಾಕರ್‌ನಲ್ಲಿದ್ದ ಚಿನ್ನಾಭರಣಗಳನ್ನು ಕಳವು ಮಾಡಿರುವುದು ಪತ್ತೆಯಾಗಿತ್ತು. ನಂತರ ದೇವರಾಜು ಕುಶಾಲನಗರ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಸ್ಥಳ ಪರಿಶೀಲಿಸಿ, ಕಳ್ಳತನಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ಸಾಕ್ಷ್ಯಾಧಾರ ಕಲೆಹಾಕಿ ಆರೋಪಿಗಳನ್ನು ಬಂಧಿಸಿದ್ದಾರೆ.

ಬಿರ್ಸಾಮುಂಡಾ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿ

● ಶಾಸಕ ಸಿ.ಪುಟ್ಟರಂಗಶೆಟ್ಟಿ ಸ್ಮರಣೆ ● ಫಲಾನುಭವಿಗಳಿಗೆ ಸವಲತ್ತು ವಿತರಣೆ



ಚಾ.ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ನಡೆದ ಭಗವಾನ್ ಬಿರ್ಸಾಮುಂಡಾ ಜಯಂತಿಯನ್ನು ಶಾಸಕ ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಚಾಮರಾಜನಗರ, ನ.15–ಆದಿವಾಸಿಗಳ ಹಕ್ಕು, ಮೂಲ ಸಂಸ್ಕೃತಿ ಉಳಿವಿಗಾಗಿ ಬ್ರಿಟಿಷರ ವಿರುದ್ಧ ಹೋರಾಡಿದ ಬಿರ್ಸಾ ಮುಂಡಾ ದೇಶದ ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯಾಗಿದ್ದರು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಸ್ಮರಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಶುಕ್ರವಾರ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಜನಜಾತೀಯ ಗೌರವ ದಿವಸ್ ಅಂಗವಾಗಿ ಆಯೋಜಿಸಿದ್ದ ಭಗವಾನ್ ಬಿರ್ಸಾ ಮುಂಡಾ ಜಯಂತಿ ಹಾಗೂ ಪಿಎಂ ಜನ್ ಮನ್ ಕಾರ್ಯಕ್ರಮದ ಫಲಾನುಭವಿಗಳಿಗೆ ಸವಲತ್ತು ವಿತರಣೆ, ಎಂಪಿಸಿ ಶಂಕುಸ್ಥಾಪನೆ ಮತ್ತು ದರ್ತಿ ಆಬಾ ಜನಜಾತೀಯ ಗ್ರಾಮ ಉತ್ಕರ್ಷ್ ಅಭಿಯಾನ ಉದ್ಘಾಟಿಸಿ ಅವರು ಮಾತನಾಡಿದರು.

ಅಪ್ರತಿಮ ದೇಶಪ್ರೇಮಿಯಾಗಿದ್ದ ಆದಿವಾಸಿಗಳ ಮಹಾನ್ ನಾಯಕ ಬಿರ್ಸಾಮುಂಡಾ ಅವರನ್ನು ಅತ್ಯಂತ ಕಿರಿಯ ವಯಸ್ಸಿನ ಸ್ವಾತಂತ್ರ್ಯ ಹೋರಾಟಗಾರ ಎಂದರೇ ತಪ್ಪಾಗಲಾರದು. ಬಿರ್ಸಾಮುಂಡಾ ಸ್ವಾತಂತ್ರ್ಯ ಹೋರಾಟಕ್ಕೆ ತಾತ್ವಿಕ ನೆಲೆಗಟ್ಟು ಒದಗಿಸಿಕೊಟ್ಟರು. ಆದಿವಾಸಿ ಸಂಸ್ಕೃತಿ ರಕ್ಷಣೆಗೆ ಬಿರ್ಸಾಮುಂಡಾ ಕೊಡುಗೆ ಅಪಾರವಾಗಿದೆ. ಅವರ ಆದರ್ಶ, ದೇಶ ಪ್ರೇಮವನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಆದಿವಾಸಿ ಜನರು ಚಿಕ್ಕವಯಸ್ಸಿನಲ್ಲೇ ಹಲವು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಇದು ದುರದೃಷ್ಟಕರ ಸಂಗತಿ. ಪರಿಶಿಷ್ಟರ ಕಲ್ಯಾಣಕ್ಕಾಗಿ ಸರ್ಕಾರ ಹಲವು ಯೋಜನೆ, ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಸಾಮಾಜಿಕ, ಶೈಕ್ಷಣಿಕ ಆರ್ಥಿಕ ರಾಜಕೀಯವಾಗಿ ಆದಿವಾಸಿಗಳು ಮುಂಚೂಣಿಗೆ ಬರಬೇಕು. ಆದಿವಾಸಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ಆಶ್ರಮ ಶಾಲೆಗಳನ್ನು ಸ್ಥಾಪಿಸಿದೆ. ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಶಾಸಕ ಎಂ.ಆರ್.ಮಂಜುನಾಥ್ ಮಾತನಾಡಿ, ಸಾಮಾಜಿಕ ನ್ಯಾಯದ ಪರಿಕಲ್ಪನೆಯಡಿ ಬಿರ್ಸಾಮುಂಡಾ ಆದಿವಾಸಿಗಳಿಗೆ ಹಕ್ಕುಗಳನ್ನು ಹೋರಾಟದ ಮೂಲಕ ಕೊಡಿಸಿದ್ದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಆದಿವಾಸಿ ಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕು. ಹೆಚ್ಚಿನ ಉದ್ಯೋಗ ಸೃಷ್ಟಿಯಾಗಬೇಕು. ಮಹದೇಶ್ವರಬೆಟ್ಟದ ಆಸುಪಾಸಿನ 10 ಹಳ್ಳಿಗಳಿಗೆ ಮೂಲ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಕುಡಿಯುವ ನೀರು ಹಾಗೂ ವಿದ್ಯುತ್ ಸರಬರಾಜಿಗೆ ಟೆಂಡರ್ ಆಗಿದೆ. ಮುಖ್ಯಮಂತ್ರಿ ಜಿಲ್ಲೆಗೆ ಭೇಟಿ ನೀಡಿ ಚಾಲನೆ ನೀಡಲಿದ್ದಾರೆ ಎಂದು ಹೇಳಿದರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲ ಡಾ.ಎನ್.ಮಹದೇವಸ್ವಾಮಿ ಮಾತನಾಡಿದರು. ಇದೇ ವೇಳೆ ಪಿಎಂ ಜನ್‌ಮನ್ ಫಲಾನುಭವಿಗಳಿಗೆ ಸವಲತ್ತು ವಿತರಿಸಲಾಯಿತು. ಪ್ರತಿಭಾನ್ವಿತ ವಿದ್ಯಾರ್ಥಿನಿಯನ್ನು ಸನ್ಮಾನಿಸಲಾಯಿತು. ಗುಂಡ್ಲುಪೇಟೆಯಲ್ಲಿ ನಿರ್ಮಿಸಲಾಗುವ ಮಲ್ಟಿಪರ್ಪಸ್ ಕಟ್ಟಡ ಕಾಮಗಾರಿಗೆ ಗಣ್ಯರು ಶಂಕುಸ್ಥಾಪನೆ ನೆರವೇರಿಸಿದರು. ಪ್ರಧಾನಿ ಮೋದಿ ಬುಡಕಟ್ಟು ಸಮುದಾಯದವರೊಂದಿಗೆ ನಡೆಸುವ ಸಂವಾದ ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಉಪಾಧ್ಯಕ್ಷೆ ಮಮತಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹೆಚ್.ಎಸ್. ಬಿಂದ್ಯಾ, ಜಿಪಂ ಯೋಜನಾಧಿಕಾರಿ ಕಿರಣ್ ಪಡ್ನೇಕರ್, ಜಿಲ್ಲಾ ಬುಡಕಟ್ಟು ಸಂಘದ ಅಧ್ಯಕ್ಷ ರಂಗೇಗೌಡ, ಆದಿವಾಸಿ ಮುಖಂಡರಾದ ಕೇತಮ್ಮ, ದಾಸೇಗೌಡ, ಮುದ್ದಯ್ಯ, ಜಡೇಸ್ವಾಮಿ, ಪುಟ್ಟಮ್ಮ, ದೊಡ್ಡಸಿದ್ದಯ್ಯ, ಮುತ್ತಯ್ಯ ಇತರರಿದ್ದರು.

ನೂರ್ ಮೊಹಲ್ಲಾದಲ್ಲಿ ಹುಳು ಮಿಶ್ರಿತ ನೀರು

ನಗರಸಭಾ ಅಧಿಕಾರಿಗಳ ಕಾರ್ಯವೈಖರಿಗೆ ನಿವಾಸಿಗಳ ಆಕ್ರೋಶ



ಕೊಳ್ಳೇಗಾಲದ 23ನೇ ವಾರ್ಡ್‌ನಲ್ಲಿ ನಲ್ಲಿಗಳಲ್ಲಿ ಬಂದ ಹುಳು ಮಿಶ್ರಿತ ನೀರು.

ಕೊಳ್ಳೇಗಾಲ: ನಗರಸಭೆ ವ್ಯಾಪ್ತಿಯ ನೂರ್ ಮೊಹಲ್ಲಾದ 23ನೇ ವಾರ್ಡ್‌ನ ಹಲವು ಮನೆಗಳ ನಲ್ಲಿಗಳಲ್ಲಿ ಶುಕ್ರವಾರ ಹುಳು ಮಿಶ್ರಿತ ನೀರು ಪೂರೈಕೆಯಾಗಿದ್ದು, ನಗರಸಭಾ ಅಧಿಕಾರಿಗಳ ಕಾರ್ಯವೈಖರಿಗೆ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಲ್ಲಿಗಳಲ್ಲಿ ಹುಳು ಮಿಶ್ರಿತ ನೀರು ಕಂಡ ನಿವಾಸಿಗಳು ಆತಂಕಕ್ಕೊಳಗಾಗಿದ್ದು, ನೂರ್ ಮೊಹಲ್ಲಾದ 23ನೇ ವಾರ್ಡ್‌ನ 5ನೇ ಕ್ರಾಸ್‌ನ ನಯುದ್ ಪಾಷ, ನವೀದ್ ಸೇರಿದಂತೆ ಐದಾರು ಮನೆಗಳಿಗೆ ಹುಳು ಮಿಶ್ರಿತ ನೀರು ಪೂರೈಕೆಯಾಗಿದೆ. ಇದನ್ನು ಕಂಡ ನಿವಾಸಿಗಳು ಆತಂಕಕ್ಕೊಳಗಾಗಿದ್ದಾರೆ.

ಕಳೆದ ವಾರವಷ್ಟೇ ಇದೇ ವಾರ್ಡ್‌ನಲ್ಲಿ ಕಲುಷಿತ ನೀರು ಪೂರೈಕೆಯಾಗಿತ್ತು ಇದರಿಂದ ಹಲವು ಮಂದಿ ವಾಂತಿ ಬೇಧಿಯಿಂದ ಅಸ್ವಸ್ಥರಾಗಿದ್ದರು. ವಿಚಾರ ತಿಳಿದು ಶಾಸಕ ಕೃಷ್ಣಮೂರ್ತಿ ಭೇಟಿ ನೀಡಿ, ಮುಂದೆ ಈ ರೀತಿ ಘಟನೆಯಾದರೆ ಅಧಿಕಾರಿಗಳನ್ನೇ ಹೊಣೆ ಮಾಡುವುದಾಗಿ ಎಚ್ಚರಿಸಿದ್ದರು. ಆದರೂ ಪುನಃ ನಲ್ಲಿಗಳಲ್ಲಿ ಸಣ್ಣ ಹುಳುಗಳ ಮಿಶ್ರಿತ ನೀರು ಪೂರೈಕೆಯಾಗಿದೆ.

ಬಿಂದಿಗೆ ಹಾಗೂ ಬಕೆಟ್‌ಗಳಲ್ಲಿ ಹುಳು ಮಿಶ್ರಿತ ನೀರು ನೋಡುತ್ತಿದ್ದಂತೆ ಕೆಲವರು ನೀರು ಚೆಲ್ಲಿದ್ದಾರೆ. ಮತ್ತೆ ಕೆಲವರು ಬಾಟಲ್‌ನಲ್ಲಿ ಸಂಗ್ರಹಿಸಿ ನಗರಸಭೆ ಸದಸ್ಯೆ ಜಯಮೇರಿ ಹಾಗೂ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಈ ಹಿನ್ನೆಲೆ ಆರೋಗ್ಯ ಇಲಾಖೆ ಮತ್ತು ನಗರಸಭೆ ಅಧಿಕಾರಿಗಳು ಅಲರ್ಟ್ ಆಗಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಕ್ರಮ ಕೈಗೊಂಡಿದ್ದಾರೆ.

ಕಲುಷಿತ ನೀರು ಪೂರೈಕೆಗೆ ನಗರಸಭಾ ಸದಸ್ಯೆ ಜಯಮೇರಿ ಆಕ್ರೋಶ ವ್ಯಕ್ತಪಡಿಸಿದ್ದು, ಮುಂದೆ ಈ ರೀತಿ ಕಲುಷಿತ ನೀರು ಪೂರೈಕೆಯಾದರೆ ಏಕಾಂಗಿಯಾಗಿ ಜಿಲ್ಲಾಧಿಕಾರಿ ಮತ್ತು ನಗರಸಭೆ ಕಚೇರಿ ಮುಂದೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ಜನರು ಕುಡಿಯುವ ನೀರಿನ ವಿಚಾರದಲ್ಲಿ ನಗರಸಭೆ ಚೆಲ್ಲಾಟವಾಡಬಾರದು ಎಂದು ಎಚ್ಚರಿಸಿದ್ದಾರೆ

ಐಟಿಐ ವಿದ್ಯಾರ್ಹತೆ ಕಡೆಗಣನೆ ಖಂಡಿಸಿ ಬಿವಿಎಸ್ ಪ್ರತಿಭಟನೆ



ಚಾಮರಾಜನಗರದಲ್ಲಿ ಭಾರತೀಯ ವಿದ್ಯಾರ್ಥಿ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ನ.15–ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಗಳಲ್ಲಿ ನಡೆಯುತ್ತಿರುವ ಲೈನ್‌ಮಾನ್ ನೇಮಕಾತಿಯಲ್ಲಿ ಐಟಿಐ ವಿದ್ಯಾರ್ಹತೆ ಬದಲು ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಪರಿಗಣಿಸುತ್ತಿರುವುದನ್ನು ಖಂಡಿಸಿ ಭಾರತೀಯ ವಿದ್ಯಾರ್ಥಿ ಸಂಘ (ಬಿವಿಎಸ್) ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗ ಸಂಘದ ಸಂಯೋಜಕ ಪರ್ವತ್‌ರಾಜ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನ ತಲುಪಿ, ಅಲ್ಲಿ ಕೆಲಕಾಲ ಪ್ರತಿಭಟನೆ ನಡೆಸಲಾಯಿತು. ನಂತರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ವಿದ್ಯುತ್ ಪ್ರಸರಣ ನಿಗಮ ಹಾಗೂ ಅದರ ಅಂಗ ಸಂಸ್ಥೆಗಳಲ್ಲಿ ನಡೆಯುತ್ತಿರುವ ಲೈನ್‌ಮಾನ್, ಕಿರಿಯ ಪವರ್ ಮಾನ್ ಹಾಗೂ ಸ್ಟೇಷನ್ ಪರಿಚಾರಕ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆಯನ್ನು ಕನಿಷ್ಠ ಅರ್ಹತೆಯಾಗಿ ಪರಿಗಣಿಸಿದ್ದು, ಇದು ಅವೈಜ್ಞಾನಿಕ ಮಾನದಂಡವಾಗಿದೆ. ಎಸ್‌ಎಸ್‌ಎಲ್‌ಸಿ ಪೂರೈಸಿದ ಅಭ್ಯರ್ಥಿಗಳು ಯಾವುದೇ ವಿದ್ಯುತ್ ಉಪಕರಣ ನಿರ್ವಹಣೆ ಸಂಬಂಧಿ ತರಬೇತಿ ಪಡೆದಿರುವುದಿಲ್ಲ. ಇದು ಮುಂದಿನ ದಿನಗಳಲ್ಲಿ ವಿದ್ಯುತ್ ಅವಘಡ ಹಾಗೂ ಪ್ರಾಣಹಾನಿ ಸಂಭವಿಸಲು ಕಾರಣವಾಗುತ್ತದೆ. ಈ ಮಾನದಂಡವನ್ನು ನಿರ್ಧರಿಸುವುದರ ಹಿಂದೆ ಇಲಾಖಾ ಅಧಿಕಾರಿಗಳ ಕೈವಾಡವಿದೆ ಎಂದು ಪ್ರತಿಭಟನಾಕಾರರು ದೂರಿದರು.

ಐಟಿಐ ಅಭ್ಯರ್ಥಿಗಳನ್ನು ಪರಿಗಣಿಸಿದರೆ ಸೇವಾ ನಿಯಮದ ಪ್ರಕಾರ ಜೆಇ, ಜೆಇಇ ಹುದ್ದೆಗಳಿಗೆ ಪದೋನ್ನತಿ ನೀಡಬೇಕಾಗಿದ್ದು, ಇದರಿಂದ ತಮಗಿಂತ ಕೆಳಸ್ತರದ ನೌಕರರ ಅಡಿಯಲ್ಲಿ ಕಾರ್ಯನಿರ್ವಹಿಸಬೇಕಾಗಿ ಬರುವ ಸಂಭವವಿರುವುದರಿಂದ ಈ ರೀತಿಯ ಅವೈಜ್ಞಾನಿಕ, ಅತಾರ್ಕಿಕ ಅರ್ಹತಾ ಮಾನದಂಡ ವಿಧಿಸಲಾಗಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಸಂಘದ ಮನು, ಸುರ್ಜಿತ್, ಹರೀಶ್, ಮಣಿಕಂಠ, ಮಂಜುನಾಥ್, ಬಾಬುಕುಮಾರ್, ನವೀನ್, ಕಿರಣ್, ಅನೂಪ್ ಇತರರು ಭಾಗವಹಿಸಿದ್ದರು.

ನಾಗಮ್ಮ ನಿಧನ

ಕೊಳ್ಳೇಗಾಲ, ನ.15–ತಾಲೂಕಿನ ಆಲಹಳ್ಳಿ ಗ್ರಾಮದ ಎಪಿಎಂಸಿ ಮಾಜಿ ಅಧ್ಯಕ್ಷ ಎ.ಬಿ. ಬಸವಣ್ಣ ಅವರ ಪುತ್ರಿ ನಾಗಮ್ಮ (38) ಶುಕ್ರವಾರ ಅನಾರೋಗ್ಯದಿಂದ ನಿಧನರಾದರು.



ವ್ಯಂಜಾನ್

ಮೃತರು ತಂದೆ, ತಾಯಿ, ಪತಿ ಸಂತೋಷ್, ಇಬ್ಬರು ಪುತ್ರರು, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಯಳಂದೂರು ತಾಲೂಕಿನ ಮಲ್ಲಿಗೆಹಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಗೋಣಹಳ್ಳಿ ಮಾರಮ್ಮ ದೇಗುಲ ಲೋಕಾರ್ಪಣೆ



ಹುಲ್ಲೇಪುರ ಗ್ರಾಮದ ಗೋಣಹಳ್ಳಿ ಮಾರಮ್ಮ ದೇಗುಲದ ಗೋಪುರದ ಕಳಸಾರೋಹಣವನ್ನು ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ ನೆರವೇರಿಸಿದರು.

ಯಳಂದೂರು, ನ.15–ಸಮೀಪದ ಹುಲ್ಲೇಪುರ ಗ್ರಾಮದಲ್ಲಿ ಆದಿಶಕ್ತಿ ಗೋಣಹಳ್ಳಿ ಮಾರಮ್ಮ ದೇಗುಲವನ್ನು ಹೊಸದುರ್ಗ ಭಗೀರಥ ಪೀಠಾಧ್ಯಕ್ಷ ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ ಸಮ್ಮುಖದಲ್ಲಿ ಲೋಕಾರ್ಪಣೆಗೊಳಿಸಲಾಯಿತು.

ಪುರುಷೋತ್ತಮಾನಂದಪುರಿ ಸ್ವಾಮೀಜಿ ಮಾತನಾಡಿ, ಹಿಂದೂ ಧರ್ಮದಲ್ಲಿ ವಿವಿಧ ಧಾರ್ಮಿಕ ಆಚರಣೆಗಳಿಗೆ ಮಹತ್ವದ ಅರ್ಥವಿದೆ. ಎಲ್ಲಾ ಆಚರಣೆಗಳೂ ವೈಜ್ಞಾನಿಕವಾಗಿರುತ್ತದೆ. ದೇಗುಲಗಳು ನೆಮ್ಮದಿಯ ತಾಣಗಳಾಗಬೇಕು. ನಮ್ಮ ಧರ್ಮದಲ್ಲಿ ತಾಯಿ–ತಂದೆಯನ್ನು ದೇವರಂತೆ ಕಾಣುವ ಆಚಾರವಿದೆ. ಇದನ್ನು ಎಲ್ಲರೂ ಅರಿಯಬೇಕು. ಪೋಷಕರು ಹಾಗೂ ಗುರುಹಿರಿಯರನ್ನು ಗೌರವಿಸುವ ಗುಣ ಬೆಳೆಸಿಕೊಳ್ಳಬೇಕು. ಈ ದೇಗುಲ ಶಕ್ತಿ ಕೇಂದ್ರವಾಗಿ ಪರಿವರ್ತಿಸುವ ಕೆಲಸವನ್ನು ಎಲ್ಲರೂ ಶ್ರದ್ಧೆ, ಭಕ್ತಿಯಿಂದ ಮಾಡಬೇಕು ಎಂದು ತಿಳಿಸಿದರು.

ಹೋಮ, ಹವನ ನಡೆಸಿದ ನಂತರ ದೇಗುಲದ ಕಳಸಾರೋಹಣ ಮಾಡಲಾಯಿತು. ಇದಕ್ಕೂ ಮುನ್ನ ಹೆಣ್ಣು ಮಕ್ಕಳು ದೇಗುಲಕ್ಕೆ ಕಳಸ ಹೊತ್ತು ಮೆರವಣಿಗೆ ನಡೆಸಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಸರಗೂರು ಮಠದ ಮಹಾದೇವ ಸ್ವಾಮೀಜಿ, ಮಂಗಲಗಡಿಯ ಮಂಜುನಾಥಸ್ವಾಮಿ, ಗ್ರಾಮದ ಯಜಮಾನರು, ಮುಖಂಡರು ಇದ್ದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಿತ್ಯಶ್ರೀ ಕಾಂಗ್ರೆಸ್ ಸೇರ್ಪಡೆ

ಚಾಮರಾಜನಗರ, ನ.15–ತಾಲೂಕಿನ ಜ್ಯೋತಿಗೌಡನಪುರ ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಿತ್ಯಶ್ರೀ ಜೆ.ವಿ.ದೊರೆಸ್ವಾಮಿ, ಮುಖಂಡರಾದ ಬಿ.ಶಂಕರ್ ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಎಸ್. ಗುರುಸ್ವಾಮಿ, ಮಹಮದ್ ಅಸ್ಗರ್ ಕಾಂಗ್ರೆಸ್ ಶಲ್ಯ, ಬಾವುಟ ನೀಡಿ ಪಕ್ಷಕ್ಕೆ ಸ್ವಾಗತಿಸಿದರು. ಎಸ್ಸಿ ವಿಭಾಗ ಜಿಲ್ಲಾಧ್ಯಕ್ಷ ನಲ್ಲೂರು ಸೋಮೇಶ್ವರ್, ಗ್ರಾಪಂ ಸದಸ್ಯ ಎಂ.ಮಹೇಶ್, ಪಕ್ಷದ ಮುಖಂಡರಾದ ಡಿ.ನಾರಾಯಣಸ್ವಾಮಿ ನಲ್ಲೂರು, ಡೇರಿ ಅಧ್ಯಕ್ಷ ಬಿ.ಸುರೇಶ್, ಲಿಂಗರಾಜು, ಕೆಂಪರಾಜು, ಮಹದೇವಯ್ಯ, ಸೋಮೇಶ್ವರ್, ರಂಗಸ್ವಾಮಿ, ಬಸವರಾಜು, ಮಲ್ಲೇಶ್, ನಸ್ರುಲ್ಲ ಖಾನ್, ಚಂದುಕಟ್ಟೆ ಮೋಳೆ ಗಣೇಶ್ ಹಾಜರಿದ್ದರು.

ಒಂದನೇ ಪುಟದಿಂದ

ಅಧಿಕಾರಿಗಳದ್ದೆ ಮಹಾಲೋಪ

ನಡೆಸದೇ ಭೂಪರಿವರ್ತನೆ ಮಾಡಿದ್ದಾರೆ.

ಭೂಪರಿವರ್ತನೆಯಲ್ಲಿ ಮುಖ್ಯಮಂತ್ರಿ ಕುಟುಂಬ ಹಸ್ತಕ್ಷೇಪವಿಲ್ಲ ಅನ್ನೋದು ಸ್ಪಷ್ಟವಾಗಿದೆ. ಮಲ್ಲಿಕಾರ್ಜುನಸ್ವಾಮಿ ಮಾರಾಟ ಮಾಡಿದ ಮೇಲೆ ಅವರ ಕುಟುಂಬಕ್ಕೆ ಭೂಮಿ ಬಂತು. ಮೈಸೂರು ನಗರದ ಪ್ರತಿಷ್ಠಿತ ಬಡಾವಣೆಯಲ್ಲಿ 50:50ರ ಅನುಪಾತದಡಿ 14 ಬಿಡಿ ನಿವೇಶನಗಳನ್ನು ಮುಖ್ಯಮಂತ್ರಿ ಅವರ ಕುಟುಂಬಕ್ಕೆ ನೀಡಿರುವುದರಲ್ಲಿ ಮುಡಾ ಅಧಿಕಾರಿಗಳು ತಪ್ಪು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

ಈ ನಿವೇಶನಗಳ ಪಡೆಯುವ ವೇಳೆ ಮುಖ್ಯಮಂತ್ರಿ ಅವರ ಕುಟುಂಬ ಅಧಿಕಾರ ದುರ್ಬಳಕೆ ಮಾಡಿಕೊಂಡಿದೆಯೇ ಎಂಬ ಬಗ್ಗೆ ಹಿರಿಯ ಅಧಿಕಾರಿಗಳಿಂದ ಮತ್ತಷ್ಟು ಮಾಹಿತಿ ಸಂಗ್ರಹಿಸಬೇಕಿದೆ. ಆದರೆ, ಇದುವರೆಗಿನ ತನಿಖೆಯಲ್ಲಿ ಅವರ ಕುಟುಂಬ ಹಸ್ತಕ್ಷೇಪ ಮಾಡಿರುವ ಮಾಹಿತಿ ಇಲ್ಲ. ನಿವೇಶನಗಳ ಹಂಚಿಕೆ ಸಂದರ್ಭದಲ್ಲಿ ಮುಡಾ ಆಯುಕ್ತರಾಗಿದ್ದ ನಟೇಶ್ ಮತ್ತು ದಿನೇಶ್ ಕುಮಾರ್ ವಿಚಾರಣೆಗೆ ಸಿದ್ಧತೆ ಮಾಡಿಕೊಂಡಿದ್ದೇವೆ. ಮುಖ್ಯಕಾರ್ಯದರ್ಶಿಯವರು ಅನುಮತಿ ನೀಡುತ್ತಿದ್ದಂತೆ ಈ ಇಬ್ಬರು ಅಧಿಕಾರಿಗಳ ವಿಚಾರಣೆ ನಡೆಸಿ, ನ್ಯಾಯಾಲಯ ನೀಡಿರುವ ಗಡುವಿನೊಳಗೆ ಪೂರ್ಣ ವರದಿ ನೀಡುವುದಾಗಿ ಮೈಸೂರು ಎಸ್‌ಪಿ ಅವರು, ಐಜಿ ಅವರಿಗೆ ಮಾಹಿತಿ ನೀಡಿದ್ದಾರೆ.

ಅಯ್ಯಪ್ಪಸ್ವಾಮಿ ಮಂಡಲ ಪೂಜೆ, ದರ್ಶನ ಆರಂಭ

ಎಂದು ತಿಳಿಸಿದ್ದಾರೆ. ಸ್ಥಳದಲ್ಲಿಯೇ ಬುಕ್ಕಿಂಗ್ ಮಾಡಲು ಪಂಪಾ, ಎರುಮೇಲಿ ಮತ್ತು ವಂಡಿ ಪೆರಿಯಾರ್ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಹಲವಾರು ಕೌಂಟರ್‌ಗಳನ್ನು ಸ್ಥಾಪಿಸಲಾಗಿದೆ. ಸ್ಪಾಟ್ ಬುಕ್ಕಿಂಗ್ ಆಯ್ಕೆ ಮಾಡಿಕೊಳ್ಳುವ ಭಕ್ತರು ತಮ್ಮ ಗುರುತಿನ ಆಧಾರ್ ಕಾರ್ಡ್‌ನ್ನು ತೋರಿಸುವುದು ಕಡ್ಡಾಯವಾಗಿದೆ. ಭಕ್ತರಿಗೆ ಹೆಚ್ಚಿನ ಅನುಕೂಲತೆಗಾಗಿ ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಶಬರಿಮಲೆಗೆ ಪ್ರಯಾಣಿಸುವವರಿಗೆ ಆನ್‌ಲೈನ್ ಟಿಕೆಟ್ ಬುಕ್ಕಿಂಗ್ ಮಾಡಲು ಅವಕಾಶ ನೀಡುತ್ತದೆ. ವರ್ಚುವಲ್ ಸರತಿ ವ್ಯವಸ್ಥೆಯ ಮೂಲಕ ದರ್ಶನವನ್ನು ಬುಕ್ ಮಾಡುವಾಗ ಭಕ್ತರು ಕೆಎಸ್‌ಆರ್‌ಟಿಸಿ ಟಿಕೆಟ್‌ಗಳನ್ನು ಖರೀದಿಸಲು ವಿಶೇಷ ಅವಕಾಶ ವನ್ನು ನೀಡಿದೆ. ಇದಲ್ಲದೆ, ಕನಿಷ್ಠ 40 ಜನರ ಗುಂಪು ಹೊಂದಿರುವವರು 10 ದಿನಗಳ ಮುಂಚಿತವಾಗಿ ಟಿಕೆಟ್ ಕಾಯ್ದಿರಿಸುವ ಆಯ್ಕೆಯನ್ನು ಕೂಡ ನೀಡಲಾಗಿದೆ.

ಆಫರ್ ಕೊಟ್ಟವರ ಬಂಧಿಸಿ

ಮಾಡುತ್ತಿದ್ದಾರೆ. ಯಾವ ವಿಚಾರವನ್ನು ವಿಷಯಾಂತರ ಮಾಡಲು ಈಗ ಈ ವಿಚಾರ ಮಾತನಾಡುತ್ತಿದ್ದಾರೆ. ಸಿದ್ದರಾಮಯ್ಯನವರ ಇಂತಹ ಹೇಳಿಕೆ ಬಫೂನ್ ತರಹ ಇದೆ. ಇದನ್ನು ಕೇಳುತ್ತಿದ್ದರೆ ಇವರಿಗೆ ತಲೆ ಕೆಟ್ಟಿದೆ ಎಂದು ಜನರು ಹೇಳುತ್ತಾರೆ ಎಂದರು.

ಈ ಸರ್ಕಾರ ಅತಂತ್ರವಾಗುವ ಕಾಲ ಇನ್ನು ಇದೆ. ನವೆಂಬರ್ 23ರ ಉಪ ಚುನಾವಣೆ ಫಲಿತಾಂಶ ಬಂದ ನಂತರ ಈ ಬಗ್ಗೆ ಚರ್ಚೆ ಮಾಡುತ್ತೇನೆ ಎಂದರು.

ನನ್ನ ಮುಟ್ಟಿದರೆ ಜನರು ದಂಗೆ ಏಳುತ್ತಾರೆ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ವಾಲ್ಮೀಕಿ ಹಗರಣದಲ್ಲಿ 87 ಕೋಟಿ ಲೂಟಿಯಾಗಿದೆ. ಹಾಗಾದರೆ ದೇಶ ಲೂಟಿ ಮಾಡುತ್ತಿರುವ ನಿಮ್ಮನ್ನು ಮುಟ್ಟಬಾರದೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ವಾಲ್ಮೀಕಿ ಹಗರಣದ ಬಗ್ಗೆ ನಡೆಯುತ್ತಿರುವ ಪ್ರಾಸಿಕ್ಯೂಷನ್‌ನಿಂದ ಏನು ಆಗುವುದಿಲ್ಲ. ಈಗಾಗಲೇ ಕೆಂಪಣ್ಣ ಆಯೋಗ ವರದಿ ನೀಡಿ ಇಷ್ಟು ದಿನ ಆಯಿತು. ಅದನ್ನು ಇಟ್ಟುಕೊಂಡು ಪೂಜೆ ಮಾಡುತ್ತಿದ್ದೀರಾ ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ನೈಸ್ ಹಗರಣದ ಬಗ್ಗೆ ಕಾನೂನು ಸಚಿವರ ಸದನ ಸಮಿತಿ ಸಿಬಿಐ ತನಿಖೆ ನಡೆಸಿ ಹಣ ವಸೂಲಿ ಮಾಡುವಂತೆ ವರದಿ ನೀಡಿತ್ತು, ಆದರೆ ಇದರ ತೀರ್ಮಾನ ವೇನಾಯಿತು ಎಂದು ಕೇಳಿದರು.

ಮಾತೆತ್ತಿದರೆ ಸಿಬಿಐ, ಇಡಿ ಕೇಂದ್ರ ಸರ್ಕಾರದ ಕಪಿಮುಷ್ಟಿಯಲ್ಲಿವೆ, ದುರುಪಯೋಗ ಆಗುತ್ತಿವೆ ಎಂದು ಆರೋಪಿಸುತ್ತಾರೆ. ಈಗ ಎಸ್‌ಐಟಿ ಇಟ್ಟುಕೊಂಡು ನೀವೇನು ಮಾಡುತ್ತಿದ್ದೀರಾ ಎಂದು ಪ್ರಶ್ನೆ ಮಾಡಿದರು. ರಾಜ್ಯಪಾಲರ ಕಚೇರಿ ಸರ್ಚ್ ಮಾಡಬೇಕು ಎಂದಿದ್ದ ಅಧಿಕಾರಿ ಬಗ್ಗೆ ಮಾತನಾಡಿದ್ದಕ್ಕೆ ನನ್ನ ವಿರುದ್ಧ ಎಫ್‌ಐಆರ್ ದಾಖಲಿಸಿದ್ದೀರಾ, ರಾಜ್ಯಪಾಲರನ್ನು ಭೇಟಿ ಮಾಡಿದ ವಿರೋಧ ಪಕ್ಷದ ನಾಯಕರು ಹಾಗೂ ನಿಖಿಲ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದೀರಾ. ಇಡಿ, ಸಿಬಿಐ ದುರುಪಯೋಗ ಆಗುತ್ತಿದೆ ಎಂದು ಆರೋಪ ಮಾಡುತ್ತಿರುವ ಈ ಸರ್ಕಾರ ಮಾಡುತ್ತಿರುವುದೇನು ಎಂದು ಕೇಳಿದರು. ನನ್ನ ವಿರುದ್ಧ ಯಾವುದೇ ತನಿಖೆ ಮಾಡಲಿ, ತನಿಖಾ ವರದಿ ಇಟ್ಟುಕೊಂಡು ಪೂಜೆ ಮಾಡಲಿ, ನಾನೇನು ಇವರ ತನಿಖೆಗೆ ಹೆದರುವುದಿಲ್ಲ. ಕಳೆದ 15 ವರ್ಷಗಳಿಂದ ಇದನ್ನೆ ಮಾಡುತ್ತಿದ್ದಾರೆ ಎಂದರು. ನಾವು ನೀಡಿದ ಹೇಳಿಕೆ ವಿರುದ್ಧ ಎಫ್‌ಐಆರ್ ಹಾಕಿಸಿದ್ದೀರಾ. ಕಳೆದ ಸರ್ಕಾರದ ಅವಧಿಯಲ್ಲಿ 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಟೀಕೆ ಮಾಡಿ ಜಾಹಿರಾತು ನೀಡಿದ್ರೆ, ಈ ತನಕ ಆರೋಪವನ್ನು ಸಾಬೀತು ಮಾಡಿದ್ರಾ ಎಂದು ಕೇಳಿದರು.

ಚನ್ನಪಟ್ಟಣ ಉಪ ಚುನಾವಣೆಯಲ್ಲಿ ನಾವು ಗೆಲ್ಲುತ್ತೇವೆ. ಜನರು ನಮಗೆ ಆಶೀರ್ವಾದ ಮಾಡಿದ್ದಾರೆ.

ಪ್ರವೇಶಕ್ಕೆ ಅರಣ್ಯ ಇಲಾಖೆ ನಿರ್ಬಂಧ

ಜಮೀನು ಹೊಂದಿರುವವರಿಗೆ ಸಂಚರಿಸಲು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಕಲಂ 27(1)(ಸಿ) ಅಡಿ ವಿನಾಯಿತಿ ಇದೆ. ಆದರೆ, ಅರಣ್ಯ ಇಲಾಖೆ ಅರ್ಜಿದಾರರ ವಿರುದ್ಧ ಕಾನೂನುಬಾಹಿರ ಆದೇಶ ಹೊರಡಿಸಿದೆ. ಇದು ಸಂವಿಧಾನದ 19 (1)(ಡಿ) ವಿಧಿಗೆ ವ್ಯತಿರಿಕ್ತವಾಗಿದೆ. ಮುಕ್ತಸಂಚಾರಕ್ಕೆ ಅಡ್ಡಿ ಮಾಡಿರುವ ಅರಣ್ಯ ಇಲಾಖೆಯ ಈ ನಿರ್ಬಂಧವನ್ನು ರದ್ದುಗೊಳಿಸಬೇಕು ಎಂದು ಮನವಿ ಮಾಡಿದರು. ಹೈಕೋರ್ಟ್ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕ ಸದಸ್ಯ ಪೀಠದ ಮುಂದೆ ರಾಣಾ ಜಾರ್ಜ್ ಪರ ವಕೀಲರು ಹಾಗೂ ರಾಜ್ಯ ಸರ್ಕಾರದ ಪರ ವಕೀಲರು ವಾದ ಪ್ರತಿವಾದ ಮಂಡಿಸಿದರು. ಈ ವೇಳೆ ಅರಣ್ಯ ಇಲಾಖೆಯ ನಿಯಮಾವಳಿಯಲ್ಲಿ ಜಮೀನಿಗೆ ಹೋಗಲು ಅವಕಾಶ ನೀಡಬೇಕು ಎಂಬ ಬಗ್ಗೆ ಉಲ್ಲೇಖವಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆ, ಅರಣ್ಯ ಇಲಾಖೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ರಾಜ್ಯದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಹೆಡಿಯಾಲ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಇನ್ನು ಮುಂದಿನ ವಿಚಾರಣೆಯನ್ನು ನ.29ಕ್ಕೆ ನಿಗದಿಪಡಿಸಲಾಗಿದೆ.

ನಾಳೆ ಶ್ರೀಕಂಠೇಶ್ವರಸ್ವಾಮಿ ಚಿಕ್ಕಜಾತ್ರಾ ಮಹೋತ್ಸವ

ನಂಜನಗೂಡು, ನ.15– ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ಶ್ರೀಕಂಠೇಶ್ವರಸ್ವಾಮಿ ಅವರ ವೈಭವಯುತ ಚಿಕ್ಕಜಾತ್ರಾ ಮಹೋತ್ಸವ ನ.17 ರಂದು ಬೆಳಗ್ಗೆ 10.45 ರಿಂದ 11.30 ಗಂಟೆಯೊಳಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ನೆರವೇರಲಿದೆ.

ಜಾತ್ರಾ ಮಹೋತ್ಸವದಲ್ಲಿ ಮೊದಲು ಗಣಪತಿ ಮತ್ತು ಚಂಡಿಕೇಶ್ವರ, ನಂತರ ಪಾರ್ವತಿ ಸಮೇತ ಶ್ರೀಕಂಠೇಶ್ವರ, ಮನೋನ್ಮಣಿ ಅಮ್ಮನವರ ರಥಗಳು ರಥ ಬೀದಿಯಲ್ಲಿ ಚಲಿಸಲಿವೆ.



ಚಿಕ್ಕ ಜಾತ್ರಾ ಮಹೋತ್ಸವ ಅಂಗವಾಗಿ ಅಂದು ದೇವಾಲಯದಲ್ಲಿ ಬೆಳಗ್ಗೆಯಿಂದಲೇ ಶ್ರೀಕಂಠೇಶ್ವರಸ್ವಾಮಿ ಅವರಿಗೆ ವಿವಿಧ ಧಾರ್ಮಿಕ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಲಾಗುತ್ತದೆ. ಮೊದಲಿಗೆ ಏಕ ದಶಾವರ ರುದ್ರಾಭಿಷೇಕ, ಕ್ಷೀರಾಭಿಷೇಕ, ರತ್ನಾಭಿಷೇಕ, ಫಲಪಂಚಾಮೃತಾ ಭಿಷೇಕ, ಗಣಪತಿ ಪೂಜೆ, ನವಗ್ರಹ ಪೂಜೆಗಳು ಜರುಗಿದ ನಂತರ ವಿಶೇಷವಾಗಿ ಬಣ್ಣ ಬಣ್ಣದ ಬಾವುಟಗಳಿಂದ ಸಿಂಗರಿದ ರಥದಲ್ಲಿ ವಜ್ರ, ವೈಡೂರ್ಯ ಖಚಿತ ಪಾರ್ವತಿ ಸಮೇತ ಶ್ರೀಕಂಠೇಶ್ವರಸ್ವಾಮಿ ಅವರನ್ನು ಪ್ರತಿಷ್ಠಾಪಿಸಲಾಗುತ್ತದೆ. ಬಳಿಕ ಬಗೆ ಬಗೆಯ ಹೂಗಳಿಂದ ವಿಶೇಷವಾಗಿ ಅಲಂಕರಿಸಲಾಗುವುದು. ನಿಗದಿತ ಸಮಯದಲ್ಲಿ ಅರ್ಚಕ ವೃಂದ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿದ ಬಳಿಕ, ವೇದ ಘೋಷಗಳ ಜೊತೆಗೆ ಮಹಾಮಂಗಳಾರತಿ ಈಡುಗಾಯಿ ಒಡೆದು ರಥೋತ್ಸವಕ್ಕೆ ಚಾಲನೆ ನೀಡಲಾಗುವುದು. ಈ ವೇಳೆ ಸಾವಿರಾರು ಭಕ್ತರು ಹಗ್ಗವನ್ನು ಹಿಡಿದು ಜೈ ಶ್ರೀಕಂಠ, ಜೈ ನಂಜುಂಡ, ಜೈ ಪಾರ್ವತಿದೇವಿ ಎಂಬ ಘೋಷಣೆ ಕೂಗುತ್ತಾ ರಥ ಎಳೆಯುವ ಮೂಲಕ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸುವರು.

ಅಂದು ಸಂಜೆ ಹಂಸಾರೋಹಣ, ನಟೇಶೋತ್ಸವ ನಡೆಯಲಿದೆ. ನ.18 ರಂದು ಮೃಗಯಾತ್ರಾ ಪೂರ್ವಕ ಅಶ್ವಾರೋಹಣ, ನಂತರ ನಂತರ ಮಹಾಭೂತ ರೋಹಣೋತ್ಸವ, ದೇವಿ ಪ್ರಣಯ ಕಲಹ ಸಂಧಾನೋತ್ಸವ ಕಾರ್ಯಕ್ರಮಗಳು ಜರುಗಲಿವೆ. ನ.19ರಂದು ಬೆಳಗ್ಗೆ ಹಗಲು ಚೂರ್ಣೋತ್ಸವ ಪೂರ್ವಕ ಅವಭೃತ ತೀರ್ಥಸ್ನಾನ, ನಂತರ ರಾತ್ರಿ 7 ಗಂಟೆಗೆ ಕಪಿಲಾ ನದಿ ತೀರದ ತೇಲುವ ತೇವಾಲಯದಲ್ಲಿ ಪಾರ್ವತಿ ದೇವಿ ಸಮೇತ ಶ್ರೀಕಂಠೇಶ್ವರ ಸ್ವಾಮಿಯವರ ತೆಪ್ಪೋತ್ಸವವು ನಡೆಯಲಿವೆ. ನ.20 ರಂದು ಪುಷ್ಪಯಾಗಪೂರ್ವಕ ಪಂಚೋಪಚಾರ ಪೂರ್ವಕ ಕೈಲಾಸಯಾನಾ ರೋಹಣೋತ್ಸವ, ನ.21ರಂದು ಮಹಾಸಂಪ್ರೋಕ್ಷಣೆ ನಂದಿವಾಹನ ಉತ್ಸವ ಮತ್ತು ರಾತ್ರಿ ಶಯಾನೋತ್ಸವದೊಂದಿಗೆ ಚಿಕ್ಕಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಗಂಧನಹಳ್ಳಿಯನ್ನು ಹೋಬಳಿ ಕೇಂದ್ರ ಮಾಡಲು ಕ್ರಮ

ಶಾಸಕ ಡಿ.ರವಿಶಂಕರ್ ಭರವಸೆ



ಶಾಸಕ ಡಿ.ರವಿಶಂಕರ್ ಗ್ರಾಪಂ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ಕೆ.ಆರ್.ನಗರ, ನ.15– ಗ್ರಾಮಸ್ಥರ ಬೇಡಿಕೆಯಂತೆ ಗಂಧನಹಳ್ಳಿಯನ್ನು ಹೋಬಳಿ ಕೇಂದ್ರ ಮಾಡಲು ಕ್ರಮ ವಹಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ಭರವಸೆ ನೀಡಿದರು.

ತಾಲೂಕಿನ ಗಂಧನಹಳ್ಳಿ ಗ್ರಾಮದಲ್ಲಿ ಗ್ರಾಪಂ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ನನಗೆ ರಾಜಕೀಯ ಶಕ್ತಿ ತುಂಬಿರುವ ಗಂಧನಹಳ್ಳಿ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಈ ಹಿಂದೆ ಸುಮಲತಾ ಅವರು ಸಂಸದರಾಗಿದ್ದ ವೇಳೆ ಗ್ರಾಮ ಸಡಕ್ ಯೋಜನೆಯಡಿ ಹಾಸನ– ಮೈಸೂರು ಹೆದ್ದಾರಿಯಿಂದ ಗಂಧನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಪಡಿಸಲಾಗಿತ್ತು. ಗ್ರಾಮದ ಕನಕ ಭವನದ ಕಾಮಗಾರಿ ಪೂರ್ಣಗೊಳ್ಳಲು ಅಗತ್ಯ ಅನುದಾನವನ್ನು ಸರ್ಕಾರದಿಂದ ಕೊಡಿಸಿ ಉದ್ಘಾಟಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಗ್ರಾಮದ ಮಧ್ಯ ಭಾಗದಲ್ಲಿರುವ ಎಂಎಸ್ಐಎಲ್ ಮದ್ಯದಂಗಡಿಯನ್ನು ಗ್ರಾಮದಿಂದ ಹೊರವಲಯಕ್ಕೆ ಸ್ಥಳಾಂತರಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದು, ಈಗಾಗಲೇ ಇಲಾಖೆಗೆ ಪತ್ರ ಬರೆಯಲಾಗಿದೆ ಸದ್ಯದಲ್ಲೇ ಸ್ಥಳಾಂತರವಾಗಲಿದೆ ಎಂದರು.

ಗಂಧನಹಳ್ಳಿಯಲ್ಲಿ ಪೌತಿ ಖಾತೆ ಆದಾಲತ್ ನಡೆಸಿ ಬಾಕಿ ಇರುವ ಎಲ್ಲಾ ಪೌತಿ ಖಾತೆಗಳನ್ನು ಮಾಡಿ ಕೊಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗಿದ್ದು, ಶೀಘ್ರ ಗ್ರಾಮಕ್ಕೆ ಭೇಟಿ ನೀಡಲಿದ್ದಾರೆ ಎಂದರು.

ಈ ವೇಳೆ ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ, ಗ್ರಾಪಂ ಅಧ್ಯಕ್ಷೆ ಮಹದೇವಿ, ಉಪಾಧ್ಯಕ್ಷ ಆನಂದ್, ಸದಸ್ಯರಾದ ಸಣ್ಣದೊಡ್ಡೇಗೌಡ, ಜಯರಾಮೇಗೌಡ, ರಾಜೇಗೌಡ, ಲೋಕೇಶ್, ಜಿ.ಸಿ.ಸತೀಶ್, ರಾಜಮ್ಮ, ಸುಲೋಚನ, ತಾರಾ, ಭಾಗಮ್ಮ, ಕುಮಾರ್, ರುಕ್ಮಿಣಿ, ಮಂಗಳ, ಜಿಪಂ ಮಾಜಿ ಸದಸ್ಯ ಜಿ.ಆರ್. ರಾಮೇಗೌಡ, ತಾಪಂ ಮಾಜಿ ಸದಸ್ಯ ಜಿ.ಎಸ್.ಮಂಜುನಾಥ್, ಮುಖಂಡರಾದ ಜಿ.ಎಸ್.ವೆಂಕಟೇಶ್, ಜಿ.ಎನ್. ರಘು, ಪ್ರೇಮಾ, ಜಿ.ಆರ್. ಕೃಷ್ಣೇಗೌಡ, ದೇವೇಂದ್ರ, ಗುತ್ತಿಗೆದಾರರಾದ ಎಸ್. ರಾಮು, ಸತೀಶ್, ಪಿಡಿಓ ಚಂದ್ರಶೇಖರ್, ಕಾರ್ಯದರ್ಶಿ ಶೋಭಾ ಇದ್ದರು.

ಕಾರ್ತಿಕ ಮಾಸದ ಜಾತ್ರಾ ಮಹೋತ್ಸವ



ಹೆಚ್.ಡಿ.ಕೋಟೆ, ನ.15– ತಾಲೂಕಿನ ಕಣಿಯನಹುಂಡಿ ಹೊಸೂರು ಗ್ರಾಮದ ಕಾರ್ಗಳ್ಳಿ ಬಸವೇಶ್ವರ ದೇವಸ್ಥಾನದಲ್ಲಿ 8ನೇ ವರ್ಷದ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವ ನ.18 ರಂದು ನಡೆಯಲಿದೆ.

ಅಂದು ಮುಂಜಾನೆ ಗಣಪತಿ ಹೋಮ, 9 ಗಂಟೆಗೆ ಹೆಣ್ಣು ಮಕ್ಕಳಿಂದ ಕುಂಭ ಕಳಸ ತಂದು, 10 ಗಂಟೆಗೆ ಅನ್ನಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಾರ್ತಿಕ ಮಾಸದ ಜಾತ್ರಾ ಮಹೋತ್ಸವಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ದೇವಸ್ಥಾನದ ಕಮಿಟಿ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಕನಹಳ್ಳಿ ಗ್ರಾಮ ಪಂಚಾಯಿತಿಗೆ ಎನ್.ರೇಣುಕಾ ಅಧ್ಯಕ್ಷೆ

ತಿ.ನರಸೀಪುರ, ನ.15– ತಾಲೂಕಿನ ಅಂಕನಹಳ್ಳಿ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಿ ಕೆಂಪೇಗೌಡನ ಕೊಪ್ಪಲು ಗ್ರಾಮದ ಎನ್.ರೇಣುಕಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷ ಎನ್. ಶಿವಮಾದಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಗ್ರಾಪಂ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಎನ್.ರೇಣುಕಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯೂ ಆದ ನೀರಾವರಿ ಇಲಾಖೆ ಎಇಇ ಬಿ.ಜೆ.ಶಾಂತಕುಮಾರ್ ಪ್ರಕಟಿಸಿದರು. ಸಹ ಚುನಾವಣಾಧಿಕಾರಿಯಾಗಿ ಕೆಂಡಗಣ್ಣಸ್ವಾಮಿ ಕರ್ತವ್ಯ ನಿರ್ವಹಿಸಿದರು. ಅಧ್ಯಕ್ಷರ ಅವಿರೋಧ ಆಯ್ಕೆಯಾಗುತ್ತಿದ್ದಂತೆ ಗ್ರಾಪಂ ಎದುರು ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಚುನಾವಣೆ ಸಭೆಗೆ ಉಪಾಧ್ಯಕ್ಷೆ ಜ್ಯೋತಿ, ನಿಕಟಪೂರ್ವ ಅಧ್ಯಕ್ಷ ಎನ್.ಶಿವಮಾದಯ್ಯ, ಸದಸ್ಯರಾದ ಎಂ.ಸಿ.ಸವಿತಾ, ಪುಟ್ಟಸ್ವಾಮಿ, ಹೊಂಬಮ್ಮ, ಎನ್.ನಿಂಗಯ್ಯ, ನಾಗರತ್ನಮ್ಮ, ಎನ್.ಸಂಗೀತಾ, ಕೆ.ಎಸ್.ನಾಗರಾಜು, ಡಿ.ಆರ್.ಪುಷ್ಪ, ಸವಿತಾ, ಡಿ.ಎಂ.ಚನ್ನಮ್ಮ, ಡಿ.ಎಂ.ಸೋಮಶೇಖರ್, ಮಹೇಶ್, ಶಿವಮ್ಮ ಹಾಜರಾದರೆ ಸದಸ್ಯೆ ಟಿ.ಸಿ.ಜಯಲಕ್ಷ್ಮಿ, ಶಿವಮ್ಮ, ಡಿ.ಆರ್.ಶಂಕರ್ ಕುಮಾರ್ ಗೈರಾಗಿದ್ದರು.



ಅಂಕನಹಳ್ಳಿ ಗ್ರಾಪಂ ನೂತನ ಅಧ್ಯಕ್ಷೆ ಎನ್.ರೇಣುಕಾ ಅವರನ್ನು ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ ಅಭಿನಂದಿಸಿದರು.

ನೂತನ ಅಧ್ಯಕ್ಷೆಯನ್ನು ಅಭಿನಂದಿಸಿ ಮಾತನಾಡಿದ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ, ಪಂಚಾಯಿತಿಯಲ್ಲಿ ಯಾವುದೇ ಪೈಪೋಟಿಗೆ ಅವಕಾಶ ನೀಡದೇ ಒಮ್ಮತದಿಂದ ಅಧ್ಯಕ್ಷರ ಆಯ್ಕೆ ಮಾಡಲಾಗಿದೆ. ಇಲ್ಲಿ ಯಾರೇ ಅಧ್ಯಕ್ಷರಾದರೂ ಗ್ರಾಪಂ ವ್ಯಾಪ್ತಿಗೊಳಪಡುವ ಗ್ರಾಮಗಳ ಅಭಿವೃದ್ಧಿಗೆ ಒತ್ತುಕೊಟ್ಟು ಕೆಲಸ ಮಾಡುವ ಪರಿಪಾಠ ಅನುಸರಿಸಲಾಗುತ್ತದೆ. ಈಗಾಗಲೇ ಗ್ರಾಪಂನಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸ ಮಾಡಲಾಗಿದೆ. ಪಂಚಾಯತ್ ವ್ಯವಸ್ಥೆ ಬಂದ ಮೇಲೆ ನಿರೀಕ್ಷೆಗೂ ಮೀರಿದ ಅನುಕೂಲ ದೊರಕಿದೆ. ಅದರಲ್ಲೂ ಮಹಿಳಾ ಸದಸ್ಯರು ತಮಗೆ ದೊರಕಿದ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುತ್ತಿದ್ದು, ಇದೇ ರೀತಿ ಅಭಿವೃದ್ಧಿ ಕಾರ್ಯಗಳು ನಿರಂತರವಾಗಿ ನಡೆಯಲಿ ಎಂದರು.

ಕಾಂಗ್ರೆಸ್ ಮುಖಂಡ ಸ್ವಾಮಿಗೌಡ ಮಾತನಾಡಿ, ಕಳೆದ 30 ವರ್ಷಗಳಿಂದಲೂ ಗ್ರಾಪಂ ಅಧಿಕಾರ ಕಾಂಗ್ರೆಸ್ ಪಾಲಾಗುತ್ತಿದೆ. ಈಗ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರು ಅಧಿಕಾರದಲ್ಲಿರುವುದರಿಂದ ಪಂಚಾಯಿತಿಗೆ ಇನ್ನೂ ಹೆಚ್ಚಿನ ಅನುದಾನ ತಂದು ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುತ್ತದೆ ಎಂದರು.

ಈ ವೇಳೆ ಎಪಿಎಂಸಿ ಮಾಜಿ ಸದಸ್ಯ ಕೆ.ಸಿ.ಮಹದೇವು, ಗ್ರಾಪಂ ಮಾಜಿ ಅಧ್ಯಕ್ಷ ಮಲ್ಲೇಶ್, ಡೈರಿ ಅಧ್ಯಕ್ಷ ಕೆ.ಸಿ.ಶಿವಶಂಕರ್, ಕೆ.ಸಿದ್ದಯ್ಯ, ಎಂ.ಎಸ್.ಮಹೇಶ್, ಎಂ.ಎಂ.ಮಹದೇವು, ಅಂಕನಹಳ್ಳಿ ಮಹದೇವು, ಪುರುಷೋತ್ತಮ, ಗುತ್ತಿಗೆದಾರರಾದ ಡಿ.ಸಿ.ಜಯರಾಂ, ಕೆ.ರಾಮಕೃಷ್ಣ, ರಮೇಶ್, ಮಂಚಲಿಂಗೇಗೌಡ, ಡಿ.ಬಿ.ಶಿವಕುಮಾರ್, ಅಂಕನಹಳ್ಳಿ ಕರಿಪುಟ್ಟಯ್ಯ, ವೆಂಕಟೇಗೌಡ, ಹೆಚ್.ಮಹದೇವು, ಪಿಡಿಓ ಸಂತೋಷ್ ಕುಮಾರ್ ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಕಾರು ಡಿಕ್ಕಿ: ಮಹಿಳೆ ಸಾವು

ನಂಜನಗೂಡು, ನ.15– ರಸ್ತೆ ಬದಿ ನಡೆದುಕೊಂಡು ಹೋಗುತ್ತಿದ್ದವರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸಾವನ್ನಪ್ಪಿ, ಐವರು ಗಾಯಗೊಂಡಿರುವ ಗಟನೆ ಗುರುವಾರ ತಾಲೂಕಿನ ದೊಡ್ಡಕವಲಂದೆ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಹನುಮನಪುರ ಗ್ರಾಮದ ನಿವಾಸಿ ಲಕ್ಷ್ಮಣ ಅವರ ಪತ್ನಿ ಮಂಜುಳಾ(32) ಸಾವನ್ನಪ್ಪಿದ್ದು, ಈಕೆಯ ಪತಿ ಲಕ್ಷ್ಮಣ, ಪುತ್ರಿ ಸಿಂಧು, ಚಾಮರಾಜನಗರ ತಾಲೂಕಿನ ಉತ್ತರಹಳ್ಳಿ ಗ್ರಾಮದ ಶಿವಮಲ್ಲು, ರಾಮಸಮುದ್ರ ಗ್ರಾಮದ ರಾಜಪ್ಪ, ತಾಲೂಕಿನ ದೊಡ್ಡ ಕವಲಂದೆ ಗ್ರಾಮದ ನೆಹರು ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಲಕ್ಷ್ಮಣ ಅವರು ಪತ್ನಿ ಮಂಜುಳಾ, ಪುತ್ರಿ ಸಿಂಧು ಜೊತೆಗೆ ದೊಡ್ಡ ಕವಲಂದೆ ಗ್ರಾಮದ ಕಾರ್ಪೊರೇಷನ್ ಬ್ಯಾಂಕ್‌ಗೆ ಆಗಮಿಸಿ ಕೆಲಸ ಮುಗಿಸಿಕೊಂಡು ಚಾಮರಾಜನಗರ ಮುಖ್ಯ ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ವೇಳೆ ನಂಜನಗೂಡು ಕಡೆಯಿಂದ ಅತೀ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಈ ವೇಳೆ ಮಂಜುಳಾ ಅವರ ಹೊಟ್ಟೆಯ ಮೇಲೆ ಕಾರು ಹರಿದ ಪರಿಣಾಮ ಆಕೆ ಸ್ಥಳದಲ್ಲೇ ಸಾವನ್ನಪ್ಪಿದ್ದು, ಗಾಯಗೊಂಡ ಪತಿ ಲಕ್ಷ್ಮಣ ಮತ್ತು ಪುತ್ರಿ ಸಿಂಧು, ರಾಜಪ್ಪ, ಶಿವಮಲ್ಲು, ನೆಹರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕವಲಂದೆ ಠಾಣೆ ಎಸ್ಐ ಕೃಷ್ಣಕಾಂತ ಕೋಳಿ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ ಕಾರು ಹಾಗೂ ಚಾಲಕನನ್ನು ವಶಕ್ಕೆ ಪಡೆದಿದ್ದಾರೆ. ಬಳಿಕ ಶವದ ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸರಗೂರು: 4ನೇ ವಾರ್ಡ್‌ಗೆ ಚಂದ್ರಕಲಾ ಸದಸ್ಯೆ



ಸರಗೂರು ಪಪಂ 4ನೇ ವಾರ್ಡ್ ನೂತನ ಸದಸ್ಯೆ ಚಂದ್ರಕಲಾ ಅವರಿಗೆ ಚುನಾವಣಾಧಿಕಾರಿ ಪ್ರಮಾಣ ಪತ್ರ ವಿತರಿಸಿದರು.

ಸರಗೂರು, ನ.15– ಪಟ್ಟಣ ಪಂಚಾಯಿತಿ 4ನೇ ವಾರ್ಡ್ ನೂತನ ಸದಸ್ಯೆಯಾಗಿ ಚಂದ್ರಕಲಾ ರಾಜಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

4ನೇ ವಾರ್ಡ್ ಸದಸ್ಯ ಎಸ್.ಎಲ್. ರಾಜಣ್ಣ ನಿಧನರಾದ ಹಿನ್ನೆಲೆಯಲ್ಲಿ ಉಪ ಚುನಾವಣೆ ಘೋಷಿಸಿತ್ತು. ಈ ಸ್ಥಾನಕ್ಕೆ ಚಂದ್ರಕಲಾ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಪುರುಷೋತ್ತಮ್ ಅವಿರೋಧ ಆಯ್ಕೆಯನ್ನು ಘೋಷಿಸಿ ಪ್ರಮಾಣ ಪತ್ರ ನೀಡಿದರು. ಈ ವೇಳೆ ನೆರೆದಿದ್ದ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಚಂದ್ರಕಲಾ ಅವರನ್ನು ಅಭಿನಂದಿಸಿ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ತಾಲೂಕು ಕಾಂಗ್ರೆಸ್ ಅಧ್ಯಕ್ಷ ನಾಗರಾಜು ಮಾತನಾಡಿ, ಶಾಸಕ ಅನಿಲ್ ಅವರು 4ನೇ ವಾರ್ಡ್ ಸದಸ್ಯ ಎಸ್.ಎಲ್.ರಾಜಣ್ಣ ಅವರು ನಿಧನರಾದ ಹಿನ್ನೆಲೆಯಲ್ಲಿ ಅವರ ಸ್ಥಾನಕ್ಕೆ ಅವರ ಪತ್ನಿ ಚಂದ್ರಕಲಾ ಅವರಿಗೆ ಟಿಕೆಟ್ ನೀಡಿ ಗೆಲ್ಲಿಸುವಂತೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಿಗೆ ತಿಳಿಸಿದ್ದರು. ಅದರಂತೆ ಚಂದ್ರಕಲಾ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆಯಾಗಿದ್ದಾರೆ. ತಾಲೂಕಿನ ಪರವಾಗಿ ಶಾಸಕರಿಗೆ, 4ನೇ ವಾರ್ಡ್ ಸಾರ್ವಜನಿಕರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಈ ವೇಳೆ ಪಪಂ ಸದಸ್ಯರಾದ ಶ್ರೀನಿವಾಸ್, ಚೆಲುವಕೃಷ್ಣ, ಅಕ್ರಮ ಸಕ್ರಮ ಸಮಿತಿ ಸದಸ್ಯ ಶಿವಶಂಕರ್, ಪ್ರಥಮ ದರ್ಜೆ ಗುತ್ತಿಗೆದಾರ ಎಸ್.ಎಸ್.ಬಸವರಾಜು, ಕಾಂಗ್ರೆಸ್ ತಾಲೂಕು ಪ್ರಧಾನ ಕಾರ್ಯದರ್ಶಿ ಚೆಲುವರಾಜು, ಮುಖಂಡರಾದ ಭೈರಲಿಂಗಯ್ಯ, ಲೋಡರ್ಸ್ ಸಂಘದ ಮಾಜಿ ಅಧ್ಯಕ್ಷ ಗೋಪಾಲ್, ಚೆನ್ನಯ್ಯ, ಗೋಪಾಲ್, ಬಿಲ್ಲಯ್ಯ, ವೆಂಕಟಪ್ಪ, ಜವರಾಜಪ್ಪ, ದೊಡ್ಡಭೈರ, ರಂಗಸ್ವಾಮಿ, ರಾಜು, ಗೋಪಾಲ ಸಿದ್ದರಾಜು, ರಾಜು, ಸಿದ್ದಲಿಂಗಪ್ಪ ನಾಗರಾಜು, ಪಾಟೀಲ್ ಇದ್ದರು.

ಮಣ್ಣಿನ ಸಂರಕ್ಷಣೆ, ಹೈನುಗಾರಿಕೆ ಕಾರ್ಯಾಗಾರ

ಹುಣಸೂರು, ನ.15– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ವತಿಯಿಂದ ತಾಲೂಕಿನ ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯ ಸೋನಹಳ್ಳಿಯ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ ಮಣ್ಣಿನ ಸಂರಕ್ಷಣೆ, ಹೈನುಗಾರಿಕೆ, ಅರಣ್ಯ ಕೃಷಿ ಕುರಿತ ಒಂದು ದಿನದ ರೈತ ಕೃಷಿ ಕ್ಷೇತ್ರ ಪಾಠಶಾಲೆ ಕಾರ್ಯಾಗಾರವನ್ನು ಪ್ರಗತಿಪರ ಅರಗು ಸಾವಯವ ಕೃಷಿಕ ಚೆಲುವರಾಜು, ಡೈರಿ ಅಧ್ಯಕ್ಷ ಭಾಗ್ಯಮ್ಮ ಉದ್ಘಾಟಿಸಿದರು.



ಕಾರ್ಯಕ್ರಮದಲ್ಲಿ ಪ್ರಗತಿಪರ ಅರಗು ಸಾವಯವ ಕೃಷಿಕ ಚೆಲುವರಾಜು ಮಾತನಾಡಿದರು.

ಸಾವಯವ ಕೃಷಿಕ ಚೆಲುವರಾಜು ಮಾತನಾಡಿ, ಮಣ್ಣು, ತಾಯಿ, ಪ್ರಕೃತಿ ಈ ಮೂವರು ಇದ್ದರೆ ಮಾತ್ರ ಈ ಭೂಮಿ ಮೇಲೆ ನಮಗೆ ಜೀವಿಸಲು ಸಾಧ್ಯ. ನಾವು ಯಾವುದೇ ಕೃಷಿ ಮಾಡುವ ಮೊದಲು ಮಣ್ಣಿನ ಪರೀಕ್ಷೆ ಮಾಡುವುದು ಒಳಿತು. ಪ್ರಸ್ತುತ ಭೂಮಿಗೆ ಬೇಕಾಗುವ ಒಳ್ಳೆಯ ಗೊಬ್ಬರ, ನೀರು, ವಾತಾವರಣ ಇಲ್ಲ. ನಾವುಗಳು ಕೃಷಿ ಅವಲಂಬಿಸಿ ಭೂಮಿ ತಾಯಿಗೆ ಗೊಬ್ಬರದ ಮೂಲಕ ವಿಷ ಹಾಕುತ್ತಿದ್ದೇವೆ. ಅದೇ ವಿಷ ಆಹಾರ ತಿನ್ನುವ ನಮಗೂ, ಪ್ರಾಣಿ ಪಕ್ಷಿಗಳಿಗೂ ನಾನಾ ರೀತಿಯ ಕಾಯಿಲೆ ಬರಲು ಸಾಧ್ಯವಿದೆ. ರೈತರು ಯಾವುದೇ ಕೃಷಿ ಅವಲಂಬಿಸಿ ಅದಕ್ಕೆ ಬೇಕಾಗುವಷ್ಟು ಕೊಟ್ಟಿಗೆ, ಸೊಪ್ಪು, ಸಾವಯವ ಗೊಬ್ಬರಗಳನ್ನು ಬಳಸುತ್ತಿಲ್ಲ. ವಿಷಪೂರಿತ ಗೊಬ್ಬರಗಳನ್ನು ಬಳಸುವುದರಿಂದ ಭೂಮಿ ಹಾಳಾಗುವುದು ಮತ್ತು ಬರ, ಪ್ರಕೃತಿ ವಿಕೋಪ, ಬೆಳೆ ನಷ್ಟ, ಪರಿಸರ ನಾಶ, ರೈತರ ಆರೋಗ್ಯ ಹಾಳಾಗಿ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗುವುದಿಲ್ಲ. ಹಾಗಾಗಿ ರೈತರು ಯಾವುದೇ ಕೃಷಿ ಮಾಡುವುದಕ್ಕೆ ಮುಂಚೆ ಮಣ್ಣಿನ ಪರೀಕ್ಷೆ ಮಾಡುವುದು ಒಳ್ಳೆಯದು ಎಂದರು.

ಮೇಲ್ವಿಚಾರಕಿ ನಜೀಮಾ ಮಾತನಾಡಿ, ಸಂಘದಲ್ಲಿ ದೊರೆಯುವ ಸಾಲ ಸೌಲಭ್ಯ, ಹಣದ ಹೂಡಿಕೆ, ಸುಲಭ ಕಂತುಗಳ ಬಗ್ಗೆ ತಿಳಿಸಿದರು.

ಕೃಷಿ ಮೇಲ್ವಿಚಾರಕ ಶಿವಶಂಕರ್ ಮಾತನಾಡಿ, ಸಂಸ್ಥೆಯಿಂದ ಸಿಗಬಹುದಾದ ಕೃಷಿ, ಸ್ವಯಂ ಉದ್ಯೋಗ, ಅಪಘಾತ ವಿಮೆ, ಜೀವ ವಿಮೆ ತರಬೇತಿಗಳು ಮುಂತಾದವುಗಳ ಬಗ್ಗೆ ವಿಶ್ಲೇಷಣೆ ನೀಡಿದರು. ಸಂಘದ ಸೇವಾ ಪ್ರತಿನಿಧಿ ವಿನುತ ಹಾಗೂ ಆ ಭಾಗದ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸನ್ಮಾನ




ಹೆಚ್.ಡಿ.ಕೋಟೆ ಪಟ್ಟಣದ ಜೂನಿಯರ್ ಕಾಲೇಜು ಆವರಣದಲ್ಲಿ ನಡೆದ ಶ್ರೀವಾಲ್ಮೀಕಿ ಜಯಂತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಅನಿಲ್ ಅವರನ್ನು ಮೈಮುಲ್ ನಿರ್ದೇಶಕ ಈರೇಗೌಡ ಸನ್ಮಾನಿಸಿದರು. ಈ ವೇಳೆ ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ಮುಖಂಡರಾದ ಗಿರಿಗೌಡ, ಗಣೇಶ, ಭಾಸ್ಕರ್, ರವಿ, ಸೋಮೇಶ್ ಇನ್ನಿತರರಿದ್ದರು.

ಶ್ರೀರಾಮನ ಚರಿತ್ರೆ ವಿಶ್ವಕ್ಕೆ ಸಾರಿದ ಶ್ರೀಮಹರ್ಷಿ ವಾಲ್ಮೀಕಿ

ವಾಲ್ಮೀಕಿ ಜಯಂತಿಯಲ್ಲಿ ಶಾಸಕ ದರ್ಶನ್ ಅಭಿಪ್ರಾಯ

ಮಲ್ಕುಂಡಿ, ನ.15– ಶ್ರೀರಾಮನ ಚರಿತ್ರೆಯನ್ನು ವಿಶ್ವಕ್ಕೆ ಸಾರಿದ ಮಹಾನ್ ನಾಯಕ ಶ್ರೀಮಹರ್ಷಿ ವಾಲ್ಮೀಕಿ ಅವರ ಆದರ್ಶ ಗುಣಗಳು ಪ್ರಜಾಪ್ರಭುತ್ವಕ್ಕೆ ಬಹುಮುಖ್ಯವಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.



ಕಾರ್ಯಕ್ರಮವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ಸಮೀಪದ ಹುರ ಗ್ರಾಮದಲ್ಲಿ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಾಲ್ಮೀಕಿ ಸಮಾಜದ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳನ್ನು ಪ್ರತಿಯೊಬ್ಬರೂ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಆರ್ಥಿಕ ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಬೇಕು. ಸಮಾಜದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವ ಮೂಲಕ ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ ಎಂದರು.

ಸರ್ಕಾರಿ ಸೌಲಭ್ಯ ಪಡೆಯಲು ಯಾವುದೇ ಜಾತಿಭೇದ ಮಾಡಬೇಡಿ. ಸಮಾಜಕ್ಕೆ ನಾವೆಲ್ಲರೂ ಒಂದೇ ಎಂಬ ಸಂದೇಶ ವಾಲ್ಮೀಕಿ ಸಮುದಾಯ ಸಾರಬೇಕು. ಎಲ್ಲರನ್ನೂ ಒಗ್ಗೂಡಿಸುವ ಮೂಲಕ ಯಾವುದೇ ಭಿನ್ನಾಭಿಪ್ರಾಯ ಬಾರದಂತೆ ನೋಡಿಕೊಳ್ಳುವುದು ಎಲ್ಲರ ಜವಾಬ್ದಾರಿಯಾಗಿದೆ. ಗ್ರಾಮದ ಎಲ್ಲಾ ನಾಯಕ ಸಮಾಜದವರನ್ನು ಒಟ್ಟಾಗಿ ಕರೆದೊಯ್ಯುವ ಜವಾಬ್ದಾರಿ ಇರಬೇಕು. ಶ್ರೀಮಹರ್ಷಿ ವಾಲ್ಮೀಕಿ ಅವರ ರಾಮಾಯಣದಲ್ಲಿ ಹೆಚ್ಚು ರೂಪಕ ಅಲಂಕಾರ ಬಳಕೆಯಾಗಿರುವುದರಿಂದ ಕಾಳಿದಾಸ ಕವಿ ಮಹರ್ಷಿ ವಾಲ್ಮೀಕಿ ಅವರನ್ನು ಕವಿಕುಲ ಚಕ್ರವರ್ತಿ ಎಂಬುದಾಗಿಯೋ ವರ್ಣಿಸಿದ್ದಾರೆ. ಅಲ್ಲದೇ ಜಗತ್ತಿನ ಶ್ರೇಷ್ಠ ವಿಮರ್ಶಕ ಥಾಮಸ್ ಪ್ರಕಾರ ವಾಲ್ಮೀಕಿ ರಾಮಾಯಣ ಜಗತ್ತಿನ ಶ್ರೇಷ್ಠ ಕಾವ್ಯ ಸಂಪತ್ತು ಎಂದು ತಿಳಿಸಿದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಮುಖಂಡರಾದ ಸುಬ್ಬಣ್ಣ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ನಾಯಕ ಸಂಘದ ತಾಲೂಕು ಅಧ್ಯಕ್ಷ ಬಂಗಾರನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ದೇಬೂರು ಅಶೋಕ್, ಗ್ರಾಪಂ ಅಧ್ಯಕ್ಷೆ ತಾಯಮ್ಮ, ನಾಯಕ ಯುವ ಸೈನ್ಯ ರಾಜ್ಯಾಧ್ಯಕ್ಷ ದೇವರಾಜ್, ಭೂಮಾಪನ ಇಲಾಖೆಯ ಗಣೇಶ್, ದೊರೆಸ್ವಾಮಿ ನಾಯಕ, ಜಯರಾಂ, ಜವರನಾಯಕ, ವಣಕಾರನಾಯಕ, ಅಭಿನಂದನ್ ಪಾಟೀಲ್, ಗ್ರಾಪಂ ಸದಸ್ಯ ದೇವನಾಯಕ, ನಾಗನಾಯ್ಕ, ಶ್ರೀಕಂಠಸ್ವಾಮಿ, ಶಿವರಾಜು, ಪ್ರಕಾಶ್, ನಂಜುಂಡಸ್ವಾಮಿ, ಸಿದ್ದು, ಮಹೇಶ್, ಮಹೇಂದ್ರ ಹಾಗೂ ಕಿಚ್ಚಿನ ಅಭಿಮಾನಿ ಬಳಗದವರು ಹಾಜರಿದ್ದರು. ಇದೇ ವೇಳೆ ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರವನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಕೇತುಪುರ ಶಾಲೆಯಲ್ಲಿ ಮಕ್ಕಳ ದಿನಾಚರಣೆ

ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಿ: ಆರ್.ಚೆಲುವರಾಜು

ತಿ.ನರಸೀಪುರ, ನ.15– ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ಆಸಕ್ತಿಯುಳ್ಳ ಕ್ಷೇತ್ರದಲ್ಲಿ ಮುಂದುವರಿದರೆ ಮಕ್ಕಳ ಸರ್ವತೋಮುಖ ಬೆಳವಣಿಗೆ ಸಾಧ್ಯ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.



ಕಾರ್ಯಕ್ರಮದಲ್ಲಿ ಮೈಮುಲ್ ಅಧ್ಯಕ್ಷ ಚೆಲುವರಾಜು, ಕಸಾಪ ನಿಕಟಪೂರ್ವ ಅಧ್ಯಕ್ಷ ವೈ.ಡಿ.ರಾಜಣ್ಣ, ಬಿಇಓ ಶಿವಮೂರ್ತಿ ಹಾಗೂ ಐಪಿಎಸ್ ಅಧಿಕಾರಿ ಟಿ.ಪಿ.ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು.

ತಾಲೂಕಿನ ಕೇತುಪುರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ನಡೆದ ಸಿರಿ ಚಿಗುರು ಕವನ ಸಂಕಲನ ಲೋಕಾರ್ಪಣೆ ಹಾಗೂ ಮಕ್ಕಳ ದಿನಾಚರಣೆಯಲ್ಲಿ ಮಾತನಾಡಿದ ಅವರು, ಮಕ್ಕಳು ನಾಳಿನ ಭವಿಷ್ಯ ಎಂದು ಮಾಜಿ ಪ್ರಧಾನಿ ನೆಹರು ನಂಬಿದ್ದರು. ಮಕ್ಕಳು ಭವಿಷ್ಯದ ಕುರಿತು ಉತ್ತಮ ಕನಸು ಕಾಣುವ ದಿನವಾಗಿ ರೂಪಿಸಬೇಕು. ನಾವು ನಮ್ಮ ಮಕ್ಕಳಿಗೆ ನೀಡುವ ಪ್ರೀತಿ ಮತ್ತು ಕಾಳಜಿಯಿಂದ ನಾಳೆ ನಮ್ಮ ದೇಶದ ಭವಿಷ್ಯ ಅರಳುತ್ತದೆ. ನಾವು ಮಕ್ಕಳ ಕಲ್ಯಾಣದ ಬಗ್ಗೆ ಕಾಳಜಿ ವಹಿಸಿ ಬದ್ಧತೆಯಿಂದ ನೆಹರು ಅವರ ಕನಸಿನಂತೆ ಮಕ್ಕಳು ಉತ್ತಮ ಗುಣಮಟ್ಟದ ಜೀವನ ನಡೆಸಲು ಅನುವಾಗುವಂತೆ ಮಾಡಬೇಕು ಎಂದರು.

ಜವಾಹರ ಲಾಲ್ ನೆಹರು ಅವರಿಗೆ ಮಕ್ಕಳೆಂದರೆ ತುಂಬಾ ಇಷ್ಟ. ಮಕ್ಕಳ ಮೇಲೆ ಅವರಿಗೆ ಪ್ರೀತಿ ಅಪಾರವಾಗಿತ್ತು. ಪ್ರತಿ ಮಗು ಮುಗ್ಧತೆ, ಕ್ಷಮಾಗುಣ, ಸ್ನೇಹ, ಕಾಳಜಿ, ಕ್ರಿಯಾಶೀಲತೆ ಮತ್ತು ಅಪರಿಮಿತ ಪ್ರೀತಿಯ ಪ್ರತೀಕವಾಗಿರುತ್ತಾರೆ. ಒಂದು ಮಗು ಕನಸು ಕಂಡರೆ ಅದರಿಂದಾಗಿ ಇಡೀ ರಾಜ್ಯವು ಪ್ರಗತಿ ಕಾಣುತ್ತದೆ. ಹಾಗಾಗಿ ಶಿಕ್ಷಕರು ಹಾಗೂ ಪೋಷಕರು ಮಕ್ಕಳ ಮನಸ್ಸಿನಲ್ಲಿ ಒಳ್ಳೆಯ ಭಾವನೆಗಳನ್ನು ಬಿತ್ತಬೇಕು. ಭವಿಷ್ಯದ ಬಗ್ಗೆ ಕನಸನ್ನು ಕಾಣುವಂತೆ ಪ್ರೋತ್ಸಾಹಿಸಬೇಕು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ಮೊಬೈಲ್‌ಗೆ ಅಂಟಿಕೊಳ್ಳದೇ ಏಕಾಗ್ರತೆಯಿಂದ ವ್ಯಾಸಂಗ ಮಾಡಿದಾಗ ಮಾತ್ರ ತಾವು ಅಂದುಕೊಂಡಂತಹ ಸಾಧನೆ ಮಾಡಲು ಸಾಧ್ಯ. ಮೊದಲು ಉನ್ನತ ವಿದ್ಯಾಭ್ಯಾಸ ಕೈಗೊಳ್ಳಿ. ನಂತರ ತಮಗೆ ಬೇಕಾದ ಕ್ಷೇತ್ರ ಆಯ್ಕೆ ಮಾಡಿಕೊಂಡು ಜೀವನದಲ್ಲಿ ಯಶಸ್ಸು ಸಾಧಿಸುವ ಮೂಲಕ ಪೋಷಕರ ಪರಿಶ್ರಮಕ್ಕೆ ಗೌರವ ತಂದು ಕೊಡುವ ಕೆಲಸಕ್ಕೆ ಮುಂದಾಗಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಐಪಿಎಸ್ ಅಧಿಕಾರಿ ಟಿ.ಪಿ.ಶಿವಕುಮಾರ್, ಕಸಾಪ ನಿಕಟ ಪೂರ್ವ ಅಧ್ಯಕ್ಷ ವೈಡಿ. ರಾಜಣ್ಣ, ಆಕಾಶವಾಣಿ ಸಹಾಯಕ ನಿರ್ದೇಶಕ ಅಬ್ದುಲ್ ರಷೀದ್, ಶಾಲೆ ಮುಖ್ಯ ಶಿಕ್ಷಕ ಎಸ್. ಹೇಮಚಂದ್ರ, ಎಸ್‌ಡಿಎಂಸಿ ಅಧ್ಯಕ್ಷ ಆರ್. ವಿಜಯ್, ಕೇತುಪುರ ಶಿವಕುಮಾರ್, ಶಿಕ್ಷಕ ಉತ್ತಂಬಳ್ಳಿ ನಾಗರಾಜು ಸೇರಿದಂತೆ ಶಾಲೆಯ ಶಿಕ್ಷಕ–ಶಿಕ್ಷಕಿಯರು ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಲ್ಲೇಸ್ವಾಮಿ ನಿಧನ



ಹೆಚ್.ಡಿ.ಕೋಟೆ, ನ.15– ತಾಲೂಕಿನ ಮನುಗನಹಳ್ಳಿ ಗ್ರಾಮದ ನಿವಾಸಿ ಮಲ್ಲೇಸ್ವಾಮಿ(68) ಶುಕ್ರವಾರ ನಿಧಾನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬುಡಕಟ್ಟು ಸಮುದಾಯದ ಕಲ್ಯಾಣಕ್ಕಾಗಿ ಕೇಂದ್ರದಿಂದ 6,650 ಕೋಟಿ ಮೊತ್ತದ ಯೋಜನೆ

ಸದ್ಬಳಕೆಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರ್‌ಸ್ವಾಮಿ ಕರೆ

ಮೈಸೂರು, ನ.15(ಜಿಎ)–ಬುಡಕಟ್ಟು ಸಮುದಾಯಗಳನ್ನು ಮುಖ್ಯವಾಹಿನಿಗೆ ತರಬೇಕು ಎನ್ನುವ ಮಹಾ ಸಂಕಲ್ಪದೊಂದಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 6,650 ಕೋಟಿ ಮೊತ್ತದ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದಾರೆ. ಅದನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಕರೆ ನೀಡಿದರು.

ಮೈಸೂರಿನ ಕೇರ್ಗಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಬಿರ್ಸಾ ಮುಂಡಾ 150ನೇ ಜಯಂತಿ ಅಂಗವಾಗಿ ಆಯೋಜಿಸಿದ್ದ 'ಜನಜಾತೀಯ ಗೌರವ ದಿವಸ್' ಕಾರ್ಯಕ್ರಮ ಉದ್ಘಾಟಿಸಿ, ಹೆಚ್.ಡಿ.ಕೋಟೆ ತಾಲ್ಲೂಕಿನ ಸಿತಾರ, ನೇತ್ರಾವತಿ, ವರ್ಷ ಅವರಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಿರಿಯಾಪಟ್ಟಣ ತಾಲೂಕಿನ ಆಲನಕಟ್ಟೆ ಹಾಡಿಯಲ್ಲಿ 3.47 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಮನೆಗಳ ಬೀಗದ ಕೀ ಅನ್ನು ಗೀತಾ, ಸಿದ್ದ ಅವರಿಗೆ ಹಸ್ತಾಂತರಿಸಿದರು. ಜನ್ ದನ್ ಯೋಜನೆಯಡಿ ಬ್ಯಾಂಕ್ ಖಾತೆಯ ಪಾಸ್ ಪುಸ್ತಕವನ್ನು ವೀರಯ್ಯ, ನಾಗಯ್ಯ, ಕರಿಯಯ್ಯ ಅವರಿಗೆ ವಿತರಿಸಿದರು.

ನಂತರ ಸಂಸ್ಥೆಯಲ್ಲಿ ಏರ್ಪಡಿಸಿದ್ದ ದ್ವಿಮುಖ ಸಂಪರ್ಕ (2 way Connectivity) ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ನಡೆದ ಈ ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಅವರು ಬಿಹಾರದ ಜಮುಯಿನಿಂದ ಮಾತನಾಡಿದರು. ಕೇಂದ್ರ ಸಚಿವ ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಶಾಸಕ ಟಿ.ಎಸ್.ಶ್ರೀವತ್ಸ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಅಧಿಕಾರಿಗಳು ಕಾರ್ಯಕ್ರಮದ ವೀಕ್ಷಿಸಿದರು.

ಈ ವೇಳೆ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಬುಡಕಟ್ಟು ಜನರ ಕಲ್ಯಾಣ, ಶ್ರೇಯೋಭಿವೃದ್ಧಿಗಾಗಿ ಕೇಂದ್ರ ಸರಕಟಿಬದ್ಧವಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಈ ದಿನ ಭಗವಾನ್ ಬಿರ್ಸಾ ಮುಂಡಾ ಜಯಂತಿ, ಜನಜಾತಿಯ ಗೌರವ ದಿನದ ಅಂಗವಾಗಿ ಸುಮಾರು 6,650 ಕೋಟಿ ಮೊತ್ತದ ಕಾರ್ಯಕ್ರಮಗಳನ್ನು ಶಿಕ್ಷಣ, ವಸತಿ, ಆರೋಗ್ಯ ಸೇರಿದಂತೆ ಎಲ್ಲಾ ಬಗೆಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಬುಡಕಟ್ಟು ಸಮುದಾಯಗಳ ಹಾಡಿಗಳನ್ನು ಅಮೂಲಾಗ್ರವಾಗಿ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಪ್ರಧಾನಿಗಳು ಇಷ್ಟು ಬೃಹತ್ ಮೊತ್ತದ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಬುಡಕಟ್ಟು ಜನರು ಅತ್ಯಂತ ಉತ್ತಮವಾಗಿ ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಬುಡಕಟ್ಟು ಸಮುದಾಯಗಳನ್ನು ಮುಖ್ಯವಾಹಿನಿಗೆ ತರಬೇಕು ಎನ್ನುವ ಮಹಾ ಸಂಕಲ್ಪದೊಂದಿಗೆ ಪ್ರಧಾನಿಗಳು ಕೆಲಸ ಮಾಡುತ್ತಿದ್ದಾರೆ. ಕೇವಲ ನೂರೇ ಜನರು ವಾಸವಿದ್ದರೂ ಅಂಥ ಹಾಡಿಗಳಿಗೆ ನೇರ ರಸ್ತೆ ಸಂಪರ್ಕ ಕಲ್ಪಿಸಲು ಉದ್ದೇಶಿಸಲಾಗಿದೆ. ಎಲ್ಲಾ ಹಾಡಿಗಳಿಗೂ ವಿದ್ಯುತ್ ಸಂಪರ್ಕ, ಟೆಲಿಕಾಂ ಸಂಪರ್ಕ, ಮಕ್ಕಳು ಮಹಿಳೆಯರಿಗೆ ಪೌಷ್ಟಿಕ ಆಹಾರ ಪೂರೈಕೆ, ಮೊಬೈಲ್ ಮೆಡಿಕಲ್ ಸೆಂಟರ್‌ಗಳು, ಅಂಗನವಾಡಿ ಕೇಂದ್ರಗಳ ಸ್ಥಾಪನೆ ಹಾಗೂ ಏಕಲವ್ಯ ಮಾದರಿ ಶಾಲೆಗಳನ್ನು ದೊಡ್ಡ ಸಂಖ್ಯೆಯಲ್ಲಿ ಸ್ಥಾಪನೆ ಮಾಡಿ ಬುಡಕಟ್ಟು ಜನರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಲಾಗುತ್ತಿದೆ. ಇದನ್ನು ಮೋದಿ ಅವರು ಇನ್ನೂ ದೊಡ್ಡ ಪ್ರಮಾಣದಲ್ಲಿ ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿದ್ದಾರೆ ಎಂದರು.

ಸಣ್ಣ ಅತಿ ಸಣ್ಣ ಕಾರ್ಮಿಕ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ಕಾಡಿನಲ್ಲಿ ಇರುವ ಗಿಡಮೂಲಿಕೆ ಔಷಧ, ಉತ್ಪನ್ನಗಳು ಆಹಾರವಾಗಿದೆ. ಜೇನು ಕುರುಬ, ಕಾಡು ಕುರುಬ ಸೇರಿದಂತೆ ಹಲವಾರು ಸಮುದಾಯಗಳಿಗೆ ಆರೋಗ್ಯ ಶಿಕ್ಷಣ, ಆರ್ಥಿಕ, ಸಾಮಾಜಿಕ ಸೌಲಭ್ಯ ದೊರೆಯಬೇಕು. ಜಾಗ ಸಿಗದ ಕಡೆಗಳಲ್ಲಿ ಕಂದಾಯ ಭೂಮಿಯನ್ನು ಕೊಡಿಸಿ ಮನೆ ನಿರ್ಮಾಣಕ್ಕೆ ಅವಕಾಶ ಕಲ್ಪಿಸಬೇಕು. ಮನೆಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದರೂ ಜಾಗದ ಇಲ್ಲವೆಂದು ಕೂರದೆ ಕಂದಾಯ ಇಲಾಖೆಯ ಅಧಿಕಾರಿಗಳು ಅಗತ್ಯ ಭೂಮಿ ಗುರುತಿಸಿಕೊಡಬೇಕು. ಕೇಂದ್ರದಿಂದ ಹಣ ಕೊಡಬಹುದು. ಆದರೆ, ಭೂಮಿ ಮಂಜೂರು ಮಾಡುವುದು ರಾಜ್ಯ ಸರ್ಕಾರದ ಹೊಣೆಯಾಗಿದೆ ಎಂದು ತಿಳಿಸಿದರು.

ಒರಿಸ್ಸಾ, ಬಿಹಾರ, ಜಾರ್ಖಂಡ್ ರಾಜ್ಯಗಳಲ್ಲಿ ರಾಸಾಯನಿಕ, ಕೀಟನಾಶಕ ಬೆರೆಸದೆ ಹಲಸಿನ ಹಣ್ಣು, ಪೈನಾಪಲ್ ಬೆಳೆಯುವ ಕಾರಣ ವಿದೇಶಗಳಲ್ಲಿ ಭಾರೀ ಬೇಡಿಕೆ ಇದೆ. ತರಬೇತಿ ಪಡೆದು ಉದ್ಯೋಗ ಆರಂಭಿಸುವವರಿಗೆ ನೂರಕ್ಕೆ ನೂರರಷ್ಟು ಸಾಲ ಕೊಡಿಸುವ ಜೊತೆಗೆ ಮಾರುಕಟ್ಟೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಬುಡಕಟ್ಟು ಸಮುದಾಯದವರ ಆರೋಗ್ಯಕ್ಕೆ ಒತ್ತು ನೀಡಿರುವ ಕಾರಣ ಸಿಕೆಲ್ ಸೆಲ್ ಅನಿಮೀಯಾ ಪತ್ತೆ ಮಾಡಲು ಪ್ರತಿಯೊಬ್ಬರ ತಪಾಸಣೆ ಮಾಡಿ ಆರೋಗ್ಯ ಸಮಸ್ಯೆಗಳನ್ನು ಪತ್ತೆ ಹಚ್ಚುವ ಕೆಲಸ ಶುರು ಮಾಡಲಾಗಿದೆ ಎಂದರು.

ಬಿರ್ಸಾಮುಂಡಾ ಅವರು ಬರೀ ಹೋರಾಟಗಾರರಲ್ಲ ಜನಾಂಗದ ಪರವಾಗಿ ಶ್ರಮಿಸಿದರು. ಬದುಕುವ ಹಕ್ಕನ್ನು ಕಸಿಯಲು ಕಾಡಿಗೆ ತೆರಿಗೆ ವಿಧಿಸಲು ಮುಂದಾದಾಗ ಅದರ ವಿರುದ್ಧ ಹೋರಾಟ ಮಾಡಿ ಕಾಡಿನ ಸಂಪತ್ತು ಉಳಿಯುವಂತೆ ಮಾಡಿದರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ, ವಿಧಾನ ಪರಿಷತ್ತಿನ ಸದಸ್ಯ ಸಿ.ಎನ್ ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆಎಂ ಗಾಯತ್ರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾದ ಡಾ.ಪಿ.ಸಿ ಕುಮಾರಸ್ವಾಮಿ, ಬೆಂಗಳೂರಿನ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ನಿರ್ದೇಶಕ ಟಿ.ಯೋಗೇಶ್, ಸಂಶೋಧನ ಸಂಸ್ಥೆಯ ನಿರ್ದೇಶಕ ಡಾ.ಕೆ. ಆರ್. ರಾಜಕುಮಾರ್ ಉಪಸ್ಥಿತರಿದ್ದರು.



ಮೈಸೂರಿನ ಕೇರ್ಗಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಬಿರ್ಸಾ ಮುಂಡಾ 150ನೇ ಜಯಂತಿ ಅಂಗವಾಗಿ ಆಯೋಜಿಸಿದ್ದ 'ಜನಜಾತೀಯ ಗೌರವ ದಿವಸ್' ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರ್‌ಸ್ವಾಮಿ ವಿತರಿಸಿದರು.

> ಅರಣ್ಯದಲ್ಲಿ ಅಥವಾ ಅರಣ್ಯದ ಅಂಚಿನಲ್ಲಿ ವಾಸ ಮಾಡುವ ಬುಡಕಟ್ಟು ಜನರಿಗೆ ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ತಲುಪಿಸಬೇಕು ಹಾಗೂ ಆ ಬಗ್ಗೆ ಜಾಗೃತಿ ಮೂಡಿಸಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಅವರು ವಾಸ ಮಾಡುವ ಹಾಡಿಗಳಿಗೆ ಭೇಟಿ ಕೊಡಬೇಕು. ಕೊನೆಯ ಪಕ್ಷ ವಾರಕ್ಕೆ ಒಮ್ಮೆ ಅಥವಾ ಹದಿನೈದು ದಿನಕ್ಕೆ ಒಮ್ಮೆ ಭೇಟಿ ಕೊಟ್ಟರೆ ಅವರಿಗೆ ಹೆಚ್ಚು ಅನುಕೂಲ ಆಗುತ್ತದೆ.
> – ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕಂಗುವಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಂಗುವಾ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಂಗುವಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಮರನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ತಾರಕೇಶ್ವರ(ಕ)+ ಯಲಾಕುನ್ನಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಅಮರನ್ (ತ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ.
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಣಿಪಾಲ್ ಆಸ್ಪತ್ರೆಯಿಂದ ಪಾರ್ಕಿನ್ಸನ್ ಕಾಯಿಲೆಗೆ ನೂತನ ವಿಧದ ಚಿಕಿತ್ಸೆ



ಮೈಸೂರು,ನ.15(ಎಂಟಿವೈ)– ಪಾರ್ಕಿನ್ಸನ್ ಕಾಯಿಲೆಗೆ ತುತ್ತಾಗಿ ವಿವಿಧ ಅನಾರೋಗ್ಯ ಸಮಸ್ಯೆಗೆ ಒಳಗಾಗಿ ವ್ಯಕ್ತಿಯೊಬ್ಬರಿಗೆ ನೂತನ ವಿಧಾನದ ಮೂಲಕ ಚಿಕಿತ್ಸೆ ನೀಡಿ ಗುಣಪಡಿಸಲಾಗಿದೆ ಎಂದು ಮಣಿಪಾಲ್ ಆಸ್ಪತ್ರೆಯ ತಜ್ಞ ವೈದ್ಯರಾದ ಡಾ. ಟಿ.ಪಿ. ದಿನೇಶ್‌ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪಾರ್ಕಿನ್ಸನ್ ಕಾಯಿಲೆಗೆ ತುತ್ತಾಗಿದ್ದ 70 ವರ್ಷದ ನಾಗರೀಕರೊಬ್ಬರ ಮಿದುಳಿನಲ್ಲಿ ಪೇಸ್ ಮೇಕರ್ ಮಾದರಿಯ ಸಾಧನವನ್ನು ಈ ಹಿಂದೆಯೇ ಅಳವಡಿಸಲಾಗಿತ್ತು ಅಲ್ಲದೆ, ಬೆನ್ನು ಮೂಳೆಯ ಶಸ್ತ್ರಚಿಕಿತ್ಸೆಗೆ ಒಳಗಾಗಿ, ಪ್ರಾಸ್ಟೇಟ್‌ನಲ್ಲಿನ ಸಮಸ್ಯೆಯಿಂದ ಬಳಲುತ್ತಿದ್ದರು. ಮೆದುಳಿನಲ್ಲಿ ಪೇಸ್‌ಮೇಕರ್ ಮಾದರಿಯ ಸಾಧನವಿದ್ದ ಕಾರಣ ಸಾಂಪ್ರದಾಯಿಕವಾದ ವಿದ್ಯುತ್ ತರಂಗ ಬಳಸುವುದು ಅಪಾಯಕಾರಿಯಾಗಿತ್ತು ಇವರಿಗೆ ಹೋಲ್ಮಿಯಮ್ ಲೇಸರ್ ಎನ್ಯುಕ್ಲಿಯೇಷನ್ ಎಂಬ ಕಡಿಮೆ ಸಮಸ್ಯೆಯುಂಟು ಮಾಡಬಹುದಾದ ವಿಧಾನವನ್ನು ಆಯ್ಕೆ ಮಾಡಿಕೊಂಡು ಪ್ರಾಸ್ಟೇಟ್‌ನಲ್ಲಿ ಬೆಳೆದಿದ್ದ ಅನಗತ್ಯ ಅಂಗಾಂಶವನ್ನು ಎಚ್ಚರಿಕೆಯಿಂದ ತೆಗೆದುಹಾಕಲಾಯಿತು. ಈ ವಿಧಾನವು ಹೆಚ್ಚುವರಿ ಅಂಗಾಂಶವನ್ನು ನಿಖರವಾಗಿ ಕತ್ತರಿಸುತ್ತದೆ. ಕಡಿಮೆ ರಕ್ತಸ್ರಾವವಾಗುತ್ತದೆ. ಈ ಹಿನ್ನೆಲೆಯಲ್ಲಿ ರೋಗಿ ಗುಣಮುಖರಾಗಿದ್ದಾರೆ ಎಂದು ತಿಳಿಸಿದರು.

ಸಿಒಪಿಡಿಯಿಂದ ಬಳಲುತ್ತಿರುವವರು, ದೀರ್ಘಕಾಲದ ಅನಿಯಂತ್ರಿತ ಮಧುಮೇಹ, ಅಧಿಕ ರಕ್ತದೊತ್ತಡ, ಹೆಗ್ಗೋ ಸ್ಟ್ರೋಕ್‌ನಿಂದ ಬಳಲುತ್ತಿರುವವರಿಗೆ ಇದು ಸೂಕ್ತ ಶಸ್ತ್ರಚಿಕಿತ್ಸಾ ವಿಧಾನವಾಗಿದೆ ಪ್ರಾಸ್ಟೇಟ್ ಕ್ಯಾನ್ಸರ್ ಭಾರತದಲ್ಲಿ ಅಗ್ರ ಹತ್ತು ಪ್ರಮುಖ ಕ್ಯಾನ್ಸರ್‌ಗಳಲ್ಲಿ ಒಂದಾಗಿದೆ. ಇದು ಸಾಮಾನ್ಯವಾಗಿ 65 ವರ್ಷಕ್ಕಿಂತ ಮೇಲ್ಪಟ್ಟ ಪುರುಷರ ಮೇಲೆ ಪರಿಣಾಮ ಬೀರುತ್ತದೆ. ಆದಾಗ್ಯೂ, ಇತ್ತೀಚೆಗೆ ಮೆಟ್ರೋಪಾಲಿಟನ್ ನಗರಗಳಲ್ಲಿ ವಾಸಿಸುವ 35–44 ಮತ್ತು 55–64 ವಯಸ್ಸಿನ ಯುವ ಪುರುಷರಲ್ಲಿ ಕ್ಯಾನ್ಸರ್ ವರದಿಗಳು ಹೆಚ್ಚಾಗುತ್ತಿವೆ. ಆದ್ದರಿಂದ ನಿಯಮಿತ ತಪಾಸಣೆಗೆ ಒಳಗಾಗುವುದು ಸೂಕ್ತ ಎಂದು ಸಲಹೆ ನೀಡಿದರು.

ಕನ್ನಡಾಂಬೆ ಸೇವಾ ರತ್ನ ಪ್ರಶಸ್ತಿಗೆ ಆಯ್ಕೆ



ಮೈಸೂರು, ನ.15–ಮೈಸೂರಿನ ಕನ್ನಡಾಂಬೆ ರಕ್ಷಣಾ ವೇದಿಕೆ ನ.17ರಂದು ಮೈಸೂರಿನ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿರುವ 68ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ ಪ್ರಯುಕ್ತ ಸಾತ್ವಿಕಿ ಫೌಂಡೇಶನ್ ನಿರ್ದೇಶಕ ಹಾಗೂ ರಂಗಭೂಮಿ ನಟ, ನಿರ್ದೇಶಕ, ಅಂತರರಾಷ್ಟ್ರೀಯ ಜಾನಪದ ಕಲಾವಿದ ಅಂಕರಾಜು, 2024ನೇ ಸಾಲಿನ ರಾಜ್ಯಮಟ್ಟದ ಕನ್ನಡಾಂಬೆ ಸೇವಾ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕನ್ನಡ ನಾಡಿನ ಏಳಿಗೆಗಾಗಿ ಸುಮಾರು 10 ವರ್ಷಗಳಿಂದ ರಂಗಭೂಮಿ ಮತ್ತು ಜಾನಪದ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು.

ಎಚ್ಚರ ತಪ್ಪಿದರೆ ಭಾರಿ ಬೆಲೆ ತೆರಬೇಕಾಗುತ್ತೆ!

ಸೈಬರ್ ಅಪರಾಧ ಜಾಗೃತಿ ಕಾರ್ಯಕ್ರಮದಲ್ಲಿ ತಜ್ಞರ ಎಚ್ಚರಿಕೆ ನುಡಿ



ಮೈಸೂರಿನ ಶ್ರೀಕಾಂತ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಸೈಬರ್ ಕ್ರೈಂ ಅಪರಾಧ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಸೈಬರ್ ಪೊಲೀಸ್ ಠಾಣೆಯ ತನಿಖಾ ಸಹಾಯಕ ಮಹೇಶ್ ಉದ್ಘಾಟಿಸಿದರು.

ಮೈಸೂರು,ನ.15–ಅಜ್ಞಾನ, ನಿರ್ಲಕ್ಷ್ಯ, ನಿಷ್ಕಾಳಜಿಯಿಂದ ಸೈಬರ್ ಕ್ರೈಂಗಳು ಹೆಚ್ಚುತ್ತಿವೆ. ಸೈಬರ್ ಕ್ರೈಂಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. ಈ ಕಾರ್ಯಾಗಾರ ಸೈಬರ್ ಕ್ರೈಂ ಅಪರಾಧ ಜಾಗೃತಿಗೆ ಸಹಕಾರಿಯಾಗಲಿದೆ ಎಂದು ಮೈಸೂರು ಜಿಲ್ಲಾ ಸೈಬರ್ ಪೊಲೀಸ್ ಠಾಣೆಯ ತನಿಖಾ ಸಹಾಯಕ ಮಹೇಶ್ ಹೇಳಿದರು.

ಅಗ್ರಹಾರದಲ್ಲಿರುವ ಶ್ರೀಕಾಂತ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ಸೈಬರ್ ಕ್ರೈಂ ಅಪರಾಧ ಬಗ್ಗೆ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಪರಾಧ ತಡೆಗಟ್ಟುವಲ್ಲಿ ವಿದ್ಯಾರ್ಥಿಗಳ ಪಾತ್ರ ಬಹುಮುಖ್ಯವಾದದ್ದು. ಕ್ಷಣ ಮಾತ್ರದಲ್ಲಿ ಆಗುವ ಅಹಿತಕರ ಘಟನೆಗಳ ಬಗ್ಗೆ ನಾವು ಎಚ್ಚೆತ್ತುಕೊಳ್ಳದೆ ಹೋದಲ್ಲಿ ಅದಕ್ಕೆ ತಕ್ಕ ಬೆಲೆ ತೆರಬೇಕಾಗುತ್ತದೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳ ದುರ್ಬಳಕೆ, ಸೈಬರ್ ಕ್ರೈಮ್ ಇವುಗಳ ಬಗ್ಗೆ ಜಾಗೃತಿ ಹೊಂದುವುದು ಅತೀ ಅವಶ್ಯಕ ಎಂದು ಹೇಳಿದರು.

ಇತ್ತೀಚೆಗೆ ಅಂತರ್ಜಾಲದ ದುರುಪಯೋಗ ಹೆಚ್ಚಾಗುತ್ತಿದೆ. ಜನರು ಒಂದು ಸಣ್ಣ ತಪ್ಪಿನಿಂದಾಗಿ ಹಣ ಹಾಗೂ ಮಹತ್ವದ ಮಾಹಿತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಮೂಲಕ ತಿಳಿದೋ ಅಥವಾ ತಿಳಿಯದೆಯೋ ವಿವಿಧ ಸಂಕಷ್ಟಗಳಿಗೆ ಸಿಲುಕಿ ನಲುಗುತ್ತಿದ್ದಾರೆ ಎಂದರು.

ಸೈಬರ್ ಕ್ರೈಂ ತಡೆಯುವ ಬಗ್ಗೆ ಪ್ರತಿಯೊಬ್ಬರೂ ತಿಳಿದುಕೊಳ್ಳುವುದು ಅತ್ಯಗತ್ಯ. ಸರ್ಕಾರಿ ಸಂಸ್ಥೆಗಳಲ್ಲೂ ಸಹ ಪ್ರತೀ ಕೆಲಸದಲ್ಲಿಯೂ ಕಂಪ್ಯೂಟರ್, ವಾಟ್ಸಾಪ್, ಫೇಸ್ಬುಕ್ ಹೀಗೆ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತೇವೆ. ಆದ್ದರಿಂದ ಈ ಬಗ್ಗೆ ತಿಳಿದುಕೊಳ್ಳಬೇಕು ಮತ್ತು ಜಾಗೃತರಾಗಬೇಕು ಎಂದು ನುಡಿದರು.

ಮೈಸೂರು ಜಿಲ್ಲಾ ಸೈಬರ್ ಪೊಲೀಸ್ ಠಾಣೆಯ ತನಿಖಾ ಸಹಾಯಕ ಮಹೇಶ್, ನಿವೃತ್ತ ಮಾಜಿ ಸೈನಿಕ ನಂಜುಂಡಸ್ವಾಮಿ ಎಚ್.ಎಸ್., ವಿಶೇಷಚೇತನ ಕ್ರೀಡಾಪಟು ಅಲೋಕ್ ಜೈನ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಸಿ.ಎಸ್.ಚಂದ್ರಶೇಖರ್, ಮಹಿಳಾ ಪ್ರಮುಖ ನಾಗಮಣಿ, ಶ್ರೀಕಾಂತ ಮಹಿಳಾ ಪದವಿ ಪೂರ್ವ ಕಾಲೇಜು, ಪ್ರಾಂಶುಪಾಲರಾದ ಸುಬ್ಬಲಕ್ಷ್ಮಿ, ದೈಹಿಕ ಶಿಕ್ಷಣ ಉಪನ್ಯಾಸಕರಾದ ಚಂದ್ರು, ಕಾರ್ಯದರ್ಶಿ ಜಯಕುಮಾರ್, ದರ್ಶನ್ ಮೂರ್ತಿ, ಮಹಾನ್ ಶ್ರೇಯಸ್ ಇನ್ನಿತರರಿದ್ದರು.

ವಿದೇಶಿ ವ್ಯಾಸಂಗ ವೇತನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು, ನ.15– 2024–25ನೇ ಸಾಲಿನಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪಿಹೆಚ್‌ಡಿ ಅಧ್ಯಯನ ಮಾಡುವ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ), ಹಾಗೂ 3(ಬಿ) ಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡುವ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನಕ್ಕಾಗಿ ಅರ್ಜಿ ಆಹ್ವಾನಿಸಿದ್ದು, ಡಿ.5ರೊಳಗೆ https://bcwd.karnataka.gov.in ಮೂಲಕ ಅರ್ಜಿ ಸಲ್ಲಿಸುವುದು. ಮಾಹಿತಿಗೆ ಸಹಾಯವಾಣಿ ಸಂಖ್ಯೆ 8050770004 ಅನ್ನು ಸಂಪರ್ಕಿಸಬಹುದು.

ವಿವಿಧ ಬೇಡಿಕೆ ಈಡೇರಿಕೆಗಾಗಿ ಸಂಶೋಧನಾ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂದೆ ಶುಕ್ರವಾರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರು,ನ.15(ಎಂಟಿವೈ)– ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ ಎಲ್ಲಾ ಹಿಂದುಳಿದ ವರ್ಗಗಳ (ಒಬಿಸಿ) ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುವಂತೆ ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ಸದಸ್ಯರು ಪ್ರತಿಭಟನೆ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದ ಸಂಶೋಧನಾ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಆಡಳಿತ ಮಂಡಲಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 2024–25ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ 21 ವಿದ್ಯಾರ್ಥಿಗಳಲ್ಲಿ 12 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅನಗತ್ಯ ಷರತ್ತು ವಿಧಿಸಿ 9 ವಿದ್ಯಾರ್ಥಿಗಳ ಅರ್ಜಿ ತಿರಸ್ಕರಿಸಿರುವುದು ಖಂಡನೀಯ ಎಂದು ಕಿಡಿಕಾರಿದರು.

ಮೈಸೂರು ವಿವಿಯಲ್ಲೇ ಸ್ನಾತಕೋತ್ತರ ಪದವಿ ಪಡೆದಿರಬೇಕು. ಮೂರು ವರ್ಷ ಶಿಷ್ಯವೇತನ ನೀಡಲಾಗುವುದು. ಪಿಹೆಚ್‌ಡಿ ತಾತ್ಕಾಲಿಕ ನೋಂದಣಿ ಪತ್ರ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಹಿಂದಿನ ಮೂರು ವರ್ಷದ ಒಳಗಿರಬೇಕು. 35 ವರ್ಷ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು ಎಂಬ ಅನಗತ್ಯ ಷರತ್ತುಗಳಿಂದ ರಾಜ್ಯದ ಇತರೆ ವಿವಿಗಳಿಂದ ಪದವಿ ಪಡೆದವರಿಗೆ ವಂಚನೆಯಾಗುತ್ತದೆ. ಶಿಷ್ಯವೇತನವನ್ನು ಮೂರು ವರ್ಷ ನೀಡುವುದರಿಂದ ಆರ್ಥಿಕವಾಗಿ ಹಿಂದುಳಿದ ಬಡ ವಿದ್ಯಾರ್ಥಿಗಳು ಸಂಶೋಧನೆ ನಡೆಸಲು ತೊಂದರೆಯಾಗುತ್ತದೆ ಎಂದು ಹೇಳಿದರು.

ಮೈಸೂರು ವಿವಿಯಲ್ಲೇ ಸ್ನಾತಕೋತ್ತರ ಪದವಿ ಪಡೆದಿರಬೇಕು ಎಂಬ ಷರತ್ತನ್ನು ಕೈ ಬಿಡಬೇಕು. ಹಿಂದುಳಿದ ವರ್ಗಗಳ ಸಂಶೋಧನ ವಿದ್ಯಾರ್ಥಿಗಳಿಗೆ ಯುಜಿಸಿ ನಿಯಮದಂತೆ 5 ವರ್ಷಗಳ ಕಾಲ ಶಿಷ್ಯವೇತನ ನೀಡಬೇಕು. 35 ವರ್ಷ ಗರಿಷ್ಠ ವಯೋಮಿತಿಒಯನು ಸಡಿಲಗೊಳಿಸಬೇಕು. ಪಿಹೆಚ್.ಡಿ ತಾತ್ಕಾಲಿಕ ನೋಂದಣಿ ಪತ್ರ ಅಧಿಕ್ಷೂಚನೆ ಹೊರಡಿಸಿದ ಹಿಂದಿನ 3 ವರ್ಷ ಒಳಗಿರಬೇಕು ಎಂಬ ಷರತ್ತನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರತಿಭಟನೆಯಲ್ಲಿ ಸಂಘದ ಗೌರವಾಧ್ಯಕ್ಷ ಮಹೇಶ್ ಸಿ, ಉಪಾಧ್ಯಕ್ಷ ಲಿಂಗರಾಜು, ಪ್ರಧಾನ ಕಾರ್ಯದರ್ಶಿ ಕುಶಾಲ್, ಖಜಾಂಚಿ ನಂಜುಂಡಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರಲ್ಲಿ ಅಖಿಲ ಭಾರತ ಸಹಕಾರ ಸಪ್ತಾಹ

ಎಲ್ಲಾ ಕ್ಷೇತ್ರಗಳಲ್ಲೂ ಸಹಕಾರ ಸಂಘಗಳು ಛಾಪು ಮೂಡಿಸುತ್ತಿವೆ

ಮೈಮುಲ್ ಅಧ್ಯಕ್ಷ ಆರ್.ಚಲುವರಾಜು ಅಭಿಮತ



ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಡೆದ ಸಹಕಾರ ಸಪ್ತಾಹದಲ್ಲಿ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್ ಧ್ವಜಾರೋಹಣ ನೆರವೇರಿಸಿ, ಸಹಕಾರಿ ಪಿತಾಮಹ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಹಾಗೂ ಮಾಜಿ ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು

ಮೈಸೂರು, ನ.15(ಎಂಟಿವೈ)– ಜನರನ್ನು ಸ್ವಾವಲಂಭಿಗಳಾಗಿಸುವ ನಿಟ್ಟಿನಲ್ಲಿ ಸಹಕಾರ ಸಂಘಗಳು ಯಶಸ್ವಿಯಾಗಿ ದಾಪುಗಾಲಿಡುತ್ತಿದ್ದು, ಇದೀಗ ಬ್ಯಾಂಕ್, ಗೃಹ ನಿರ್ಮಾಣ, ಹೈನುಗಾರಿಕೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಸಹಕಾರ ಸಂಘಗಳು ಛಾಪು ಮೂಡಿಸುತ್ತಿವೆ ಎಂದು ಮೈಮುಲ್ ಅಧ್ಯಕ್ಷ ಆರ್. ಚಲುವರಾಜು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಹಾಗೂ ನಗರ ಪ್ರದೇಶದ ಆರ್ಥಿಕತೆಯನ್ನು ಉತ್ತಮಪಡಿಸಲು ಸಹಕಾರ ಕ್ಷೇತ್ರ ಪ್ರಮುಖ ಪಾತ್ರ ವಹಿಸುತ್ತಿದೆ. ರೈತರು ಕೃಷಿ ಚಟುವಟಿಕೆಯೊಂದಿಗೆ ಹೈನುಗಾರಿಕೆ ಆರಂಭಿಸಿ, ತಮ್ಮ ಆದಾಯ ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಸಹಕಾರ ಕ್ಷೇತ್ರ ಶ್ರಮಿಸುತ್ತಿದೆ. ಸಹಕಾರ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸುವುದಕ್ಕಾಗಿ ಎಲ್ಲರೂ ಸಹಕರಿಸಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ಮೈಮುಲ್ ವ್ಯಾಪ್ತಿಯಲ್ಲಿ 1,222 ಹಾಲು ಉತ್ಪಾದಕ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿದಿನ 9 ಲಕ್ಷ ಲೀಟರ್ ಹಾಲು ಸಂಗ್ರಹಿಸುತ್ತಿವೆ. ಉತ್ಪಾದನೆಯಾದ ಎಲ್ಲಾ ಹಾಲನ್ನು ಸಂಸ್ಕರಿಸಿ ಉತ್ಪನ್ನಗಳಾಗಿ ಪರಿವರ್ತಿಸಿ ಗ್ರಾಹಕರಿಗೆ ಸಮಯಕ್ಕೆ ಸರಿಯಾಗಿ ತಲುಪಿಸಲಾಗುತ್ತಿದೆ. ನಂದಿನಿ ಉತ್ಪನ್ನಗಳು ಎಲ್ಲರ ಪ್ರೀತಿ–ವಿಶ್ವಾಸಕ್ಕೆ ಪಾತ್ರವಾಗಿವೆ. ಉತ್ತಮ ಬೆಲೆಗೆ ನಂದಿನಿ ಉತ್ಪನ್ನಗಳನ್ನು ನೀಡುವ ಮೂಲಕ ಹೈನುಗಾರಿಕೆಗೆ ಉತ್ತೇಜನ ನೀಡಲಾಗುತ್ತಿದೆ ಹೈನುಗಾರಿಕೆಗೆ ಬೇಕಾದ ಅಗತ್ಯ ಸೌಲಭ್ಯ ಒದಗಿಸಲಾಗುತ್ತಿದೆ. ಅಲ್ಲದೆ, ವಿವಿಧ ಪರಿಕರಗಳನ್ನು ರಿಯಾಯಿತಿ(ಸಬ್ಸಿಡಿ)ಯಲ್ಲಿ ಹಾಲು ಒಕ್ಕೂಟ ನೀಡುತ್ತಿದೆ ಎಂದು ತಿಳಿಸಿದರು.

ಮೈಸೂರು ನಗರದಲ್ಲಿ 200ಕ್ಕೂ ಹೆಚ್ಚು ನಂದಿನಿ ಬೂತ್‌ಗಳನ್ನು ಸ್ಥಾಪಿಸಲಾಗಿದ್ದು, ನಿರುದ್ಯೋಗಿ ಯುವಕರಿಗೆ ಉದ್ಯೋಗ ನೀಡಿದೆ ಕಿರು ಉದ್ಯಮಗಳನ್ನು ಸ್ಥಾಪಿಸಲು ಸಹಕಾರ ಕ್ಷೇತ್ರದಲ್ಲಿ ವಿಪುಲ ಅವಕಾಶವಿದ್ದು, ಯುವ ಸಮುದಾಯ ಇದರ ಸದುಪಯೋಗ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಮುಲ್ ಉಪಾಧ್ಯಕ್ಷ ಬಿ.ಎನ್.ಸದಾನಂದ ಮಾತನಾಡಿ, ದೇಶದ ಸಹಕಾರ ಕ್ಷೇತ್ರಕ್ಕೆ 120 ವರ್ಷದ ಇತಿಹಾಸವಿದೆ. ಯಾವುದೇ ಭೇದವಿಲ್ಲದೇ ಲಕ್ಷಾಂತರ ಮಂದಿಗೆ ಕೆಲಸ ನೀಡಿದೆ. 1942ರಿಂದಲೂ ಸಹಕಾರ ಸಪ್ತಾಹವನ್ನು ದೇಶದಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಹಣಕಾಸು ಸಚಿವಾಲಯದ ಭಾಗವಾಗಿದ್ದ ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವಾಲಯವನ್ನು ತೆರೆದು ಕ್ಷೇತ್ರದ ಬೆಳವಣಿಗೆಗೆ ನೆರವಾಗಿದೆ. ಕೇಂದ್ರದ ಸಹಕಾರ ಸಚಿವ ಅಮಿತ್ ಶಾ ದೇಶದಾದ್ಯಂತ ಸಹಕಾರ ಯೂನಿ ಯನ್‌ಗಳ ಬೆಳವಣಿಗೆಗೆ ಕಾರ್ಯಕ್ರಮ ರೂಪಿಸಿದ್ದಾರೆ. ಇದರಿಂದ 2047ರ ವೇಳೆಗೆ ವಿಶ್ವದ ಬಲಾಢ್ಯ ಆರ್ಥಿಕ ಶಕ್ತಿಯಾಗಲು ಶ್ರಮಿಸುತ್ತಿದ್ದಾರೆ ಎಂದರು.

ಇದಕ್ಕೂ ಮುನ್ನ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್ ಸಹಕಾರ ಧ್ವಜಾರೋಹಣ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಒಕ್ಕೂಟದ ನಿರ್ದೇಶಕರಾದ ಎಂ.ಬಿ.ಮಂಜೇಗೌಡ, ವೈ.ಭೈರಪ್ಪ ಪ್ರಶಾಂತ್ ತಾತಾಚಾರ್, ಕೆ.ಉಮಾಶಂಕರ್, ಮೈಮುಲ್ ನಿರ್ದೇಶಕರಾದ ಲೀಲಾ ನಾಗರಾಜು, ಡಿ.ಬಿ.ನಾಗರಾಜು, ವ್ಯವಸ್ಥಾಪಕ ನಿರ್ದೇಶಕ ಕೆ.ಎನ್.ಸುರೇಶ್ ನಾಯ್ಕ್, ಸಹಕಾರ ನಿಬಂಧಕ ಎಸ್.ಹೆಚ್. ಮನೋಜ್ ಕುಮಾರ್, ಮೈಸೂರು ತಾಲೂಕು ಸಹಕಾರ ನಿರೀಕ್ಷಕ ಎಸ್.ಮಂಜು, ಕೆಐಸಿಎಂನ ಎಸ್.ಮಹದೇವಪ್ಪ ಉಪಸ್ಥಿತರಿದ್ದರು.


ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ನಗರ, ಮೈಸೂರು ದಕ್ಷಿಣ ಬಂಡಿಪಾಳ್ಯ, ಎ.ಪಿ.ಎಂ.ಸಿ 1ನೇ ಮುಖ್ಯರಸ್ತೆ, ಮನೆ ನಂಬರ್.266 ರ ನಿವಾಸಿಯಾದ ಶ್ರೀ.ನೇನರಾಮ್ ಬಿನ್ ವರದಾಜೀ ಚೌಧರಿ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.
ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಭಾಗಾಂಶ ಋಣ, ಭಾದ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು.
ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.
ಷೆಡ್ಯೂಲ್: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಮರಶೆ ಗ್ರಾಮದ ಸರ್ವೆ ನಂ. 98/4 ರಲ್ಲಿನ ಮೂವತ್ತೇಳು ವರೆ ಗುಂಟೆ (0.37.08.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ:– ಸರ್ವೇ ನಂ. 98/2 ರ ಜಮೀನು, ಪಶ್ಚಿಮಕ್ಕೆ:– ಸರ್ವೇ ನಂ. 98/5 ರ ಜಮೀನು, ಉತ್ತರಕ್ಕೆ:– ಸರ್ವೇ ನಂ. 98/3, 98/2 ರ ಜಮೀನು, ದಕ್ಷಿಣಕ್ಕೆ:– ಬಂಡಿ ರಸ್ತೆ

Sd/- Prakash Kalappa, KAR 1996-2000, Advocate & legal consultant,1 #2-3, first floor, PRI complex, 67/7A, New Sayyajirao Road, Fort Mohalla, Mysore 570004, Karnataka, Cell: 93431 12535 E-mail: mnprakashkalappa@gmail.com
ದಿನಾಂಕ: 15/11/2024

ಹಸಿರು ನಮ್ಮ ಉಸಿರು

12ನೇ ವರ್ಷದ ಪುಣ್ಯಸ್ಮರಣೆ



ಆರ್.ಧರ್ಮರಾಜೇಗೌಡರು

ನಿಧನ: 16.11.2012

ನೀವು ನಮ್ಮನ್ನಗಲಿ 12 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನ ಮನೆಯಲ್ಲಿ ಚಿರಸ್ಥಾಯಿಯಾಗಿದೆ.

ದುಃಖತಪ್ತರು : ಧರ್ಮರಾಜೇಗೌಡರ ಸಹೋದರ ಸಹೋದರಿಯರು, ಪತ್ನಿ ಮಾಯಮ್ಮ ,ಮಕ್ಕಳಾದ ಡಿ ಮಹದೇವು, ಡಿ ರಮೇಶ್, ಡಿ ರಘು, ಅಣ್ಣಯ್ಯ (ಡಿ ಸಿ ಸಿ ಸದಸ್ಯರು ಮತ್ತು ನಿರ್ದೇಶಕರು ಮೈಸೂರು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (TAPCMS) , ಶ್ರೀಮತಿ ಸಿ ಎಸ್ ರಜಿನಿ ಅಣ್ಣಯ್ಯ (ನಗರ ಪಾಲಿಕೆ ಸದಸ್ಯರು ವಾರ್ಡ್# 36), ಧರ್ಮರಾಜೇಗೌಡರ ಮೊಮ್ಮಕ್ಕಳು, ಆರ್.ರಂಗಯ್ಯ ಕುಟುಂಬವರ್ಗ ಹಾಗೂ ಯರಗನಹಳ್ಳಿ ಗ್ರಾಮಸ್ಥರು.

Vidyavardhaka Sangha (R)
VIDYAVARDHAKA POLYTECHNIC
Vidyavardhaka Engineering College Campus, 3rd Stage,Gokulam, Mysore-570002 | Telefax: 0821-2419190
Email: vvpmysore@gmail.com | Website: www.vvpolytechnic.ac.in

APPOINTMENT NOTIFICATION Date: 14-11-2024

Lecturer in the Dept. of CS
Qualification: BE in CS with minimum First Class
Please submit the application addressed to the Principal along with the copies of Certificates, Resume & Passport size photo within 7 days from the date of publication. Salary as per AICTE Scale.

Sd/- Principal Sd/- Hon. President Sd/- Hon. Secretary

CSI HOLDSWORTH MEMORIAL (MISSION) HOSPITAL, MYSORE
REQUIRES DOCTORS URGENTLY
1. Physician - 02
2. Intensivist - 02
3. Junior Resident for Medicine Dept. - 01
4. Junior Resident for OBG Dept. - 01

ADMISSION NOTIFICATION : 2024 - 25
B.Sc in Medical Laboratory Technology Course
Eligibility: 12th / II PUC Science
Apply soon limited seats only
For details contact:
The Director, CSI Holdsworth Memorial Hospital
38, Mandi Mohalla, Mysore - 570 001.
Email: directorcsihmh@gmail.com, csihrd2011@gmail.com
Ph.: 0821 - 4007000, 4266370-3 / 99808 14343

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು

ಕರ್ತವ್ಯಕ್ಕೆ ಹಾಜರಾಗುವಂತೆ ಸೂಚನೆ

ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು ಕಛೇರಿಯಲ್ಲಿ ದ್ವಿತಿಯ ದರ್ಜೆ ಸಹಾಯಕ (ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಯಲ್ಲಿ ಎಣಿಕೆ) ರಾದ ಶ್ರೀ ಲೋಕೇಶ್ ಬಿ. ಅವರು ದಿ: 11.05.2023 ರಿಂದ ನಿರಂತರವಾಗಿ ಕಛೇರಿ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ. ಈ ಪ್ರಕಟಣೆ ಹೊರಡಿಸಿದ 07 ದಿನಗಳ ಒಳಗೆ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು ಕಛೇರಿಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಕರ್ತವ್ಯಕ್ಕೆ ಹಾಜರಾಗದೇ ಇದ್ದಲ್ಲಿ ತಮ್ಮ ಮೇಲೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತು ನಡತೆ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.

DIPR/DDMYS-793/KSMCA-543/2024-25

ಪುರಸಭೆ ಕಾರ್ಯಾಲಯ, ವಿರಾಜಪೇಟೆ
ಕೊಡಗು ಜಿಲ್ಲೆ – 571218
ದೂರವಾಣಿ ಸಂಖ್ಯೆ:– 08274-257332 | ಇ–ಮೇಲ್:- itstaff_ulb_virajpet@yahoo.com
ವೆಬ್ ಸೈಟ್:- www.virajpettown.mrc.gov.in

ಕ್ರ.ಸಂ.ನಂ.ಪು.ವಿ/ಸ್ವ.ಭಾ.ಮಿ.ಎಸ್.ಎಫ್.ಸಿ.ಕು.ನೀ.ಸ.ಪ.ಅ.ಎಸ್.ಎಫ್.ಸಿ.15ನೇ ಹ.ಆ/ಟಿ–08/2024–25
ದಿನಾಂಕ: 14/11/2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ವಿರಾಜಪೇಟೆ ಪುರಸಭೆಗೆ ಸ್ವಚ್ಛ ಭಾರತ್ ಯೋಜನೆಯಡಿ ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ಅನುಮೋದಿತ ವಿಸ್ತೃತ ಯೋಜನಾ ವರದಿಯಂತೆ ಬಿಡುಗಡೆಯಾದ ಅನುದಾನದಡಿ 2023–24 ನೇ ಸಾಲಿನ ಎಸ್.ಎಫ್.ಸಿ ಅನುದಾನದ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ಅನುದಾನ, 2024–25 ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನ ಮತ್ತು 2022–23, 2024–25 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿಯಲ್ಲಿ, ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000, ಹಾಗೂ ತಿದ್ದು ಪಡಿ ನಿಯಮ 2001ಕ್ಕೆ ಒಳಪಟ್ಟು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ 1ರ ನಿಯಮಗಳಿಗನುಸಾರ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.kppp.karnataka.gov.in ವೆಬ್ ಸೈಟ್ ಮೂಲಕ ಪಡೆದು ಕೊಂಡು ನಂತರ ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

1. ಟೆಂಡರ್ ಫಾರಂಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ: 14/11/2024 ರಿಂದ 30/11/2024 ಸಂಜೆ 17:30 ಗಂಟೆಗೆ
2. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 30/11/2024 ಸಂಜೆ 17:30 ಗಂಟೆ ವರೆಗೆ
3. ಟೆಂಡರ್ ತೆರೆಯುವ ದಿನಾಂಕ : 02/12/2024 ಬೆಳಗ್ಗೆ 11.00 ಗಂಟೆಯ ನಂತರ
4. ಟೆಂಡರುಗಳನ್ನು ತೆರೆಯುವ ಸ್ಥಳ : ವಿರಾಜಪೇಟೆ ಪುರಸಭೆ

ಕಾಮಗಾರಿಗಳ ವಿವರ, ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವೆಬ್ ಸೈಟ್:-www.virajpettown.mrc.gov.in ನಲ್ಲಿ ಮತ್ತು ಕಛೇರಿಯ ಸೂಚನಾ ಫಲಕವನ್ನು ನೋಡಬಹುದಾಗಿದೆ.

ಸಹಿ/–	ಸಹಿ/–	ಸಹಿ/–
(ಶ್ರೀಮತಿ. ಎಂ.ಕೆ ದೇಚಮ್ಮನವರ)	(ಶ್ರೀಮತಿ, ಫಸಿಹಾ ತಬಸುಮ್)	(ಶ್ರೀ ಚಂದ್ರ ಕುಮಾರ್ ಎ)
ಅಧ್ಯಕ್ಷರು, ಪುರಸಭೆ, ವಿರಾಜಪೇಟೆ.	ಉಪಾಧ್ಯಕ್ಷರು ಪುರಸಭೆ, ವಿರಾಜಪೇಟೆ.	ಮುಖ್ಯಾಧಿಕಾರಿ, ಪುರಸಭೆ, ವಿರಾಜಪೇಟೆ.